
ಕಲ್ಯಾಣ ಕಿರಣ

ಜನವರಿ, ಫೆಬ್ರವರಿ - 2001 ಬೆಲೆ - 8-00





ದಾವಣಗೆರೆಯಲ್ಲಿ ಜರುಗಿದ ಲಿಂಗಾಯತ ಧರ್ಮೀಯರ ಸಮಾವೇಶಕ್ಕೆ
ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸುತ್ತಿರುವ ಶರಣ ವೃಂದ



ಸಮಾವೇಶದ ವೇದಿಕೆ : ಎಡದಿಂದ ಬಲಕ್ಕೆ : ಶರಣ. ಶಿವಕುಮಾರ್ (ಮಾಜಿ ನಗರಸಭಾಧ್ಯಕ್ಷ),
ಶರಣ. ಬಿ.ವಿ. ಸತ್ಯನಾರಾಯಣಶೆಟ್ಟರು, ಪೂಜ್ಯ ಮಾತಾಜಿಯವರು, ಪೂಜ್ಯ ಶ್ರೀ ಚನ್ನಬಸವರಾಜ

★ ಕಲ್ಯಾಣ ಕಿರಣ ★

ಸಂಪುಟ 31 ಬಸವ ಶಕೆ 867 ಆಜೀವ ಸದಸ್ಯತ್ವ 500 ರೂ
ಸಂಚಿಕೆ 1 ಜನವರಿ-ಫೆಬ್ರವರಿ-2001 ವಾರ್ಷಿಕ ಚಂದಾ 50/- ರೂ

ಪಟ್ಟಗಟ್ಟುವ ಬನ್ನಿರಿ ಲಿಂಗಾಯತ ಧರ್ಮಕ್ಕೆ

ಪಟ್ಟಗಟ್ಟುವ ಬನ್ನಿರಿ ಲಿಂಗಾಯತ ಧರ್ಮಕ್ಕೆ ॥ಪ॥
ಧರ್ಮ ಗುರು ಬಸವಣ್ಣ ಆನಂದದಿ ಜನ್ಮವಿತ್ತ
ಲಿಂಗಾಯತವೆಂಬ ಘನ ವಿಶ್ವಧರ್ಮಕ್ಕೆ ॥ಅ.ಪ.॥
ಅಪ್ಪಬಸವಣ್ಣನ ಶ್ರೀ ಕುಮಾರನು ವಚನಾಂಬೆಯ ಶಿಶುವು
ಅನುಭವ ಮಂಟಪದ ಸಂವಾದದ ತೊಟ್ಟಿಲಲಿ
ಶರಣರೆಲ್ಲರೂ ಕೂಡಿ ಲಾಲಿಸಿ,ಬೆಳೆಸಿರುವ ॥1॥
ಅಷ್ಟಾವರಣದ ವಸ್ತ್ರವ, ಉಡಿಸುವಾ ಷಡಾಚಾರದ,
ಪರಿಮಳವ ಪೂಸುತ
ಷಟಸ್ಥಲದ ತೊಡುಗೆ ಹಾಕಿ, ಷಟ್‌ಸೂತ್ರದ ಮುಕುಟವಿಟ್ಟು
ಷಟ್‌ಶೀಲದ ಪೀಠ ನೀಡಿ ಹಾಡಿ ಕೊಂಡಾಡುತ ॥2॥
ಧರ್ಮಗುರು ಬಸವಣ್ಣಂಗೆ ಗಡಿಪಾರು ದೊರೆಯೆ,
ಧರ್ಮಕ್ಕಾಯಿತು ಸಂಕಷ್ಟ
ವೈದಿಕರು ಶೈವರು ವಿಧಿಸಿದ ವನವಾಸ
ಅಜ್ಞಾತವಾಸ ಮುಗಿಸಿ ಸಂಕೋಲೆ ಹರಿದಿಹ ॥3॥
ಸದ್ಧರ್ಮವಾಗಲೆಂದು ನಮ್ಮ ಆದಿಶರಣರು
ಮುದ್ದಿಸಿ ಬೆಳೆಸಿರುವ
ಮನುಜ ಕುಲದ ಲೇಸಿಗಾಗಿ ದುಡಿವ ಸಂಕಲ್ಪದ ತೊಟ್ಟ
ಮಾನವೀಯ ಗುಣಗಳಿಂದ ಸರ್ವರ ಹಿತವ ಬಯಸುವ ॥4॥
ವಚನಗಳ ಪುಷ್ಪಗಳ ಆನಂದದಿ
ವೃಷ್ಟಿಸುತ ಸಡಗರದಿಂದ
ಅರಿವು-ಆಚಾರಗಳ ಚಾಮರವ ಬೀಸುತ್ತ
ಸುಜ್ಞಾನದಾರತಿಯ ಬೆಳಗಿ ಜಯಜಯವೆನ್ನುತ ॥5॥
ತ್ಯಾಗ ಸಮರ್ಪಣೆಯ ಸದ್‌ಭಾವವ ಹೊಂದಿ
ಶರಣು ಶರಣೆಂದು
ತನು-ಮನ-ಧನ, ಪ್ರಾಣ-ಅಭಿಮಾನ-ಸಮಯಗಳ
ಕಾಣಿಕೆಯ ಅರ್ಪಿಸಿ ವಿಶ್ವಧರ್ಮವೇ ನೀನಾಗು ಎಂದ್ಹರಸಿ ॥6॥

-ಬಸವಾತ್ಮಜೆ

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31 ಬಸವ ಶಕೆ 867 ಆಜೀವ ಸದಸ್ಯತ್ವ 500/-
ಸಂಚಿಕೆ 1-2 ಜನವರಿ - ಫೆಬ್ರವರಿ 2001 ವಾರ್ಷಿಕ ಚಂದಾ 50 ರೂ.

ಕಿರಣಗನ್ನಡಿ

ಮುಖ ಪುಟ : ಶರಣ ಮೇಳದಲ್ಲಿ ಜನ ಸಮೂಹ

ಬೆಂಗಳೂರಿನ ಕಾರ್ಯಾಲಯದ ವಿಳಾಸ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ೨೦೩೫
೨೦ನೇ ಮೇನ್, ೨ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦

KALYANA KIRANA - Reg. No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಸಂಪಾದಕೀಯ- 1. ಆರ್.ಎಸ್.ಎಸ್. ಧೋರಣೆ

ಸಂಯುಕ್ತ ಕರ್ನಾಟಕದಲ್ಲಿ ದಿ. 14-12-2000ದಂದು ಒಂದು ಬರಹ ಪ್ರಕಟವಾಗಿದೆ. ಲಿಂಗಾಯತ ಧರ್ಮವು ಅಹಿಂದು ಧರ್ಮ. ಇದಕ್ಕೆ ಪ್ರತ್ಯೇಕ ಮಾನ್ಯತೆ ಸ್ವತಂತ್ರ ಧರ್ಮ ಎಂಬ ಮಾನ್ಯತೆ ಬೇಕು ಎಂಬ ಹೋರಾಟ ಪ್ರಾರಂಭವಾಗಿರುವಾಗಲೇ ''ಸಿಖ್ ಧರ್ಮ ಎಂಬುದೇ ಇಲ್ಲ; ಇದು ಹಿಂದೂ ಧರ್ಮದ ಒಂದು ಅಂಗ'' ಎಂದು ಆರ್.ಎಸ್.ಎಸ್‌ದ ಪಂಜಾಬ ಘಟಕವು ಪ್ರಕಟಿಸಿದೆ.

ನಾವು ದೆಹಲಿಯಲ್ಲಿದ್ದಾಗ ಒಂದು ಪ್ರಸಂಗ ನಡೆಯಿತು. ವೈದಿಕ ಪುರೋಹಿತಶಾಹಿಯವರ ಪ್ರಭಾವದಲ್ಲಿರುವ ಕೆಲವು ಜೈನರ ಮೇಲೆ ಆರ್.ಎಸ್.ಎಸ್. ವಾದಿಗಳು ಒಳಗಿಂದೊಳಗೆ ಪ್ರಭಾವ ಬೀರಿ, ''ಜೈನ ಧರ್ಮ ಅಹಿಂದು ಕಕ್ಷೆಯ ಸ್ವತಂತ್ರ ಧರ್ಮ ಎಂಬುದರ ವಿರುದ್ಧ ಹೋರಾಟ ಮಾಡಿರಿ.'' ಎಂದು ಹೇಳಿಕೆ ಕೊಟ್ಟರು. ಇದು ಕೆಲವು ತತ್ತ್ವನಿಷ್ಠ ಜೈನರ ಗಮನಕ್ಕೆ ಬಂದಿತು ಅವರೊಂದು ಸಭೆ ಕರೆದು ಹಿಂದೂವಾದಿಗಳಿಗೆ ತಾಕೀತು ಮಾಡಿದರು. ''ಈ ವಿಷಯದಲ್ಲಿ ನೀವು ಹಸ್ತಕ್ಷೇಪ ಮಾಡಕೂಡದು. ನಾವು ಹಿಂದು ವಿರೋಧಿಗಳಲ್ಲ ಮತ್ತು ಚಾಂದಿನಿ ಚೌಕ್ ಮುಂತಾದ ಭಾಗದಲ್ಲೆಲ್ಲ ಬಿ.ಜೆ.ಪಿಯನ್ನೇ ನಾವು ಬೆಂಬಲಿಸಿದ್ದೇವೆ. ಒಳಗಿಂದೊಳಗೇ ಇಂಥ ಕುತಂತ್ರ ನಡೆಸಿದರೆ ನಾವು ಸ್ಪಷ್ಟವಾಗಿ ವಿರೋಧಿಸಬೇಕಾಗುತ್ತದೆ.'' ಎಂದು ಎಚ್ಚರಿಕೆ ನೀಡಿದರು. ಆ ವ್ಯಕ್ತಿಯು ಜೈನ ಸಮಾಜದಲ್ಲಿ ಬಹಳ ಪ್ರಸಿದ್ಧ, ಪ್ರಭಾವಿ ಮುಖಂಡರು. ಕಾರಣಾಂತರದಿಂದ ಅವರ ಹೆಸರನ್ನು ನಾನು ಕಾಣಿಸಿಲ್ಲ

ಡಾ॥ ಚಿದಾನಂದ ಮೂರ್ತಿಯವರಂಥ ಯಾವುದೇ ತತ್ತ್ವನಿಷ್ಠ ಖಚಿತ ನಿಲುವು ಇಲ್ಲದ ಹಿಂದು ವಾದಿಗಳು ಎಲ್ಲ ಸಮಾಜಗಳಲ್ಲೂ ಇರುವುದರಿಂದ ಅಂಥವರನ್ನು ಬಳಸಿಕೊಂಡು ಬಿ.ಜೆ.ಪಿ. ಆರ್.ಎಸ್.ಎಸ್; ವಿ.ಹಿಂ.ಪ. ದವರು ಒಳಗೊಳಗೆ ಏನಾದರೂ ಸುಳಿಗಾಳಿಯನ್ನು ಎಬ್ಬಿಸಲು ಯತ್ನಿಸುತ್ತಿರುತ್ತಾರೆ.

ಆರ್.ಎಸ್.ಎಸ್. ಬಗ್ಗೆ ಹೊಗಳಿಕೆ

ಆರ್.ಎಸ್.ಎಸ್ ಕಾರ್ಯಕರ್ತರು ನಿಷ್ಠೆಯಿಂದ ಕೆಲಸ ನಿರ್ವಹಿಸುತ್ತಾರೆ ಎಂದು ಸನತ್‌ಹರಚಂದ್ ಸಿಂಗ್ ಮತ್ತು ಹಿರಿಯ ಪತ್ರಕರ್ತ ಖುಶ್ವಂತ್ ಸಿಂಗ್ ಅವರು ನುಡಿದ ಹೊಗಳಿಕೆಯ ಮಾತನ್ನು ಆರ್.ಎಸ್.ಎಸ್. ಕರಪತ್ರದಲ್ಲಿ ತಿಳಿಸಲಾಗಿದೆ ಎಂದು ಬರೆಯಲಾಗಿದೆ.

ಆರ್.ಎಸ್.ಎಸ್‌ದ ಶಿಸ್ತು, ರಾಷ್ಟ್ರಪ್ರೇಮ, ಸೇವಾ ಮನೋಭಾವ, ರಾಷ್ಟ್ರದ ಸಮಗ್ರತೆ-ಏಕತೆ ಮತ್ತು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಇರುವ ಕಾಳಜಿ ಅಭಿನಂದನಾರ್ಹ. ಯಾವುದೇ ಗುರಿ ಮತ್ತು ತ್ಯಾಗ ಇಲ್ಲದ ಅನೇಕ ಸಂಘಟನೆಗಳಿಗಿಂತಲೂ ಆರ್.ಎಸ್.ಎಸ್ ಬಹಳ ಆದರ್ಶಪ್ರಾಯವಾಗಿದೆ. ಇದನ್ನು ಒಪ್ಪಿಕೊಂಡು ಅಭಿನಂದಿಸಿದ ಮಾತ್ರಕ್ಕೆ ಆರ್.ಎಸ್.ಎಸ್‌ದ ಎಲ್ಲಾ ವಿಚಾರಗಳನ್ನು ನಾವು ಒಪ್ಪಿಕೊಂಡಂತೆ ಅಲ್ಲ. ಉದಾಹರಣೆಗೆ ಭಾರತಕ್ಕೆ ಕಾಶ್ಮೀರದ ಸಂಪೂರ್ಣ ಸೇರ್ಪಡೆ, ಸಮಾನ ನಾಗರಿಕ ಕಾಯಿದೆ, ಆಕ್ರಮಿತ ಕಾಶ್ಮೀರದ ಬಿಡುಗಡೆ, ಕುಟುಂಬ ಯೋಜನೆಯ ಕಾನೂನು ಎಲ್ಲ ಭಾರತೀಯರಿಗೂ ಸಮಾನವಾಗಿ ಅನ್ವಯವಾಗುವುದು. ಇಂಥ ಯಾವುದೇ ರಾಷ್ಟ್ರೀಯ ಕಾರ್ಯಕ್ರಮ ಕೈಗೆತ್ತಿಕೊಂಡರೂ ನಮ್ಮ ವಿಷಯಾಧಾರಿತ ನೈತಿಕ ಬೆಂಬಲ ಆರ್.ಎಸ್.ಎಸ್.ಗೆ.

ಆದರೆ ಇದರ ಬದಲು ಶ್ರೀರಾಮನು ರಾಷ್ಟ್ರದ ಆದರ್ಶಪುರುಷ ರಾಮನನ್ನು ಪೂಜಿಸಿರಿ, ಚಂಡಿಕಾಯಜ್ಞ ಮಾಡಿರಿ ಎಂದೆಲ್ಲ ಹೇಳಿದರೆ ನಾವು ಏಕದೇವೋಪಾಸನೆ ತೊರೆದು ಅವನ್ನು ಮಾಡಲು ಸಾಧ್ಯವಿಲ್ಲ. ಈ ಸತ್ಯವನ್ನು ಆರ್.ಎಸ್.ಎಸ್ ಮತ್ತು ಸಂಘ ಪರಿವಾರದವರು ಅರ್ಥಮಾಡಿಕೊಳ್ಳಲೇ ಬೇಕು.

ಬೌದ್ಧ, ಜೈನ, ಲಿಂಗಾಯತ, ಸಿಖ್ ಧರ್ಮಗಳು ಹಿಂದು ಕಕ್ಷೆಯಲ್ಲಿ ಇರಬೇಕೆಂದು ಸಂಘ

ಪರಿವಾ… ಮತ್ತು ಹಿಂದುವಾದಿಗಳು ಬಯಸುತ್ತಾರೆ. ಆದರೆ ನಿಜವಾದ ಪ್ರೇಮದಿಂದಲೆ?

ಒಂದು ದೃಷ್ಟಾಂತ ನೆನಪಾಗುತ್ತದೆ. ಒಂದು ಊರಿಗೆ ಓರ್ವರು ಸ್ವಾಮಿಗಳು ಬಂದರು; ಚೆನ್ನಾಗಿ ಪ್ರವಚನ ಮಾಡಿದರು. ಒಳ್ಳೆಯ ಪ್ರಭಾವ ಬೀರಿ ಜನರ ಪ್ರೀತಿ ಗಳಿಸಿಕೊಂಡರು. ಅಲ್ಲಿಯ ಜನರು ''ಸ್ವಾಮಿ ನಿಮ್ಮನ್ನು ಕಂಡರೆ ನಮಗೆ ಬಹಳ ಪ್ರೀತಿ, ಗೌರವ, ನೀವು ಇಲ್ಲಿಯೇ ಉಳಿಯಿರಿ. ಎಲ್ಲೂ ಹೋಗಬೇಡಿರಿ'' ಎಂದರು. ಸ್ವಾಮೀಜಿ ಹೇಳಿದರು, ''ನಾನು ಊರಿಂದ ಊರಿಗೆ ತಿರುಗಿ ಧರ್ಮಪ್ರಚಾರ ಮಾಡಬೇಕು. ನಿಂತ ನೀರಂತೆ ಒಂದೇ ಕಡೆ ಇರಲು ಸಾಧ್ಯವಿಲ್ಲ'' ಎಂದರು. ಆಗ ಗ್ರಾಮಸ್ಥರು ಹೇಳಿದರು, ''ನಿಮ್ಮ ಮೇಲೆ ಅಭಿಮಾನವಿಟ್ಟು ನಾವು ಇರಿ ಎಂದು ಕೇಳುತ್ತಿದ್ದೇವೆ. ನೀವು ಒಪ್ಪದಿದ್ದರೆ ಹಿಂದೆ ಓರ್ವ ಸ್ವಾಮಿಗಳಿಗೆ ಮಾಡಿದಂತೆ ಮಾಡುತ್ತೇವೆ.'' ಎಂದರು. ಆಗ ಸ್ವಾಮಿಗಳಿಗೆ ತುಂಬಾ ಆಶ್ಚರ್ಯವಾಯಿತು. ''ಹಿಂದೆ ಸ್ವಾಮಿಗಳಿಗೆ ಏನು ಮಾಡಿದಿರಿ?'' ಎಂದರು. ಆಗ ಆ ಊರಿನವರು ಹೇಳಿದರು.

''ಅವರನ್ನು ಕೊಂದು, ಇಲ್ಲೇ ಹೂತು, ಅವರ ಸಮಾಧಿ ಕಟ್ಟಿ ಪೂಜೆ ಮಾಡುತ್ತಿದ್ದೇವೆ, ಜಾತ್ರೆ ಮಾಡುತ್ತಿದ್ದೇವೆ!'' ಸ್ವಾಮಿಗಳು ದಂಗಾದರು. ಎಂಥಾ ಪ್ರೇಮ ನೋಡಿದಿರಾ!! ಇಂದು ಲಿಂಗಾಯತ ಧರ್ಮದ ಪರಿಸ್ಥಿತಿಯೂ ಹೀಗೆ ಇದೆ. ಸಮಾನತೆಯಲ್ಲಿ ವಿಶ್ವಾಸವಿಟ್ಟು ಪ್ರಗತಿಪರ ಧೋರಣೆಯ ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳೂ ಹೀಗೆ ಹುಗಿಯಲ್ಪಟ್ಟು ಹಿಂದು ಕಕ್ಷೆಯಲ್ಲಿ ಇರಬೇಕಾಗುತ್ತದೆ.

ಶೈವದ ಪರಿಸ್ಥಿತಿಯನ್ನೇ ತೆಗೆದುಕೊಳ್ಳೋಣ. ನನಗೆ ಯೋಗಿರಾಜ ಶಿವನ ಬಗ್ಗೆ ಅಪಾರ ಗೌರವ, ಭಕ್ತಿ; ಒಂದು ಬಗೆಯ ವ್ಯಾಮೋಹ ಎಂದರೂ ತಪ್ಪಲ್ಲ. ಅವನ ವ್ಯಕ್ತಿತ್ವ ಮತ್ತು ತತ್ತ್ವಗಳು ನಿಜಕ್ಕೂ ಅದ್ಭುತವಾಗಿವೆ! ಎಂಥಾ ಯೋಗಿ, ಶಾಂತಮೂರ್ತಿ, ಭಕ್ತಪ್ರೇಮಿ, ನಿಷ್ಕಲಂಕ ಮೂರ್ತಿ, ಮಹಾನ್‌ಗುರು. ಭಾರತೀಯ ಪರಂಪರೆಯ ಮೂಲಿಗ, ಸರಳ ವ್ರತಿ, ಯೋಗ-ವಿದ್ಯೆ-ನೃತ್ಯ-ಸಂಗೀತ ಬಲ್ಲಿದ; ಸಮತಾವಾದಿ. ಆದರೆ ಅಂಥ ಶಿವನಿಗೆ ಆಗಿರುವ ಗತಿ ಏನು? ಕೇವಲ ಓರ್ವ ಪೌರಾಣಿಕ ಮೂರ್ತಿಯಾಗಿ ಸ್ಥಗಿತಗೊಳಿಸಲ್ಪಟ್ಟಿದ್ದಾನೆ. ಇನ್ನು ಆ ಶಿವನ ತತ್ತ್ವಗಳೋ ತನ್ನ ಮೂಲಸ್ವರೂಪ, ಪ್ರಖರತೆ ಕಳೆದುಕೊಂಡು ವೈದಿಕ ಧರ್ಮದ ಕಬಂಧ ಬಾಹುಗಳಲ್ಲಿ ಬಂಧಿತವಾಗಿವೆ. ಎಲ್ಲ ಶಿವದೇವಾಲಯಗಳನ್ನು ವೈದಿಕ ಪುರೋಹಿತರು ಆಕ್ರಮಿಸಿಕೊಂಡು ಶಿವನ ಮೂಲ ಸಿದ್ಧಾಂತಗಳು ಸಂಪೂರ್ಣ ಶಿಥಿಲಗೊಳ್ಳುವಂತೆ ಮಾಡಿವೆ. ಜ್ಯೋತಿರ್ಲಿಂಗಗಳನ್ನು ಭಕ್ತರೇ ನೇರವಾಗಿ ಪೂಜಿಸಲಿ ಎಂದು ಆ ಮಹಾಗುರುವಿನ ಆಶಯ. ಆದರೆ ಅದಕ್ಕೆ ವಿರುದ್ಧವಾಗಿ ಜ್ಯೋತಿರ್ಲಿಂಗಗಳ ಸ್ಥಾನದಲ್ಲಿ ಬರೀ ಪುರೋಹಿತಶಾಹಿ ಮತ್ತು ವ್ಯಾಪಾರವೇ ವಿಜೃಂಭಿಸುತ್ತಿವೆ.

ಶಿವನು ಯಜ್ಞ-ಯಾಗ ವಿರೋಧಿ. ಸ್ವತಃ ತನ್ನ ಮಾವ ದಕ್ಷಬ್ರಹ್ಮನ ಯಜ್ಞವನ್ನೇ ವಿರೋಧಿಸಿದವನು. ದುರ್ದೈವವೆಂದರೆ ಇಂದು ಶಿವನ ಹೆಸರಿನಲ್ಲೇ ಯಜ್ಞ-ಯಾಗಾದಿಗಳು ನಡೆಯುತ್ತಲಿವೆ. ರುದ್ರಾಭಿಷೇಕ ಎಂದು ಮಾಡುವಾಗ ಶಿವನ ಪ್ರತಿನಿಧಿಯು, ಶಿವಭಕ್ತರ ರಕ್ಷಕನು, ಶಿವ ತತ್ತ್ವ ಪರಿಪಾಲಕನೂ ಆದ ರುದ್ರನನ್ನು ಚೋರರಗುರು, ಜಾರರ ಗುರು ಎಂದೆಲ್ಲ ಬೈಯ್ಯಲಾಗಿದೆ ಆದರೆ ಮೂರ್ಖ ಜನರು ಅದನ್ನು ಬಣ್ಣನೆ ಎಂಬುದಾಗಿ ಭಾವಿಸಿ ಅರ್ಥರಹಿತವಾಗಿ ಮಂತ್ರಗಳನ್ನು ಯಾಂತ್ರಿಕವಾಗಿ ಉಚ್ಚರಿಸುತ್ತಾರೆ. ಈ ಮೂರ್ಖರ ಸಾಲಿನಲ್ಲಿ ವೀರಶೈವ ಪುರೋಹಿತ ಶಾಸ್ತ್ರಿ-ಪಂಡಿತರೇ ಅಲ್ಲದೇ ದೊಡ್ಡ ದೊಡ್ಡ ಸ್ವಾಮಿಗಳೂ ನಿಲ್ಲುತ್ತಿದ್ದಾರೆ.

''ಅಗ್ನಿಯನ್ನು ನೀವು ದೇವರೆಂದು ಹವಿಸ್ಸು ಕೊಡುತ್ತೀರಿ. ನಾವು ಶಿವನ ಪೂಜಕರು, ಪಂಚಭೂತಗಳಲ್ಲಿ ಒಂದಾದ ಅಗ್ನಿಯನ್ನು ದೇವರೆಂದು ಮನ್ನಿಸುವುದಿಲ್ಲ. ನೋಡಿ, ತುಳಿಯುತ್ತೇವೆ.'' ಎಂದು ಶಿವಭಕ್ತನಾದ ವೀರಭದ್ರ ದಕ್ಷಬ್ರಹ್ಮನ ಅಗ್ನಿಕುಂಡ ತುಳಿದ, ನೀರು ಹಾಕಿ ಆರಿಸಿದ ಆದರೆ ಇಂದು ಮೂರ್ಖಶೈವರು, ವೀರಶೈವರು ಮೂಲಾರ್ಥವನ್ನೇ ಅರಿಯದೆ ವೀರಭದ್ರನ ಗುಗ್ಗುಳದ ಹೆಸರಲ್ಲಿ

ಅಗ್ನಿಯ ಆರಾಧನೆ ಯಜ್ಞಯಾಗಗಳನ್ನು ಮಾಡುತ್ತಾರೆ.

ಹರದ್ವಾರವೆಂಬ ಮೂಲ ಹೆಸರನ್ನು ತೆಗೆದು ವಿಶ್ವಹಿಂದೂ ಪರಿಷತ್ ಪರಿವಾರದವರು ಹರಿದ್ವಾರ ಎಂದು ಪ್ರಚಾರ ಮಾಡುತ್ತಾರೆ. ಶಿವನ ಪ್ರದೇಶವಾದ ಹರಯಾನವನ್ನು ಯಾರಿಗೂ ತಿಳಿಯದಂತೆ ಹರಿಯಾನ ಮಾಡುತ್ತಿದ್ದಾರೆ. ಶಿವನ ಸೂಚಕವಾದ ಋಷಿಕೇಶವನ್ನು ವಿಷ್ಣು ಸೂಚಕವಾದ ಹೃಷಿಕೇಶ ಮಾಡುತ್ತಿದ್ದಾರೆ. ಉತ್ತರ ಭಾರತೀಯರಲ್ಲಿ ಅಂತರ್ಗತವಾಗಿರುವ ಶಿವಭಕ್ತಿಯನ್ನು ಸೂಕ್ಷ್ಮವಾಗಿ ಶಿಥಿಲಗೊಳಿಸುತ್ತಾ ವೈಷ್ಣವ ಸಂಸ್ಕೃತಿಯನ್ನು ಹಬ್ಬಿಸುತ್ತಿದ್ದಾರೆ. ಈ ದೃಷ್ಟಿಯಿಂದ ಶಿವನ, ನಿಜ ಶೈವದ ಬಿಡುಗಡೆ ಸಹ ಆಗುವುದು ಅವಶ್ಯವಿದೆ. ಹರ ಓಂ ಅನ್ನುವವರ ಬಾಯಲ್ಲಿ ಹರಿ ಓಂ ಎನ್ನಿಸುತ್ತಿದ್ದಾರೆ. ಓಂ ನಮಃ ಶಿವಾಯದ ಬದಲು ಓಂ ನಮೋ ನಾರಾಯಣ ಎಂದು ಅಚ್ಚೊತ್ತುತ್ತಾರೆ. ದ್ರಾವಿಡರಿಗಿಂತ ಆರ್ಯರು ಆಕ್ರಮಣಕಾರಿಗಳು, ಶಿವಭಕ್ತರಿಗಿಂತ ವಿಷ್ಣು ಭಕ್ತರು ಆಕ್ರಮಣಕಾರಿಗಳು ಎಂಬುದನ್ನು ಪುರಾಣಗಳಲ್ಲಿ ಬಿಂಬಿತವಾದ ಭಾರತದ ಇತಿಹಾಸವು ಸ್ಪಷ್ಟಪಡಿಸುತ್ತದೆ. ಬಲಿ ಚಕ್ರವರ್ತಿ, ಮಹಿಷಾಸುರ, ರಾವಣ ಮುಂತಾದ ದ್ರಾವಿಡ ರಾಜರನ್ನು ಸದೆ ಬಡಿದ ಕುತಂತ್ರವನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಬಲಿ ಚಕ್ರವರ್ತಿ ಮಾಡಿದ ತಪ್ಪಾದರೂ ಏನು ? ರಾವಣನೇನೋ ಪರಸ್ತ್ರೀಯನ್ನು ಹೊತ್ತೊಯ್ದುದರಿಂದ ತಪ್ಪಿತಸ್ಥ ಎನ್ನುತ್ತಾರೆ ; ಆದರೆ ಶೂರ್ಪನಖಿಯಂತಹ ರಾಜಕುಮಾರಿಯ ಮೊಲೆಮೂಗುಗಳನ್ನು ಸೀತಾಪಹರಣಕ್ಕೂ ಮೊದಲು ಕೊಯ್ದ ರಾಮ ಲಕ್ಷಣರು ತಪ್ಪಿತಸ್ಥರಾಗರೆ ? ಹೋಗಲಿ, ಬಲಿ ಚಕ್ರವರ್ತಿ ಎಂಥಾ ಪ್ರಜಾಪ್ರೇಮಿ. ಅವನು ಯಾವ ತಪ್ಪನ್ನೂ ಮಾಡಲಿಲ್ಲ. ಮಹಾದಾನಿ, ಗುಣವಂತ, ನೀತಿವಂತ ಅಂಥವನಲ್ಲಿ ದಾನ ಕೇಳಿ, ಪಡೆದು ಅವನನ್ನು ಪಾತಾಳಕ್ಕೆ ತುಳಿದುದು (ಅಂದರೆ ಅಜ್ಞಾತನನ್ನಾಗಿ ಮಾಡಿದುದು) ಯಾವ ನ್ಯಾಯ? ಮಹಿಷಾಸುರ ದ್ರಾವಿಡ, ಶಿವಭಕ್ತ, ಶಿವಲಿಂಗವನ್ನಲ್ಲದೆ ಅನ್ಯವನ್ನು ಪೂಜಿಸೆನೆಂಬ ಏಕದೇವತೋಪಾಸಕ ಛಲವಂತ. ಆದರೆ ಬಹುದೇವತೋಪಾಸನೆ ಒಪ್ಪದ ಅವನನ್ನು ರಾಕ್ಷಸನೆಂದು ಕರೆದು ವಧಿಸಿದುದು ಯಾವ ನ್ಯಾಯ?ಪುರಾಣಗಳ ತುಂಬ ಇಂಥ ಆರ್ಯ-ದ್ರಾವಿಡ ಸಂಘರ್ಷ, ದ್ರಾವಿಡರನ್ನು ಅನಾರ್ಯರು, ದಸ್ಯುಗಳು, ರಾಕ್ಷಸರು ಎಂದು ಮೂದಲಿಸುವಿಕೆ ಆರ್ಯರಿಂದ ತಳ್ಳಲ್ಪಟ್ಟ ದ್ರಾವಿಡರು ವಿಂಧ್ಯ ಪರ್ವತವನ್ನು ದಾಟಿ ಬಂದು ನೆಲೆಸಿದ ದಕ್ಷಿಣ ದಿಕ್ಕನ್ನೇ ವೈದಿಕ ಶಾಸ್ತ್ರ ಪುರಾಣಗಳನ್ನು ಕೀಳೆಂದು, ಅಮಂಗಲವೆಂದು ಪರಿಗಣಿಸುವ ಧಾರ್ಷ್ಟ್ಯ ; ಇಂಥ ಎಲ್ಲ ಅಸಂಬದ್ಧತೆಗಳನ್ನು ಅಳವಡಿಸಿಕೊಂಡ ಶೈವರ ಮತ್ತು ವೀರಶೈವ ಸ್ವಾಮಿಗಳ ಮೂಢತನ ಒಂದೇ ಎರಡೇ !

ಈ ಗೊಂದಲದಿಂದ ಭಾರತೀಯ ಪರಂಪರೆಯ ಮೂಲಪುರುಷ ಯೋಗಿರಾಜ ಶಿವನ ಐತಿಹಾಸಿಕ ವ್ಯಕ್ತಿತ್ವವನ್ನು ಪ್ರತಿಷ್ಠಾಪಿಸುವ ಬಯಕೆ ನನ್ನಲ್ಲಿ ಅದಮ್ಯವಾಗಿದೆ. ಆದರೆ ಅದು ಸಾಧ್ಯವೇ? ಹಿಂದು ಗೊಂಡಾರಣ್ಯದಿಂದ, ಪುರೋಹಿತಶಾಹಿಗಳ ಕೈಯಿಂದ ಆ ನಿಷ್ಕಲಂಕ ನಿಲುವಿನ ಯೋಗಿರಾಜನನ್ನು ಬಿಡುಗಡೆ ಮಾಡಿ ಬುದ್ಧ, ಏಸುಗಳಂತೆ ಓರ್ವ ಐತಿಹಾಸಿಕ ಯುಗಪುರುಷ ಎಂದು ಪ್ರತಿಷ್ಠಾಪಿಸುವುದು ತೀರಾ ಅಸಾಧ್ಯ. ಅದಕ್ಕೆ ಬೇಕಾದ ಸಮಯ, ಆಯುಷ್ಯ ನಮ್ಮಲಿಲ್ಲ. ಹೀಗಾಗಿ ಈಗ ನಮ್ಮ ಧ್ಯೇಯವನ್ನು ಸೀಮಿತಗೊಳಿಸಿಕೊಂಡು ಕೇವಲ ಬಸವ ಧರ್ಮ ವಿಮೋಚನೆಗಾಗಿ ಪ್ರಯತ್ನ ಮಾಡಬೇಕಾಗಿದೆ. ಲಿಂಗಾಯತ ಸಮಾಜದಲ್ಲಿರುವ ಪುರೋಹಿತಶಾಹಿಗಳು ಮತ್ತು ವೀರಶೈವವಾದಿಗಳಿಂದ, ಅವರ ಹಿಂಬಾಲಕರಾದ ಮೂಢ ಮತ್ತು ಶ್ರೀಮಂತಶಾಹಿಗಳ ಕಪಿಮುಷ್ಠಿಯಿಂದ ಲಿಂಗಾಯತ ಧರ್ಮವನ್ನು ವಿಮೋಚನೆಗೊಳಿಸುದೇ ಹರ ಸಾಹಸವಾಗಿರುವಾಗ ಇನ್ನು ಇಡೀ ಹಿಂದೂ ಸಮಾಜದ ಮೂಢ ಪರಿಸರದಿಂದ ಯೋಗಿರಾಜ ಶಿವನನ್ನು ಉತ್ಥಾನಗೊಳಿಸುವುದು ಕಷ್ಟಸಾಧ್ಯವಲ್ಲ ಅಸಾಧ್ಯವೇ ಸರಿ.

ಹಿಂದು ವಿವರಣೆ ನೀಡುವಾಗ ಇದು ಒಂದು ಧರ್ಮವಲ್ಲ ಹಲವಾರು ಧರ್ಮಗಳ ಒಕ್ಕೂಟ ಎಂದು ಆರ್.ಎಸ್.ಎಸ್‌ನವರು ಎನ್ನುತ್ತಾರೆ. ಈ ದೃಷ್ಟಿಯಿಂದಲೇ ಲಿಂಗಾಯತರೂ ಹಿಂದು ಕಕ್ಷೆಯಲ್ಲಿ

ಬರುತ್ತಾರೆ. ಎಂದು ನಾವು ಈವರೆಗೂ ಪ್ರತಿಪಾದಿಸುತ್ತಲಿದ್ದುದು. ಆದರೆ ಪ್ರತಿ ಹೆಜ್ಜೆಯಲ್ಲೂ ವೈದಿಕ ಆಚರಣೆಗಳನ್ನೇ ಹಿಂದು ಆಚರಣೆಗಳು ಎಂದು ಪ್ರಚಾರ ಮಾಡುತ್ತಾರೆ. ಗೌರಿ-ಗಣೇಶನ ಪೂಜೆ, ನವಗ್ರಹ, ದೇವಿ ಪೂಜೆ ಹೋಮ-ಹವನ ಇವೆಲ್ಲ ಹಿಂದು ಆಚರಣೆ ಎಂದು ಬೋಧಿಸುತ್ತಾರೆ. ಇದರಿಂದ ಪ್ರಭಾವಿತರಾದ ಲಿಂಗಾಯತರು ಸ್ವಧರ್ಮ ತಿಳಿಯದೆ ಅಂಗದ ಮೇಲೆ ಲಿಂಗಧರಿಸಿಯೂ ಸಹ ಗೌರಿ-ಗಣೇಶ, ನವಗ್ರಹ, ದೇವಿ ಮುಂತಾಗಿ ಪೂಜಿಸಿ ತಮ್ಮ ಧರ್ಮಗುರುವಿನ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಆರ್.ಎಸ್.ಎಸ್.ದಲ್ಲಿ ಹೆಚ್ಚಿನ ಜನ ಗಂಡುಮಕ್ಕಳು ಕೆಂಪು ಬಣ್ಣದ ಕುಂಕುಮವನ್ನು ಹಣೆಯ ಮೇಲೆ ನಾಮದಂತೆ ಎಳೆದುಕೊಳ್ಳುತ್ತಾರೆ. ಇದೇ ಹಿಂದು ಸಂಸ್ಕೃತಿ ಎಂದು ಭಾವಿಸಿ ಸ್ವಧರ್ಮದ ಲಾಂಛನವಾದ ವಿಭೂತಿಯನ್ನು ಬಿಟ್ಟು, ಕೆಲವೊಮ್ಮೆ ಅದರ ಮೇಲೆಯೇ ಭಯಂಕರವಾಗಿ ಕುಂಕುಮ ಬಳಿದುಕೊಳ್ಳುತ್ತಾರೆ. ಇದು ಶರಣರ ಸಂಸ್ಕೃತಿಗೇ ವಿರುದ್ಧ ಧರ್ಮಾಚರಣೆ. ಇಷ್ಟಲಿಂಗಧಾರಿ ಸ್ವಾಮಿಗಳು, ಮಠಾಧೀಶರು, ಧಾರ್ಮಿಕ ವಿಧಿವಿಧಾನ ನಿರ್ವಹಿಸುವ ಲಿಂಗಾಯತ ಪುರೋಹಿತರು ಸಹ ಹೋಮ-ಹಮನ ಮುಂತಾದ ಸ್ವಧರ್ಮ ವಿರೋಧಿ ಆಚರಣೆ ಮಾಡುವುದು ನೋಡಿದಾಗ ಇವರು ಗುರು (ಬಸವ) ದ್ರೋಹ, (ಇಷ್ಟ)ಲಿಂಗದ್ರೋಹ, ಜಂಗಮ (ಸಮಾಜ) ದ್ರೋಹ ಮಾಡುವರಲ್ಲ ಎಂದು ಅತೀವ ಸಂಕಟವಾಗುತ್ತದೆ. ಆದ್ದರಿಂದ ಒಂದು ಶ್ರೇಷ್ಠ, ಸುಸಜ್ಜಿತ, ಸುಸಂಸ್ಕೃತ ಪ್ರಗತಿಪರ ಧರ್ಮದ ಅನುಯಾಯಿಗಳಾದ ಲಿಂಗಾಯತರು ತಮ್ಮ ಧರ್ಮಾಚರಣೆಯ ದೃಷ್ಟಿಯಿಂದ ಇಂದು ಹಿಂದು ಕಕ್ಷೆಯಿಂದ ಹೊರಹೋಗಿ ಪ್ರತ್ಯೇಕ ಧರ್ಮವಾಗಿ ಗುರುತಿಸಿಕೊಳ್ಳುವುದು ಅತ್ಯಂತ ಅಗಶ್ಯಕವಿದೆ.

ವೈದಿಕ ಹಿಂದೂವಾದಿಗಳು ಧರ್ಮಗುರು ಬಸವಣ್ಣವನರು ಕೊಟ್ಟ 1. ಏಕದೇವೋಪಾಸನೆ 2. ಸಮತಾವಾದ 3. ಯಜ್ಞ-ಯಾಗ ,ಹೋಮ-ಹವನ ನಿಷೇಧ 4. ದೇವರ ಹೆಸರಲ್ಲಿ ಪ್ರಾಣಬಲಿ ನಿಷೇಧ 5. ಬೆತ್ತಲೆ ಸೇವೆ, ದೇವರಿಗೆ ಕೂದಲು ಕೊಡುವುದು 6. ಪಂಚ ಸೂತಕ ನಿರಾಕರಣ 7. ಪಂಚಾಂಗ-ವಾಸ್ತು-ನವಗ್ರಹ ಪೂಜೆ ನಿರಾಕರಣೆ ಇತ್ಯಾದಿ ಯಾವುವನ್ನೂ ಆಚರಿಸಲು ಸಿದ್ದರಿಲ್ಲ. ಅಂದಾಗ ವೈದಿಕ ಹಿಂದೂದ ಕಕ್ಷೆಯಲ್ಲಿ ಕ್ರಾಂತಿಕಾರಿಯಾದ ಲಿಂಗಾಯತ ಧರ್ಮ ಅದೆಂತು ಇರಲು ಸಾಧ್ಯ? ಬೌದ್ಧ-ಜೈನ ಮತ್ತು ಲಿಂಗಾಯತ-ಸಿಖ್ ಧರ್ಮಗಳು ಸಮಾನ ಗುಣಲಕ್ಷಣಗಳಿಂದ ಕೂಡಿದ್ದು ವೈದಿಕ ಹಿಂದು ವಿಚಾರಧಾರೆಗೆ ಪ್ರತಿದ್ವಂದ್ವಿಯಾಗಿವೆ. ಈ ಕಟುಸತ್ಯವನ್ನು ಅರಗಿಸಿಕೊಳ್ಳುವ ಕಾಲ ಸಂಪ್ರಾಪ್ತವಾಗಿವೆ. ಒಂದು ವೇಳೆ ಲಿಂಗಾಯತರು, ಸಿಖ್‌ರು,ಜೈನರು, ಬೌದ್ಧರು, ಹಿಂದು ಕಕ್ಷೆಯಲ್ಲಿ ಉಳಿಯಲೇಬೇಕೆಂಬ ಮಮಕಾರ ಆರ್.ಎಸ್.ಎಸ್-ವಿಶ್ವಹಿಂದೂ ಪರಿಷತ್-ಭಾಜಪದವರದ್ದು ಆಗಿದ್ದರೆ ಇದಕ್ಕೆ ಶ್ರೇಷ್ಠ ಪರಿಹಾರವಿದೆ.

1. ಹಿಂದು ಒಂದು ಧರ್ಮ ಎಂದು ಜನಗಣತಿ ಫಾರ್ಮದಲ್ಲಿ ಘೋಷಿಸಲಾಗಿರುವುದನ್ನು ತೆಗೆಸಿ ಅಲ್ಲಿ ವೈದಿಕ ಅಥವಾ ಸನಾತನ ಧರ್ಮ ಎಂದು ಘೋಷಿಸುವಂತೆ ಮಾಡುವುದು. ಹಿಂದು ಒಂದು ಧರ್ಮವಾಗದೆ ಹಲವಾರು ಧರ್ಮಗಳ ಒಕ್ಕೂಟವಾದರೆ ಆಗ ವೈದಿಕ ಹಿಂದುಗಳಂತೆ ಲಿಂಗಾಯತ ಹಿಂದು, ಜೈನ ಹಿಂದು, ಬೌದ್ಧಹಿಂದು,ಸಿಖ್ ಹಿಂದು, ಶೈವ ಹಿಂದು-ಇವರೆಲ್ಲರು ಹಿಂದು ಕಕ್ಷೆಯಲ್ಲಿ ಉಳಿಯುವರು.

2. ಭಾರತ ದೇಶಕ್ಕೆ ಹಿಂದು ಸ್ಥಾನ ಎಂದು ಮರುನಾಮಕರಣ ಮಾಡುವುದು. ಇದು ಇನ್ನೂ ವಿಶಾಲ. ಆಗ ವೈದಿಕರು, ಶೈವರು, ಬೌದ್ಧರು, ಜೈನರು, ಲಿಂಗಾಯತರು, ಸಿಖ್ಖರು ಮಾತ್ರವಲ್ಲ ಭಾರತೀಯ ಕ್ರಿಸ್ತ ಮುಸ್ಲಿಂ, ಪಾರ್ಸಿ, ಯಹೂದಿಗಳು ಸಹ ಹಿಂದುಸ್ಥಾನಿಗಳೇ ಎನ್ನಿಸಿಕೊಳ್ಳುವರು. ಈ ಹೋರಾಟವನ್ನು ಆರ್.ಎಸ್.ಎಸ್ ಕೈಗೆತ್ತಿಕೊಳ್ಳಲಿ. ಇದಕ್ಕೆ ನಮ್ಮ ಪೂರ್ಣ ಬೆಂಬಲವಿದೆ. ಜೈ ಹಿಂದುಸ್ಥಾನ್.

-ಮಾತಾಜಿ

ಬ್ರಿಟಿಷರು ಬಿತ್ತಿದ ಭೇದದ ಬೀಜ

-ಡಾ. ಎಂ. ಚಿದಾನಂದಮೂರ್ತಿ

ಹನ್ನೊಂದು ಹನ್ನೆರಡನೆಯ ಶತಮಾನಗಳಿಂದ ತಾವು ವೇದಗಳನ್ನು ಕಲಿತು, ಸ್ತ್ರೀಯರಿಗೆ, ಶೂದ್ರರಿಗೆ, ದಲಿತರಿಗೆ ವೇದಗಳನ್ನು ಕಲಿಸಿ, ಬ್ರಾಹ್ಮಣರಿಗೆ ಸರಿಸಮಾನ ಪಾಂಡಿತ್ಯವನ್ನು ಸಂಪಾದಿಸಿ, ವೇದಗಳಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದು, ಜೊತೆಗೆ ಕನ್ನಡ ವಾಙ್ಮಯವನ್ನು ಬೆಳೆಸಿದ ವೀರಶೈವರು ಆತ್ಮ ವಿಶ್ವಾಸವನ್ನೂ ಬೆಳೆಸಿಕೊಂಡರು.

ವೀರಶೈವರು ಸೇರಿದಂತೆ ಎಲ್ಲ ಬ್ರಾಹ್ಮಣೇತರರನ್ನೂ ಬ್ರಾಹ್ಮಣರು "ಶೂದ್ರ"ರೆಂದು ಭಾವಿಸಿ ಕಡೆಗಣಿಸಿದಾಗ ಬ್ರಾಹ್ಮಣರ ಮೇಲ್ಮೆಗೆ ಸವಾಲು ಹಾಕಿದವರು ವೀರಶೈವರು. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ನಡೆದ ಪ್ರಸಿದ್ಧ ಪರಳಿ, ಬನವಾಸಿ ಮೊಕದ್ದಮೆಗಳಲ್ಲಿ ತಮ್ಮನ್ನು "ಲಿಂಗಿ ಬ್ರಾಹ್ಮಣ"ರೆಂದು ಕರೆದುಕೊಂಡು ಬ್ರಾಹ್ಮಣರಿಗೆ ಮಾತ್ರವಲ್ಲ, ತಮಗೂ ವೇದಾಧಿಕಾರವಿದೆಯೆಂದು ಪ್ರತಿಪಾದಿಸಿ ಗೆದ್ದರು. ತಾವು ಶೂದ್ರರಲ್ಲ, ತಾವು ವರ್ಣ ವ್ಯವಸ್ಥೆಗೆ ಸೇರದೆ ಇರುವ ಹಿಂದೂಗಳು, ಹಿಂದೂ ಧರ್ಮದ ವರ್ಣಾತೀತ ವರ್ಗದವರು ಎಂದು ಹೆಮ್ಮೆಯಿಂದ ಹೇಳಿಕೊಂಡರೇ ಹೊರತು 1900ರವರೆಗೆ ಎಲ್ಲಿಯೂ ಅವರು ತಾವು ಹಿಂದೂಗಳಲ್ಲವೆಂದು ಹೇಳಿಕೊಳ್ಳಲಿಲ್ಲ.

ಬ್ರಿಟಿಷ್ ಅಧಿಕಾರಿಯ ಕುಯುಕ್ತಿ : ಮುಂಬೈ ಬ್ರಿಟಿಷ್ ಸರ್ಕಾರವು 1901ಕ್ಕಿಂತ ಮುಂಚಿನ ಜನಗಣತಿಗಳಲ್ಲಿ ವೀರಶೈವರನ್ನು ಶೂದ್ರ ವರ್ಗಕ್ಕೆ ಸೇರಿಸಿದ್ದನ್ನು ಕಿತ್ತೂರು (ಮುಂಬೈ) ಕರ್ನಾಟಕದ ವೀರಶೈವರು ಸಹಜವಾಗಿಯೇ ವಿರೋಧಿಸಿದರು. 1901ರಲ್ಲಿ ಮುಂಬೈ ಸರ್ಕಾರವು ರಾಜ್ಯದ ಬೇರೆ ಬೇರೆ ಜನಾಂಗಗಳ ಯಾದಿಯನ್ನು ಸಿದ್ಧಪಡಿಸಲು ರೆಜಿನಾಲ್ಡ್ ಎಡ್ವರ್ಡ್ ಎಂಥೋವೆನ್ (Enthoven) ಎಂಬ ಅಧಿಕಾರಿಗೆ ಜವಾಬ್ದಾರಿಯನ್ನು ವಹಿಸಿತು. ಆಗ ಸೊಲ್ಲಾಪುರದ ವಾರದ ಮಲ್ಲಪ್ಪ, ಮೈಸೂರಿನ ಯಜಮಾನ್ ವೀರಸಂಗಪ್ಪ, ಧಾರವಾಡದ ಚನ್ನಮಲ್ಲಪ್ಪ ತೆಂಗಿನಕಾಯಿ ಇವರ ಉಪಸಮಿತಿ ನಡೆಸಿದ ಚರ್ಚೆ ಹಾನಗಲ್ಲ ಕುಮಾರಸ್ವಾಮಿಗಳ ಮಾರ್ಗದರ್ಶನ, ಕಾನೂನು ತಜ್ಞ ಹಾಲಭಾವಿಯವರ ಸಲಹೆ ಪಡೆದು ಸಿದ್ಧವಾದ ವರದಿಯನ್ನು ವೀರಶೈವರು ಎಂಥೋವೆನ್‌ಗೆ ಕಳುಹಿಸಿದರು. ವೀರಶೈವರನ್ನು (ಲಿಂಗಾಯತ) "ವರ್ಣಾತೀತ ಹಿಂದೂ ಜನಾಂಗಕ್ಕೆ ಸೇರಿದ ಒಂದು ಶ್ರೇಷ್ಠ ವರ್ಗ"ವೆಂದು ಪರಿಗಣಿಸಲು ಆ ವರದಿ ಕೇಳಿಕೊಂಡಿತ್ತು. ವೀರಶೈವರು ಶೂದ್ರರಲ್ಲವೆಂಬ ಮಾತು ಎಂಥೋವೆನ್ನನಿಗೆ ಒಪ್ಪಿತವಾದರೂ, ವೀರಶೈವರು ಹಿಂದೂಗಳೇ ಅಲ್ಲವೆಂಬ ತನ್ನ ಹೊಸ ಮಾತನ್ನು ತನ್ನ ವರದಿಯಲ್ಲಿ ಸೇರಿಸಿದನು. ಆ ವರದಿಯ ಕನ್ನಡ ಅನುವಾದವು ಪ್ರಕಟವೂ ಆಯಿತು. (1910) ಅದೇ ಎಂಥೋವೆನ್ನನು ಲಿಂಗಾಯತರ ಬಗ್ಗೆ "ಎನ್‌ಸೈಕ್ಲೊಪಿಡಿಯ ಆಫ್ ರಿಲಿಜನ್ ಆಂಡ್ ಎಥಿಕ್ಸ್"ಗೆ ಲೇಖನ ಬರೆದು (1915-8) ಹೀಗೆ ಹೇಳಿದ್ದಾನೆ. "ವೀರಶೈವರು ಹಿಂದೂಧರ್ಮದ ಶಾಂತಿಪ್ರಿಯ ಧರ್ಮನಿಷ್ಠ ವರ್ಗದವರೆಂದು ಸಾಮಾನ್ಯವಾಗಿ ಭಾವಿಸಲಾಗಿದ್ದರೂ ಅವರು ಹಿಂದೂಗಳೆಂದು ಭಾವಿಸುವುದು ಸರಿಯಲ್ಲ". ತಾವು ಹಿಂದೂಗಳೆಂದು ವೀರಶೈವರೇ ಸ್ವತಃ ಹೇಳಿಕೊಂಡರೂ ಕ್ರಿಶ್ಚಿಯನ್ ಅಧಿಕಾರಿಗೆ ಅದು ಸರಿಯೆಂದು ಅನ್ನಿಸಲಿಲ್ಲ. ಅಥವಾ ಅವನಿಗೆ ಸರಿಬರಲಿಲ್ಲ. ಅದು ಅವನ ಬ್ರಿಟಿಷ್ ಸರಕಾರದ ಒಳ ಉದ್ದೇಶಕ್ಕೆ ಸಹಾಯಕವಾಗಿರಲಿಲ್ಲ.

ಫ್ರೇಜರ್-ಕೊಡವರ ಬಗ್ಗೆ : ಅದಕ್ಕೆ ಮುನ್ನ, 1834ರಲ್ಲಿ ಜನರಲ್ ಫ್ರೇಜರನು "ಕೊಡವರಿಗೆ ಹಿಂದೂ ಧರ್ಮದ ಬಗ್ಗೆ ಮಮತೆ ಇಲ್ಲವಾದ್ದರಿಂದ ಕೊಡಗು ಪ್ರದೇಶವು ಕ್ರಿಶ್ಚಿಯನ್ ಮತಾಂತರಕ್ಕೆ ಪ್ರಶಸ್ತ ರಾಜ್ಯ"ವೆಂಬ ವರದಿಯನ್ನು ಲಂಡನ್ನಿಗೆ ಕಳುಹಿಸಿದ್ದನು. ಅವನ ಸೂಚನೆ ಗ್ರಹಿಸಿದ ರೆ. ಮೊಗ್ಲಿಂಗನು 1885ರ ಸುಮಾರಿನಲ್ಲಿ ಕೊಡಗಿನಲ್ಲಿ ಮತಾಂತರಕ್ಕೆ ಕೈ ಹಾಕಿದರೂ ಅಷ್ಟು ಯಶಸ್ವಿಯಾಗಲಿಲ್ಲ. ಹಿಂದೂಗಳೇ ಆಗಿದ್ದ ಸಿಖ್ಖರ ಮತ್ತು ಇತರ ಹಿಂದೂಗಳ ಮಧ್ಯೆ ಭೇದ ಭಾವವನ್ನು

ತಂದು ಹಾಕಲು ಬ್ರಿಟಿಷ್ ಅಧಿಕಾರಿಗಳು ನಡೆಯಿಸಿದ ಪ್ರಯತ್ನವನ್ನು ರಾಮ್ ಸ್ವರೂಪ್ ಹೇಳಿದ್ದಾರೆ. ಮುಂದೆ ಫಲಗಳನ್ನು ಅದು ನೀಡಿತು. ಹಿಂದೂಗಳೆಂದರೆ ಬ್ರಾಹ್ಮಣರು ಎಂಬುದನ್ನು ಹುಟ್ಟುಹಾಕಿ, ಬ್ರಾಹ್ಮಣರು ಉಳಿದವರನ್ನು ಸ್ವಲ್ಪ ಕೀಳಾಗಿ ನೋಡುತ್ತಿದ್ದುದನ್ನು ಬಂಡವಾಳ ಮಾಡಿಕೊಂಡು ಬ್ರಾಹ್ಮಣರ ಮತ್ತು ಉಳಿದ ಹಿಂದೂಗಳ ಮಧ್ಯೆ ಭೇದವನ್ನು ಕಲ್ಪಿಸುವಲ್ಲಿ ಬ್ರಾಹ್ಮಣೇತರರು ಹಿಂದೂಗಳೇ ಅಲ್ಲವೆಂದು ಹೇಳುವಲ್ಲಿ ಬ್ರಿಟಿಷರ ಒಂದು ಯುಕ್ತಿ ಸ್ಪಷ್ಟವಾಗಿದೆ : ತಮ್ಮ ಆಳಿಕೆ ಮತ್ತು ತಮ್ಮ ಧರ್ಮಗಳು ಭಾರತದಲ್ಲಿ ನೆಲೆಗೊಳ್ಳುವಂತೆ ಮಾಡುವುದು.

ಭೇದದ ಬೀಜ ಮೊಳೆತು ಹೂ ಬಿಟ್ಟಿದೆ.

ವೀರಶೈವರು ಹಿಂದೂಗಳಲ್ಲವೆಂಬ ಬ್ರಿಟಿಷರು ಬಿತ್ತಿದ ಬೀಜ (1905) ತಕ್ಷಣ ಮೊಳಕೆ ಕಾಣಲಿಲ್ಲ. ಅಖಿಲ ಭಾರತ ವೀರಶೈವ ಮಹಾಸಭೆಯ 1904ರ ಗೊತ್ತುವಳಿ ಹೀಗಿದೆ. ವೀರಶೈವ ಮತವು ನಿಗಮಾಗಮೋಪನಿಷದ್ಭಾಷ್ಯ ಪ್ರತಿಪಾದಿತ ತತ್ತ್ವದಿಂದ ಅನುಪಸಂಸಿದ್ಧವೆಂತಲೂ ಶ್ರೀ ಬಸವೇಶ್ವರ ದೇವರು ಈ ಮತವನ್ನು ಪ್ರಚುರಪಡಿಸಿದವರೇ ಹೊರತು ಸ್ಥಾಪಕರಲ್ಲವೆಂಬುದು ಶಿಲಾ ಲೇಖಾದಿ ಪ್ರಮಾಣಗಳಿಂದ ಸಿದ್ಧವಾಗುತ್ತದೆಂತಲೂ ಈ ಮಹಾಸಭೆಯವರು ಖಂಡಿತವಾಗಿ ಹೇಳುತ್ತಾರೆ. ಅದೇ ಮಹಾಸಭೆಯ 1908ರ ಗೊತ್ತುವಳಿಯೂ ಅದನ್ನೇ ಪುನರುಚ್ಚರಿಸಿದೆ. ಎಂಥೋವೆನ್ 'ಧೊರೆ'ಯು ವೀರಶೈವರು ಶೂದ್ರರಲ್ಲವೆಂಬುದನ್ನು ಒಪ್ಪಿದ್ದು ಮಾತ್ರ ಮಹಾಸಭೆಗೆ ಸಂತೋಷವನ್ನುಂಟುಮಾಡಿತು. ಎಲ್ಲಿಯವರೆಗೆ ವೀರಶೈವ ಸಮಷ್ಟಿ ಮನಸ್ಸು ಮುಗ್ಧ ಸಮಾಜೋ ಧಾರ್ಮಿಕ ಸ್ವರೂಪದ್ದಾಗಿದ್ದಿತೋ ಅಲ್ಲಿಯವರೆಗೆ ತನ್ನದು ಹಿಂದೂ ಧರ್ಮವೆಂದೇ ಅದು ಭಾವಿಸಿತು. ಆದರೆ ಅದೇ ಮನಸ್ಸು ಆರ್ಥಿಕೋ ರಾಜಕೀಯ ಆಯಾಮವನ್ನು ಪಡೆದು, ಸತ್ಯ ನ್ಯಾಯ ಸಮಷ್ಟಿ ಹಿತಗಳಿಂದ ಆರ್ಥಿಕ ಅನುಕೂಲ ಅಧಿಕಾರಗಳ ಕಡೆ ಹರಿಯತೊಡಗಿದಾಗ ತನ್ನದು ಹಿಂದೂಧರ್ಮವಲ್ಲವೆಂದು ಹೇಳಿಕೊಳ್ಳತೊಡಗಿತು. 1900- 30ರ ಅವಧಿಯಲ್ಲಿ ಕಾಂಗ್ರೆಸ್ಸು "ಬ್ರಾಹ್ಮಣರ ಪಕ್ಷ"ವೆಂದು ಹಲವು ವೀರಶೈವ ಧುರೀಣರುಗಳು ಅದರಿಂದ ಮತ್ತು ಸ್ವಾತಂತ್ರ್ಯ ಹೋರಾಟದಿಂದ ದೂರವಿದ್ದುದನ್ನು ಬ್ರಿಟಿಷರು ಬೆಂಬಲಿಸಿಯೂ ಇದ್ದರು.

ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬ್ಯಾರಿಸ್ಟರ್ ಪದವಿ ಪಡೆದಿದ್ದ ಸಂಗಮೇಶ್ವರ ಸರ್ದಾರರ ಅಧ್ಯಕ್ಷತೆಯಲ್ಲಿ 1940ರಲ್ಲಿ ಕುಂಭಕೋಣಂದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನ ನಡೆಯಿತು. ಬ್ಯಾರಿಸ್ಟರ್ ಸಂಗಮೇಶರು ವೀರಶೈವರು ಹಿಂದೂಗಳಲ್ಲವೆಂದು ಘೋಷಿಸಿದರು. ಅಂತೆಯೇ ಸಮ್ಮೇಳನದ ನಿರ್ಣಯವೂ ಆಯಿತು. 1905ರಲ್ಲಿ ಬ್ರಿಟಿಷರು ಬಿತ್ತಿದ್ದ ಭೇದದ ಬೀಜವು 1940ರಲ್ಲಿ ಬ್ಯಾರಿಸ್ಟರ್ ಒಬ್ಬರ ಭಾಷಣದಲ್ಲಿ ತನ್ನ ಮೊದಲ ಚಿಗುರನ್ನು ತೋರಿಸಿ ಕ್ರಿ.ಶ. 2000ರ ಹೊತ್ತಿಗೆ ಹೂವನ್ನು ಬಿಡಲಾರಂಭಿಸಿದೆ. 1904ರಲ್ಲಿ ಮತ್ತು 1908ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ತಾಳಿದ್ದ ನಿಲುವಿನಲ್ಲಿ ಅದೇ 2000ರಲ್ಲಿ ತಾಳಿರುವ ನಿಲುವಿಗೂ ಸಂಬಂಧವೇ ಇಲ್ಲ. ಅದೇ ಮಹಾಸಭೆ ಈಗಲೂ ಇದೆ ; ಪದಾಧಿಕಾರಿಗಳು ಬೇರೆಯೇ ಆಗಿರುವುದು ಸ್ವಾಭಾವಿಕ ತಾನೇ.

ಸತ್ಯ ಯಾವುದು ? ಯಾವುದೇ ದೃಷ್ಟಿಯಿಂದ ನೋಡಿದರೂ ವೀರಶೈವರು (ಲಿಂಗಾಯತರು) ಹಿಂದೂಗಳೇ ಆಗಿದ್ದಾರೆಂಬುದು ನನ್ನ ದೃಢ ನಿಲುವಾಗಿದೆ. ಅಷ್ಟೇ ಅಲ್ಲ. ಪೂಜ್ಯ ಶಿವಕುಮಾರ ಸ್ವಾಮೀಜಿಯವರ ನಿಲುವು, ಪೂಜ್ಯರಾದ ಪಂಚ ಪೀಠಾಧ್ಯಕ್ಷರುಗಳ ನಿಲುವೂ ಅದೇ ಆಗಿದೆ. ಶ್ರೀ ಶಿವಕುಮಾರ ಸ್ವಾಮೀಜಿಯವರಂತೂ ಒಂದು ಹೆಜ್ಜೆ ಮುಂದೆ ಹೋಗಿ "ರಾಜಕಾರಣಿಗಳಿಗೆ ಹಿಂದೂ ಧರ್ಮದ ಜಾಯಮಾನವೇ ಗೊತ್ತಿಲ್ಲ" ಎಂಬ ಸ್ಪಷ್ಟೋಕ್ತಿಯನ್ನೂ ಆಡಿದ್ದಾರೆ. ಇರುಳರು, ಸೋಲಿಗರು, ಒಕ್ಕಲಿಗರು, ಕುರುಬರು, ಕೊಡವರು, ನಾಯ್ಡು, ಕಮ್ಮೆಗಳು, ಬ್ರಾಹ್ಮಣರು, ನಾಯಕರಂತೆಯೇ ವೀರಶೈವರು ನೂರಕ್ಕೆ ನೂರರಷ್ಟು ಹಿಂದೂಗಳಾಗಿರುವುದನ್ನು ಒಪ್ಪಿಕೊಂಡು ತಮ್ಮ ಸಮಾಜದ, ಇತರ ಸಮಾಜಗಳ ಪ್ರಗತಿಗೆ ಶ್ರಮಿಸುವುದೊಂದೇ ಶ್ರೇಯಸ್ಕರ ಮಾರ್ಗವಾಗಿದೆ. ★

(ಕೃಪೆ : ಪ್ರಜಾವಾಣಿ 28-11-2000)

ಡಾ|| ಚಿದಾನಂದಮೂರ್ತಿಯವರ ಗೊಬೆಲ್ಸ್ ತಂತ್ರ

ಡಾ|| ಚಿದಾನಂದ ಮೂರ್ತಿಯವರ ಬಹುಪಾಲು ವಿಚಾರಗಳನ್ನು ನಾವು ಸ್ಪಷ್ಟವಾಗಿ ವಿರೋಧಿಸುತ್ತೇವೆ. ಆದರೂ ಅಖಿಲ ಭಾರತ ವೀರಶೈವ ಮಹಾಸಭೆ ಎಂಬ ಜಾತಿವಾದಿ, ಮತಾಂಧ ಸಂಸ್ಥೆಯು ಡಾ|| ಚಿ.ಮೂ ಮತ್ತು ಡಾ|| ಜಿ.ಎಸ್.ಎಸ್ ಅವರಿಗೆ ಹಾಕಿದ ಸಾಮಾಜಿಕ, ಧಾರ್ಮಿಕ ಬಹಿಷ್ಕಾರವನ್ನು ನಾವು ಖಂಡಿಸಿ, ಇದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದು ಪ್ರತಿಭಟಿಸುತ್ತೇವೆ. ತುಮಕೂರು ರಾಷ್ಟ್ರೀಯ ಬಸವ ದಳದ ತತ್ತ್ವನಿಷ್ಠ ಶರಣ. ವೆಂಕಟೇಶ್ ಲಿಂಗಾಯತ ಎಂಬುವವರು ಶರಣ ಮೇಳದ ಚಿಂತನಗೋಷ್ಠಿಯಲ್ಲಿ ನನ್ನ ಪ್ರತಿಪಾದನೆಯನ್ನು ಟೀಕಿಸಿ, "ವೀರಶೈವರಾದ ಚಿದಾನಂದ ಮೂರ್ತಿಯವರಿಗೆ ವೀರಶೈವ ಮಹಾಸಭೆ ಎಂಬ ವೀರಶೈವ ಸಂಸ್ಥೆ ಬಹಿಷ್ಕಾರ ಹಾಕಿದೆ. ಇದು ಲಿಂಗಾಯತ ಧರ್ಮೀಯರಾದ ನಮಗೆ ಸಂಬಂಧವಿಲ್ಲದೆ ಇರುವ ವಿಚಾರ. ಆದ್ದರಿಂದ ಈ ಕುರಿತು ಅನ್ಯಧರ್ಮೀಯರಾದ ವೀರಶೈವರ ಬಗ್ಗೆ ಲಿಂಗಾಯತರಾದ ನಾವು ಏಕೆ ತಲೆ ಕೆಡಿಸಿಕೊಳ್ಳಬೇಕು ?" ಎಂದು ನುಡಿದರು. ವೀರಶೈವರನ್ನು ನಾವು ನೆರೆಮನೆಯವರು ಎಂದೇ ಭಾವಿಸಿದರೂ ನೆರೆಮನೆಗೆ ಬೆಂಕಿ ಹತ್ತಿದರೆ ಸುತ್ತಲಿನವರಿಗೂ ಅಪಾಯ ಎಂಬುದನ್ನು ಮನಗಾಣಬೇಕು. ಬಹಿಷ್ಕಾರ ಎಂಬ ಪ್ರಕ್ರಿಯೆ ಮತಾಂಧತೆಯ ಒಂದು ಚಟುವಟಿಕೆ ಅದನ್ನು ಬೆಳೆಯಗೊಟ್ಟರೆ ವಿಚಾರ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದು ಸಹಜ. ಅದನ್ನು ಆರಂಭದಲ್ಲೇ ವಿಮರ್ಶಿಸಬೇಕು. ಹೀಗಾಗಿ ಚಿ.ಮೂ. ಅವರಿಗೆ ವೀರಶೈವ ಮಹಾಸಭೆಯ ಅಧ್ವರ್ಯುಗಳು ಹಾಕಿದ ಬಹಿಷ್ಕಾರವನ್ನು ಖಂಡಿಸುತ್ತೇವೆ.

ಚಿ.ಮೂ. ಅವರು ಗೊಬೆಲ್ಸ್ ತಂತ್ರ ಅನುಸರಿಸುವುದರಲ್ಲಿ ಎತ್ತಿದ ಮತ್ತು ಪಳಗಿದ ಕೈ. ಜರ್ಮನಿಯಲ್ಲಿದ್ದ ಗೊಬೆಲ್ ಒಂದು ತಂತ್ರವನ್ನು ಬಳಸುತ್ತಿದ್ದ. ಅದೆಂದರೆ ಸುಳ್ಳು ವದಂತಿಗಳನ್ನು ಹಬ್ಬಿಸುವುದು, ಸುಳ್ಳು ಕಥೆ ಸೃಷ್ಟಿಮಾಡಿ ಅದಕ್ಕೆ ವಿಪರೀತ ಪ್ರಚಾರ ಕೊಟ್ಟರೆ ಕಾಲಾನಂತರದಲ್ಲಿ ಸುಳ್ಳನ್ನೇ ಸತ್ಯ ಎಂದು ಜನರು ನಂಬಿ ಬಿಡುವುದು ಸಹಜ ಎಂಬುದೇ ಆತನ ಧೋರಣೆ. ಅದೇ ರೀತಿ ಚಿ.ಮೂ ಯಾವುದೂ ಆಧಾರ-ದಾಖಲೆ ನೀಡದೆ ವಾಕ್ಯಗಳನ್ನು (ಐತಿಹಾಸಿಕ ಮತ್ತು ಸೈದ್ಧಾಂತಿಕವಾಗಿ ಅಲ್ಲ) ಬರೆಯುತ್ತಾ ಹೋಗುವರು. ಡಾ|| ಚಿದಾನಂದ ಮೂರ್ತಿ ಒಬ್ಬರು ಖ್ಯಾತ (ಕ್ಯಾತೇ ಸಂಶೋಧಕರು ಎಂಬುದನ್ನು ತಿಳಿಯದ ಜನರು) ಸಂಶೋಧಕರು, ಆದ್ದರಿಂದ ಅವರು ಯಾವ ಆಧಾರಗಳನ್ನು ಕೊಡದೆ ಇದ್ದರೇನು ಅವರಲ್ಲಿ ವಿಶ್ವಾಸವಿಟ್ಟು ನಂಬೋಣ." ಎಂದು ಜನರು ನಂಬಬೇಕಷ್ಟೆ. ಒಂದು ಸೋಜಿಗದ ಮತ್ತು ಸಮಾಧಾನದ ಸಂಗತಿ ಎಂದರೆ ಡಾ|| ಚಿ.ಮೂ ಅವರು ವಿಶ್ವಗುರು ಬಸವಣ್ಣನವರ ಅಶ್ವಾರೂಢ ಪುತ್ಥಳಿಯ ಬಳಿ ಒಂದು ದಿನದ ಧರಣಿ-ಪ್ರತಿಭಟನೆ ನಡೆಸಿದಾಗ ಅವರ ಬೆಂಬಲಕ್ಕೆ ಯಾರೂ ಬರಲಿಲ್ಲ ಎಂಬುದು. ಇಷ್ಟರ ಮಟ್ಟಿಗೆ ಲಿಂಗಾಯತ ಧರ್ಮೀಯರು ಜಾಗೃತರಾಗಿದ್ದಾರೆ ಎಂಬುದು ಗಮನಾರ್ಹ ಸಂಗತಿ.

ಭಾರತೀಯರ ಕೆಟ್ಟ ಪ್ರವೃತ್ತಿ

ಕಾಲ್ಪನಿಕ ಕಥೆಗಳನ್ನು ಸೃಷ್ಟಿಮಾಡಿ, ಪುರಾಣಗಳನ್ನು ಬರೆಯುವ ಪ್ರವೃತ್ತಿ ಈ ದೇಶದಲ್ಲಿ ಹಿಂದುಗಳಲ್ಲಿ ಎಂದಿನಿಂದಲೂ ಸಾಗಿ ಬಂದಿದೆ. ಪಾಶ್ಚಿಮಾತ್ಯರಲ್ಲೂ ಅಂಥ ಕೆಲವು ಕಥೆಗಳು ಮನರಂಜನೆಗಾಗಿ ಬರೆಯಲ್ಪಟ್ಟರೂ ಅವು ಕಾಲ್ಪನಿಕ (Fiction)ಎಂದೇ ಸೂಚನೆ ನೀಡುತ್ತಾರೆ. ಪಾಶ್ಚಿಮಾತ್ಯರು, ಐರೋಪ್ಯರು ಇತಿಹಾಸವನ್ನು ತಿರುಚಲು ಯತ್ನಿಸುವುದಿಲ್ಲ. ನಮ್ಮಲ್ಲಿ ಹಾಗಲ್ಲ. ಯಾವುದೋ ಒಂದು (ದುರ್) ಉದ್ದೇಶವನ್ನು ಮನಸ್ಸಿನಲ್ಲಿ ಇರಿಸಿಕೊಂಡು ಲೀಲಾಜಾಲವಾಗಿ ಕಥೆ ಹೆಣೆಯುತ್ತಾರೆ. ಅದರ ಮೂಲಕ ತಾವು ಸಾಧಿಸಬೇಕಾದ ಗುರಿಯನ್ನು ತಲುಪುತ್ತಾರೆ. ಇದಕ್ಕೆ ಜ್ವಲಂತ

ಉದಾಹರಣೆ ಪಂಚಾಚಾರ್ಯರ ಕಲ್ಪನೆ. 19ನೆಯ ಶತಮಾನದವರೆಗೂ ಹುಟ್ಟದೆ ಇದ್ದ ಆದಿ ಪಂಚಾಚಾರ್ಯರು ಕೈಲಾಸವಾಸಿ ಕಾಶೀನಾಥ ಶಾಸ್ತ್ರಿಗಳ ಲೇಖನಿಯಲ್ಲಿ ಹುಟ್ಟಿ, ಆಕಾಶದಲ್ಲಿ ಯಾನ ಮಾಡಿ, ಪುನಃ ಶಿಲಾಲಿಂಗಗಳಲ್ಲಿ ಅಡಗಿ, ಫೋಟೋಗಳಲ್ಲಿ ಮುದ್ರಿತರಾಗಿ, ವೀರಶೈವರ ಮನೆ ಹೊಕ್ಕು ಗೋಡೆಗಳನ್ನಲಂಕರಿಸಿ, ಲಿಂಗಾಯತ ಸಮಾಜದ ಶುಚಿತ್ವವನ್ನು ವೈಚಾರಿಕತೆಯನ್ನು ಕೆಡಿಸಿ ಬಿಟ್ಟರಲ್ಲ. ಇಂಥ ಪವಾಡಗಳು ಎಂದಾದರೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾಧ್ಯವೆ ?. ಕೈ ಚಳಕದಿಂದ ವಸ್ತುಗಳನ್ನು ತೆಗೆದುಕೊಡಬಲ್ಲ ಜಾದೂಗಾರ ಪವಾಡ ಪುರುಷನಾಗುವುದು ಭಾರತ ದೇಶ ಬಿಟ್ಟು ಬೇರೆಲ್ಲಿ ಸಾಧ್ಯ ? ಮೇರಾ ಭಾರತ ಮಹಾನ್ !

ಹೌದಪ್ಪನ (ಲಿಂಗಾಯತರ) ಚಾವಡಿಯಲ್ಲಿ ಹೌದಪ್ಪ, ಅಲ್ಲಪ್ಪನ (ವೀರಶೈವರರ) ಚಾವಡಿಯಲ್ಲಿ ಅಲ್ಲಪ್ಪನಾಗಿ ಇಬ್ಬರೂ ಸೇರಿದ ಹಿರಿಯೂರಿನಂತಹ ಸಭೆಯಲ್ಲಿ ಬೆಪ್ಪಪ್ಪರಾಗಿ, ತಪ್ಪಿಸಿಕೊಂಡು ಓಡುವ ವೀರಶೈವ ಮಹಾಸಭಾಧ್ಯಕ್ಷ ಭೀಮಣ್ಣ ಖಂಡ್ರೆ ಬೀದರ ಜಿಲ್ಲೆಯ ಒಂದು ಸಭೆಯಲ್ಲಿ ಹೇಳಿದರಂತೆ, ''ಬಸವಣ್ಣ ನಮ್ಮ ಅಪ್ಪ (ಧರ್ಮಗುರು)ಇದನ್ನು ನಂಬೋಣ. ಆದರೆ ರೇಣುಕಾಚಾರ್ಯರನ್ನು ಮುತ್ಯಾ (ಬೀದರ್ ಭಾಷೆ) ಅಜ್ಜ ಎಂದು ಏಕೆ ಭಾವಿಸಬಾರದು ? ಆಗ ಓರ್ವ ಸಾಮಾನ್ಯ ವ್ಯಕ್ತಿ ಉತ್ತರಿಸಿದನಂತೆ, ''ಹಾಗಾದರೆ ದಾರಿಯಲ್ಲಿ ಹೋಗುವ ಓರ್ವ ದಾಸಯ್ಯನನ್ನು ಗುರು ಎನ್ನೋಣ. ಏಕೆಂದರೆ ಆತ ಐತಿಹಾಸಿಕ ವ್ಯಕ್ತಿ. ಎಂದೆಂದೂ ಹುಟ್ಟಿ, ಬದುಕಿ, ಬಾಳಿರದೆ ಇರುವ ಕಾಲ್ಪನಿಕ ವ್ಯಕ್ತಿಯನ್ನು ಹೇಗೆ ನಂಬುವುದು ?'' ಈ ಸಂವಾದ ಕೇಳಿ ನನಗೆ ಸಂತೋಷವಾಯಿತು. ಇಷ್ಟಾದರೂ ಲಿಂಗಾಯತರು ಜಾಗೃತರಾದರಲ್ಲ ಎಂದು.

ಒಟ್ಟು ಮುದ್ರಣವಾದುದು ಏನೇ ಇರಲಿ, ಅದನ್ನು ಶ್ರದ್ಧೆಯಿಂದ ನಂಬುವ ಪ್ರವೃತ್ತಿ ಭಾರತೀಯರದು, ಮುಖ್ಯವಾಗಿ ಹಿಂದುಗಳದು. ಇದನ್ನು ಡಾ|| ಚಿ.ಮೂ. ಪೂರ್ಣ (ದುರ್)ಉಪಯೋಗ ತೆಗೆದುಕೊಳ್ಳುತ್ತಿದ್ದಾರೆ.

ವೀರಶೈವ ಪದವನ್ನು ಡಾ|| ಚಿ.ಮೂ ಒತ್ತಿ ಒತ್ತಿ ಬಳಸುವುದು ಸ್ವಾಗತಾರ್ಹವಾದರೂ ಮೆಲ್ಲನೆ ಕಂಸಿನಲ್ಲಿಟ್ಟು ಲಿಂಗಾಯತ ಸೇರಿಸಿ ಬಿಡುತ್ತಾರೆ. ಇದೇ ಗೋಬೆಲ್ ತಂತ್ರ. Convince-ಮನವರಿಕೆ ಮಾಡಿಕೊಡಲು ಅಸಮರ್ಥರಾದ ಅವರು Confusion-ಗೊಂದಲ ಉಂಟುಮಾಡಿ, ಈ ಗೊಂದಲ ಶಾಶ್ವತವಾಗಿ ಉಳಿಯುವಂತೆ ನೋಡಿಕೊಳ್ಳುತ್ತಾರೆ. ಕೆಲವು ವೀರಶೈವ ಆಚರಣೆಗಳನ್ನು ಲಿಂಗಾಯತದ ವಿಚಾರಗಳೊಡನೆ ಕಲಬೆರಕೆ ಮಾಡಿ ಆ ಗೊಂದಲವನ್ನು ಗಟ್ಟಿಗೊಳಿಸುತ್ತಾರೆ. ಈಗ ಈ ಎಲ್ಲ ಮಾತುಗಳನ್ನು ಸಾಧಾರಪೂರ್ವಕವಾಗಿ ವಿವರಿಸುತ್ತೇನೆ.

ಚಿ.ಮೂ. ''11-12ನೆಯ ಶತಮಾನಗಳಿಂದ ವೀರಶೈವರು ಬ್ರಾಹ್ಮಣರಿಗೆ ಸರಿಸಮಾನವಾದ ಪಾಂಡಿತ್ಯ ಗಳಿಸಿ ವೇದಗಳಿಗೆ, ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದರು.'' ಎನ್ನುತ್ತಾರೆ.

ಅಹುದು. ಅಸಾಮಾನ್ಯ ಪಾಂಡಿತ್ಯಗಳಿಸಿ ವೇದಗಳಿಗೆ, ಬ್ರಹ್ಮಸೂತ್ರಗಳಿಗೆ ವೀರಶೈವರು ಭಾಷ್ಯ ಬರೆದರು. ಏಕೆಂದರೆ ಅವರು ಬ್ರಾಹ್ಮಣರೇ ಇದ್ದರು. ಬ್ರಾಹ್ಮಣರಾಗಿ ಜನಿಸಿ ವೀರಶೈವ ದೀಕ್ಷೆ ಪಡೆದುಕೊಂಡ ಆಂಧ್ರಪ್ರದೇಶದ ಶ್ರೀಪತಿ ಪಂಡಿತರು (1072) ಶ್ರೀಕರ ಭಾಷ್ಯ ಬರೆದರು. ಶ್ರೀ ಅಪ್ಪಯ್ಯ ದೀಕ್ಷಿತರು ರಚಿಸಿದ ಶಿವಾರ್ಕಮಣಿದೀಪಿಕಾ ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾದ ಶ್ರೀಕಂಠ ಶಿವಾಚಾರ್ಯ ಮುಂತಾದವರು ಅಪ್ಪಟ ವೈದಿಕರು.

ಆದರೆ ಚಿ.ಮೂ. ಅವರ ಮತ್ತೊಂದು ಹೇಳಿಕೆ, ''ತಾವು ವೇದಗಳನ್ನು ಕಲಿತು, ಸ್ತ್ರೀಯರಿಗೆ, ಶೂದ್ರರಿಗೆ, ದಲಿತರಿಗೆ ವೇದಗಳನ್ನು ಕಲಿಸಿ, ಬ್ರಾಹ್ಮಣರಿಗೆ ಸರಿಸಮಾನ ಪಾಂಡಿತ್ಯವನ್ನು ಸಂಪಾದಿಸಿ, ಕನ್ನಡ ವಾಙ್ಮಯವನ್ನು, ಬೆಳೆಸಿದ ವೀರಶೈವರು ಆತ್ಮವಿಶ್ವಾಸವನ್ನು ಬೆಳೆಸಿಕೊಂಡರು.'' ಎಂಬುದು ಅಪ್ಪಟ ಸುಳ್ಳು.

ಡಾ|| ಚಿ.ಮೂ ಅವರಿಗಿಂತಲೂ ಹೆಚ್ಚು ಸಂಪ್ರದಾಯವಾದಿಯಾದ ಎಸ್.ಆರ್. ಸೋಮಶೇಖರ ಶರ್ಮಾ ಎನ್ನುವ ಆಂಧ್ರ ಪಂಡಿತರು. (ಪಾಲಕುರಕಿ ಸೋಮನಾಥ ಕವಿ, ಪ್ರಕಾಶಕರು, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಹುಬ್ಬಳ್ಳಿ) ಹೀಗೆ ಬರೆಯುತ್ತಾರೆ.

''ಶ್ರೀಕಂಠಾಚಾರ್ಯರು ಮಹಾವೀರಶೈವ ಆಚಾರ್ಯನು. ಇವರ ಪ್ರಕಾರ ''ಲಿಂಗಧಾರಣೆ''ಯು ವೇದಾಧ್ಯಯನಾಧಿಕಾರವಿದ್ದ ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ವಿಹಿತವಾಗಿದ್ದು ಶೂದ್ರರಿಗೆ ''ಲಿಂಗಧಾರಣೆ''ಯ ಅಧಿಕಾರವಿರುವುದಿಲ್ಲ.

''ಶೂದ್ರ ವರ್ಣದವರಿಗೆ ಲಿಂಗಧಾರಣೆ ಕರ್ನಾಟಕದಲ್ಲಿ ಬಸವಣ್ಣನ ಕಾಲದಲ್ಲಿ ಆರಂಭವಾದರೂ, ಆಂಧ್ರ ದೇಶದಲ್ಲಿ ಕ್ರಿ.ಶ. 14ನೇ ಶತಮಾನದವರೆಗೆ ಶೂದ್ರರಿಗೆ ಲಿಂಗಧಾರಣೆಯನ್ನು ಯಾವ ಆಚಾರ್ಯನೂ ಒಪ್ಪಿರಲಿಲ್ಲ.''

ಡಾ|| ಚಿ.ಮೂ. ಅವರು ಎಗ್ಗಿಲ್ಲದೆ ಸುಳ್ಳು ಹೇಳುತ್ತಾರೆ ಎಂಬುದಕ್ಕೆ ಈ ಎರಡು ಉಕ್ತಿಗಳು ಜ್ವಲಂತ ಆಧಾರವಾಗುತ್ತದೆ. ಸಮತಾವಾದಿ ಶಿವನು ಬೋಧಿಸಿದ ಲಿಂಗಪೂಜೆಯ ಅವಕಾಶವನ್ನೇ ಶೂದ್ರರಿಗೆ ತಪ್ಪಿಸಿದ ವೀರಶೈವ ಮತಾಚಾರ್ಯರು ದಲಿತರು ಹಾಗೂ ಸ್ತ್ರೀಯರಿಗೆ ವೇದಗಳನ್ನು ಕಲಿಸುವುದು ಸಾಧ್ಯವೆ ?

ಪರಳಿ ವೈಜನಾಥ ದೇವಾಲಯದಲ್ಲಿ ಲಿಂಗಾಯತ ಜಂಗಮರು ಪೂಜಾರಿಗಳಾಗಿದ್ದರು. ಆಗ ಬ್ರಾಹ್ಮಣರು ''ಈ ಜನರಿಗೆ ಜನಿವಾರ ಧಾರಣೆ ಇಲ್ಲ ; ಶೂದ್ರರು. ಆದ್ದರಿಂದ ಪೂಜೆಯ ಹಕ್ಕಿಲ್ಲ'' ಎಂದು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ ಲಿಂಗಾಯತ ಸಮಾಜದ ಅತಿರಥ ಮಹಾರಥರು ನಾವು ಲಿಂಗಿ ಬ್ರಾಹ್ಮಣರು ಎಂದು ವಾದಿಸಿದ್ದುಂಟು. ಈ ಸಂದರ್ಭದಲ್ಲಿ ನಡೆದ ಧರ್ಮ ದ್ರೋಹವನ್ನು ವಿಶ್ಲೇಷಿಸೋಣ.

1. ಲಿಂಗಾಯತರಲ್ಲಿ ಜಾತಿಗಳನ್ನು ಹುಡುಕಬಾರದು ಎಂಬ ಧರ್ಮಗುರು ಬಸವಣ್ಣನವರ ಆದೇಶ ಧಿಕ್ಕರಿಸಿ ಲಿಂಗೀ ಬ್ರಾಹ್ಮಣ, ಬ್ರಾಹ್ಮಣ-ವೀರಶೈವ, ಮಾಹೇಶ್ವರ, ಜಂಗಮ ಎಂಬ ವರ್ಗಗಳನ್ನು ಸೃಷ್ಟಿಸಿ ಪ್ರಥಮ ಪಾತಕವನ್ನು ಎಸಗಿದರು.

2. ನಮ್ಮ ಹೃದಯದೊಳಗೆ ವ್ಯಾಪ್ತವಾಗಿಹ ಪರಮ ಚೈತನ್ಯದ ಪ್ರತೀಕವಾದ ಇಷ್ಟಲಿಂಗವನ್ನು ಎದೆಯ ಮೇಲೆ ಧರಿಸಬೇಕೆಂಬ ಶ್ರೇಷ್ಠ ವಿಚಾರ ಕಡೆಗಣಿಸಿ ಅಡ್ಡಲಾಗಿ ಶಿವದಾರ ಹಾಕಿ ಅದು ಜನಿವಾರದಂತೆ ಕಾಣುವಂತೆ ಮಾಡಿ, ತುದಿಗೆ ಇಷ್ಟಲಿಂಗ ಕಟ್ಟಿ ಇಷ್ಟಲಿಂಗಕ್ಕೆ ಅಪಚಾರ ಮಾಡಿ ಲಿಂಗದ್ರೋಹ ಎಂಬ ಎರಡನೆಯ ಪಾತಕವನ್ನು ಮಾಡಿದರು.

3. ಆಂಧ್ರ ವೀರಶೈವದಲ್ಲಿ ಶಿವಲಿಂಗಧಾರಿ ಬ್ರಾಹ್ಮಣ ಗೃಹಸ್ಥನನ್ನು ಮಾಹೇಶ್ವರನೆಂದು, ಶಿವಲಿಂಗಧಾರಿ ಬ್ರಾಹ್ಮಣ ಸನ್ಯಾಸಿಯನ್ನು ಜಂಗಮನೆಂದು ಕರೆಯಲಾಗುತ್ತಿತ್ತು. ಈ ಪದಗಳನ್ನು ಲಿಂಗಾಯತ ಸಮಾಜದಲ್ಲಿ ತೂರಿಸಿ, ಭಕ್ತ-ಮಾಹೇಶ್ವರ, ಭಕ್ತ-ಜಂಗಮ ಎಂಬ ವರ್ಗಗಳನ್ನು ಸೃಷ್ಟಿಸಿ ಸಮಾಜ ದ್ರೋಹ ಎಂಬ ಮೂರನೆಯ ಪಾತಕವನ್ನು ಮಾಡಿದರು.

4. ಯಾವ ಸ್ಥಾವರ ಪೂಜೆಯನ್ನು ನಿಷೇಧಿಸಿ ಲಿಂಗಪತಿ-ಶರಣಸತಿ ಭಾವದಿಂದ ಪಾತಿವ್ರತ್ಯ ಭಕ್ತಿಯನ್ನು ಮಾಡಬೇಕು ಎಂದು ಧರ್ಮಗುರು ಬಸವಣ್ಣ-ಆದಿ ಶರಣರು ಹೇಳಿದರೂ ಅದನ್ನು ಉಲ್ಲಂಘಿಸುವ ಪರಳಿ ವೈಜನಾಥ ಎಂಬ ಸ್ಥಾವರಲಿಂಗ ಪೂಜೆಗಾಗಿ ಈ ಜನ ಎಂಥಾ ಸುಳ್ಳುಗಳನ್ನು ಸೃಷ್ಟಿ ಮಾಡಿದ್ದಾರೆ ಎಂಬುದು ತಿಳಿದಾಗ ಅಚ್ಚರಿಯಾಗುತ್ತದೆ.

ಹೊಟ್ಟೆ ಪಾಡಿಗಾಗಿ ಬರೀ ಸುಳ್ಳುಗಳನ್ನೇ ಬಿತ್ತಿ ಬೆಳೆದಿದ್ದಾರೆ ಎಂಬುದು ಇದರಿಂದ ಸಾಬೀತಾಗುತ್ತದೆ. ಸ್ತ್ರೀಯರಿಗೆ, ಶೂದ್ರರಿಗೆ, ದಲಿತರಿಗೆ ಧರ್ಮಾಧಿಕಾರ ಕೊಟ್ಟದ್ದು, ಕನ್ನಡ

ವಾಙ್ಮಯವನ್ನು ಬೆಳೆಸಿದುದು ಬಸವಣ್ಣನವರ ಲಿಂಗಾಯತ ಧರ್ಮವೇ ವಿನಾ ವೀರಶೈವವಲ್ಲ. ಚಿ.ಮೂ ಹೇಳುತ್ತಾರೆ. ''ತಾವು ಶೂದ್ರರಲ್ಲ, ತಾವು ವರ್ಣ ವ್ಯವಸ್ಥೆಗೆ ಸೇರದೆ ಇರುವ ಹಿಂದುಗಳು, ಹಿಂದೂ ಧರ್ಮದ ವರ್ಣಾತೀತ ವರ್ಗದವರು ಎಂದು ಹೆಮ್ಮೆಯಿಂದ ಹೇಳಿಕೊಂಡರೇ ಹೊರತು 1900ರವರೆಗೆ ಎಲ್ಲಿಯೂ ತಾವು ಹಿಂದೂಗಳಲ್ಲವೆಂದು ಹೇಳಿಕೊಳ್ಳಲಿಲ್ಲ.'' ಡಾ|| ಚಿ.ಮೂ ಒಂದು ವಾಕ್ಯದಲ್ಲಿ ಹೇಳಿದ್ದನ್ನು ಇನ್ನೊಂದು ವಾಕ್ಯದಲ್ಲಿ ನಿರಾಕರಿಸುತ್ತಾರೆ.

ಹಿಂದು ಸಮಾಜ ಎಂದರೆ ವರ್ಣ ವ್ಯವಸ್ಥೆಗೆ ಬದ್ಧವಾದುದು. ಹಿಂದು ಎಂದು ಹೇಳಿಕೊಳ್ಳುವವನು ನಾಲ್ಕು ವರ್ಣಗಳಲ್ಲಿ ಇಲ್ಲವೇ ಐದನೆಯ ವರ್ಣವಾದ ಅಸ್ಪೃಶ್ಯ ಸಮೂಹದಲ್ಲಿ ಸೇರಿಕೊಳ್ಳಲೇಬೇಕು. ನಾನು ಹಿಂದು, ಆದರೆ ಐದು ವರ್ಣಗಳಿಗೆ ಬದ್ಧನಾಗುವುದಿಲ್ಲ ಎಂದು ಹೇಳಲು ಯಾವ ಶಾಸ್ತ್ರವು ಅಧಿಕಾರವನ್ನು ನೀಡುತ್ತದೆ ? ವೇದ ಪ್ರಾಮಾಣ್ಯ ಒಪ್ಪದಿದ್ದರೆ ಅವನು ಹೇಗೆ ಅಹಿಂದುವೋ ವರ್ಣ ವ್ಯವಸ್ಥೆಯನ್ನು ಒಪ್ಪದಿದ್ದಾಗಲೂ ಅವನು ಅಹಿಂದುವು. ವೈದಿಕ ಧರ್ಮದ ವಕ್ತಾರರಾದ ಚಿ.ಮೂ. ಆದಷ್ಟು ಬೇಗನೆ ಜನಿವಾರಧಾರಿಗಳಾಗಿ (ಪೇಜಾವರ ಶ್ರೀಗಳು ದ್ವಿಜ ದೀಕ್ಷೆ ಕೊಡಲು ತಯಾರಾದರೆ) ವೇದಧರ್ಮದ ಪ್ರಚಾರಕರಾಗುವುದು. ಅವರ ದ್ವಂದ್ವ ನಿಲುವಿಗೆ ಪೂರ್ಣ ವಿರಾಮ ಒದಗಿಸಲು ನೆರವಾಗುತ್ತದೆ.

''ಲಿಂಗಾಯತರು ಹಿಂದೂ ಧರ್ಮದ ಶಾಂತಿಪ್ರಿಯ ಧರ್ಮನಿಷ್ಠ ವರ್ಗದವರೆಂದು ಸಾಮಾನ್ಯವಾಗಿ ಭಾವಿಸಲಾಗಿದ್ದರೂ ಅವರು ಹಿಂದೂಗಳೆಂಬು ಭಾವಿಸುವುದು ಸರಿಯಲ್ಲ.'' ಎಂದು ಎಂಥೋವೆನ್ ಎಂಬ ಬ್ರಿಟಿಷ್ ವಿದ್ವಾಂಸ ಲಿಂಗಾಯತರ ಬಗ್ಗೆ "An Encyclopedia of religion and ethics" ಗೆ ಲೇಖನ ಬರೆದು (1915-8) ಹೀಗೆ ಹೇಳಿದ್ದಾನೆ ಎಂದು ಡಾ|| ಚಿ.ಮೂ. ಉಲ್ಲೇಖಿಸುತ್ತಾರೆ.

ಎಂಥಾ ಒಂದು ಸತ್ಯವನ್ನು ಆ ವಿದ್ವಾಂಸರು 1915ರಷ್ಟು ಹಿಂದೆಯೇ ಗುರುತಿಸಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಏಕೆಂದರೆ ಆಗ ಇನ್ನೂ ಬಸವ ಪುರಾಣ, ಚನ್ನಬಸವ ಪುರಾಣ ಬಿಟ್ಟರೆ ವಚನ ಸಾಹಿತ್ಯವು ಮುದ್ರಣಗೊಂಡಿರಲೇ ಇಲ್ಲ. ಆದರೆ ಲಿಂಗಾಯತ ಸಮಾಜದವರ ಆಚಾರ-ವಿಚಾರ-ನಂಬಿಕೆ ಅವರ ಧರ್ಮಕ್ಕೆ ದರ್ಪಣ ಹಿಡಿದಿದ್ದವು. ಅದರ ಆಧಾರದ ಮೇಲೆ ಪಾಶ್ಚಿಮಾತ್ಯ ವಿದ್ವಾಂಸರು ಅಧ್ಯಯನ ಮಾಡಿ, ಅಭಿಪ್ರಾಯ ನೀಡಿದರು.

ಇಲ್ಲಿಗಾಗಲೇ ಶೈವ-ವೀರಶೈವರು ತಮ್ಮ ಲಿಂಗಾಯತ ಮುಖವಾಡ ಕಳಚಿ ಶೈವ-ವೈದಿಕ ಆಚರಣೆಗಳನ್ನು ಅವೈದಿಕ ಲಿಂಗಾಯತ ಸಮಾಜದೊಳಕ್ಕೆ ತೂರಿಸುತ್ತ, ನಾವು ಹಿಂದುಗಳೇ ಎಂದು ಬೋಧಿಸುತ್ತಿದ್ದರು.

ಮುಸ್ಲಿಂ, ಕ್ರೈಸ್ತ ಧರ್ಮಗಳ ಮತಾಂತರದ ವಿರುದ್ಧ ತಮ್ಮನ್ನು ತಾವು ಸಂಘಟಿಸಿಕೊಳ್ಳಲು, ಬಲಪಡಿಸಿಕೊಳ್ಳಲು ಹಿಂದು ಪದವು ರೂಢಿಗೊಳ್ಳುತ್ತಿದ್ದ ಸಮಯವದು. ಅಭಾರತೀಯ ಧರ್ಮಗಳ ದಾಳಿ ತಪ್ಪಿಸಿಕೊಳ್ಳುವ ಯತ್ನದಲ್ಲಿ ಲಿಂಗಾಯತರೂ ಹಿಂದು ಪ್ರವಾಹದಲ್ಲಿ ಸೇರಿಕೊಳ್ಳುವುದು ಸೂಕ್ತ ಎಂಬ ಧೋರಣೆ ಬೆಳೆಸಿಕೊಂಡಿರಲೂ ಸಾಕು. ಹೀಗಾಗಿ ನಾವೂ ಹಿಂದುಗಳು ಎಂದು ಹೇಳಿಕೊಳ್ಳತೊಡಗಿದರು. ಆದರೆ ಅಧ್ಯಯನಶೀಲ ಪಾಶ್ಚಿಮಾತ್ಯ ವಿದ್ವಾಂಸರಿಗೆ ಕುರಿಯ ಹಿಂಡಿನಲ್ಲೊಂದು ಸಿಂಹದ ಮರಿಯನ್ನು ಕಂಡು ಸೋಜಿಗವಾಗಿರಲೂ ಸಾಕು.

ಅವರು ಹೇಳಿದರು, ''ನೀವು ಕುರಿಗಳಲ್ಲ, ಸಿಂಹಗಳು'' ಎಂದರು ಎಂಥೋವೆನ್‌ನಂಥವರು. ಇಲ್ಲಿ ಆ ಕಥೆಯನ್ನು ನಾನು ಬರೆದರೆ ಓದುಗರಿಗೆ ಬೇಗನೆ ಅರ್ಥವಾಗುತ್ತದೆ. ಒಂದು ಹುಲ್ಲುಗಾವಲಿನ ಮಧ್ಯೆ ಒಂದು ನದಿ ಹರಿಯುತ್ತಿತ್ತು ಅಲ್ಲಿಗೆ ನೀರು ಕುಡಿಯಲು ಹೆಣ್ಣು ಸಿಂಹವೊಂದು ಬಂದಿತು. ಅದು

ತುಂಬು ಗರ್ಭಿಣಿಯಿದ್ದಿತ್ತು, ಒಂದು ದೊಡ್ಡ ಸಿಡಿಲು ಎರಗಿದಾಗ ಆಘಾತವಾಗಿ ಹೆಣ್ಣು ಸಿಂಹಕ್ಕೆ ಹೆರಿಗೆ ಆಯಿತು, ಗಾಬರಿಯಿಂದ ಅದು ಮರಿಯನ್ನು ಬಿಟ್ಟು ಕಾಡಿನೊಳಕ್ಕೆ ಹೋಯಿತು.' ಕುರಿಗಳನ್ನು ಮೇಯಿಸುತ್ತಿದ್ದ ಕುರುಬನೋರ್ವ ನೀರು ಕುಡಿಸಲು ತನ್ನ ಹಿಂಡನ್ನು ನದಿಯ ಬಳಿಗೆ ಕರೆತಂದಾಗ ಆ ಪುಟ್ಟ ಸಿಂಹದ ಮರಿಯನ್ನು ನೋಡಿದ. ಕುರಿಯ ಹಾಲನ್ನು ಕುಡಿಸಿ ತಾನೇ ಸಾಕಿದ. ಅದು ದೊಡ್ಡದಾಗುತ್ತ ಬಂದು ಕುರಿಗಳ ಒಡನಾಟದಲ್ಲೇ ಇತ್ತು. ಒಂದು ದಿನ ಕಾಡಿಗೆ ಮೇಯಲು ಬಂದಾಗ ಬೇರೊಂದು ಸಿಂಹವು ಕುರಿಯ ಹಿಂಡಿನ ಮಧ್ಯೆ ಮೇಯುತ್ತಿದ್ದ ಸಿಂಹವನ್ನು ಕಂಡು ಅಚ್ಚರಿಗೊಂಡು ಮಾತನಾಡಿಸಿತು. ಅದರ ಗರ್ಜನೆ ಕೇಳುತ್ತಲೇ ಕುರಿಗಳೆಲ್ಲ ಓಡಿದವು. ಆ ಹಿಂಡಿನೊಡನೆ ಸಿಂಹದ ಮರಿಯೂ ಓಡಿತು. ನೋಡಿ ಆಗಂತುಕ ಸಿಂಹಕ್ಕೆ ಅಚ್ಚರಿಯಾಯಿತು. ಅದು ಕೂಗಿ ಹೇಳಿತು, ''ನೀನು ಕುರಿಯಲ್ಲ ಸಿಂಹ,'' ಆಗ ಸಿಂಹದ ಮರಿ ನುಡಿಯಿತು. ''ಇಲ್ಲ ಇಲ್ಲ; ನಾನು ಕುರಿಯೇ ಸರಿ. ನೀನು ನಮ್ಮ ಶತ್ರು. ''ಕುರಿಯ ಹಾಲನ್ನು ಕುಡಿಯುತ್ತ, ಅವುಗಳಂತೆಯೇ ಕೂಗುತ್ತ ಸಿಂಹದ ಮರಿಯೂ ಬೆಳೆದು ಬಂದಿತ್ತು. ಆಗ ಆಗಂತುಕ ಸಿಂಹ ಹೇಳಿತು, ''ಅಯ್ಯಾ ನೀನು ನಿಜವಾಗಿಯೂ ಕುರಿಯಲ್ಲ ಸಿಂಹವಿದ್ದೂ ಕುರಿ ಎಂಬ ಭ್ರಾಂತಿಗೆ ಒಳಗಾಗಿದ್ದೀಯ. ಬಾ ಇಲ್ಲಿ, ಈ ನಿಂತಿರುವ ನೀರಲ್ಲಿ ನಿನ್ನ ಮುಖವನ್ನು, ಆಕಾರವನ್ನು ನೋಡಿಕೊ.'' ಆಗ ಸಿಂಹದ ಮರಿಯು ನಿಂತ ನೀರಿನಲ್ಲಿ ತನ್ನನ್ನು ತಾನು ನೋಡಿಕೊಂಡಿತು. ತನ್ನ ಆಕಾರವು ಸಿಂಹದ ಆಕಾರವನ್ನೇ ಹೋಲುವುದನ್ನು ಕಂಡುಕೊಂಡಿತು. ಈಗದು ಕುರಿ ಹಿಂಡನ್ನು ತೊರೆದು ಹಿರಿಯ ಸಿಂಹದೊಡನೆ ಕಾಡನ್ನು ಸೇರಿಕೊಂಡಿತು.

ಈ ಕಥೆ ಇಂದಿನ ಸನ್ನಿವೇಶಕ್ಕೆ ಬಲು ಸೂಕ್ತವಾಗಿದೆ. ಕಲ್ಯಾಣದಲ್ಲಿ ಒಂದು ಕ್ರಾಂತಿಯಾಯಿತು. ಸಮಾನತೆಯ ಸ್ಥಾಪನೆಗಾಗಿ ವರ್ಣಾಂತರ ವಿವಾಹವಾದಾಗ ಸಂಪ್ರದಾಯವಾದಿಗಳು ಸಿಡಿದೆದ್ದರು. ಬಿಜ್ಜಳ ರಾಜನನ್ನು ಪ್ರಚೋದಿಸಿ ಧರ್ಮಗುರು ಬಸವಣ್ಣನವರನ್ನು ಗಡಿಪಾರು ಮಾಡಲು ಯತ್ನಿಸಿದರು. ವಿವಾಹದಲ್ಲಿ ಭಾಗಿಯಾದ ಶರಣರನ್ನು ಆನೆ ಕಾಲಿಗೆ ಕಟ್ಟಿ ಎಳೆಸಲಾಯಿತು. ವಚನ ಸಾಹಿತ್ಯದ ನಾಶಕ್ಕೆ ಪ್ರಯತ್ನ ಮಾಡಲಾಯಿತು. ಇಂಥ ಸನ್ನಿವೇಶದಲ್ಲಿ ಆದೇ ಆಗ ಜನಿಸಿದ ವಚನ ಸಾಹಿತ್ಯೋಕ್ತ ಲಿಂಗಾಯತ ಧರ್ಮದ ಶಿಶು ಅನಾಥವಾಯಿತು. ಪುನಃ ಅದು ವೈದಿಕ(ವೀರ)ಶೈವರು ಎಂಬ ಕುರುಬನಿಂದ ಬೆಳೆಸಲ್ಪಟ್ಟಿತು. ಅವನೋ ಸಿಂಹದ ಹಾಲು ಅಂಧರೆ ವಚನ ಸಾಹಿತ್ಯ ಕುಡಿಸದೆ ಲಿಂಗಾಯತ ಸಮಾಜದ ಶಿಶುವನ್ನು ಪುನಃ ವೇದ ಆಗಮಗಳ ಹಾಲು ಕುಡಿಸಿ ಬೆಳೆಸಿದ. ಹೀಗಾಗಿ ಲಿಂಗಾಯತ ಧರ್ಮ (ಸಮಾಜ)ದ ಶಿಶುವು ಧರ್ಮಕೇಸರಿಯಾಗಿ ಗರ್ಜಿಸದೆ ಜಾತಿಕುರಿಯಾಗಿ ಬ್ಯಾ ಬ್ಯಾ ಎಂದೇ ಅರಚುತ್ತ ಬೆಳೆದು ಬಂತು. ಅಂಥ ಸಂದರ್ಭದಲ್ಲಿ ಎಂಥೋವೆನ್, ರೆವರೆಂಡ್ ಉತ್ತಂಗಿ ಚನ್ನಪ್ಪ, ಲಿಂಗಾಯತರೇ ಆದ ಪ್ರೊ|| ಎಂ. ಆರ್. ಸಾಖರೆ ಮುಂತಾದವರು ಲಿಂಗಾಯತ ಧರ್ಮ-ಸಮಾಜಗಳ ಲಕ್ಷಣ ಅರಿತು ಅಂದೇ ಹೇಳಿದರು. ''ಇದು ಸ್ವತಂತ್ರ ಧರ್ಮ, ವೈದಿಕ ಹಿಂದುದ ಅಂಗವಲ್ಲ'' ಎಂದು. ಆದರೂ ವೈದಿಕ-ಶೈವವಾದಿ ಲಿಂಗಾಯತರು ಪುನಃ ನಾವು ಹಿಂದುಗಳೇ ಎಂದು ಪ್ರತಿಪಾದಿಸಿದರು. ಇಷ್ಟಲಿಂಗ ಒಂದು ದರ್ಪಣ, ವಚನ ಸಾಹಿತ್ಯ ಒಂದು ದರ್ಪಣ ಇದರಲ್ಲಿ ನೋಡಿಕೊಂಡದ್ದೇ ಆದರೆ ಲಿಂಗಾಯತ ಧರ್ಮದ ನಿಜ ಲಕ್ಷಣಗಳು ತಿಳಿದು ಬಂದು ಇದು ಹಿಂದುದೊಳಗಣ ಒಂದು ಜಾತಿಯಲ್ಲ, ಸ್ವತಂತ್ರ ಧರ್ಮ ಎಂಬುದು ಮನದಟ್ಟಾಗುತ್ತದೆ. ಹೀಗಾಗಿ ಕುರಿ ಹಿಂಡನ್ನು ತೊರೆದು ಸಿಂಹವು ಕಾಡನ್ನು ಸೇರಿ, ವನರಾಜನಾಗುವಂತೆ ಲಿಂಗಾಯತ ಧರ್ಮವೂ ಹಿಂದು ಕಕ್ಷೆಯಿಂದ ಹೊರಹೋಗಿ ಜಾಗತಿಕ ಧರ್ಮಗಳ ಸಾಲಿನಲ್ಲಿ ಸೇರಬೇಕಾಗಿದೆ.

ಮೂಢರಾಗಿ ಮಲಗಿದ್ದ ಲಿಂಗಾಯತರಿಗೂ ಮೊದಲೇ ಈ ಧರ್ಮದ ವೈಶಿಷ್ಟ್ಯ ಗುರುತಿಸಿ, ಸಾರಿದ ಎಂಥೋವೆನ್‌ನಂತಹವರು ಭೇದದ ಬೀಜ ಬಿತ್ತಿದರು ಎಂಬ ಡಾ|| ಚಿ.ಮೂ ಅವರ ಆರೋಪ

ಸಂಕುಚಿತತೆಯಿಂದ ಕೂಡಿದ್ದು ಬ್ರಿಟಿಷ್ ವಿದ್ವಾಂಸರ ಬೌದ್ಧಿಕ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯನ್ನು ನಾವು ಮೆಚ್ಚಿಕೊಳ್ಳಬೇಕು.

ಹಿಂದು ಸಮಾಜವು ಅನೇಕ ವೈರುದ್ಧ್ಯಗಳ ಸಂತೆ, ಅಸಂಬದ್ಧತೆಗಳ ಕಂತೆ. ನಿರಾಕಾರ ಬ್ರಹ್ಮನ ಉಪಾಸನೆಯೂ ಇದೆ ; ಕ್ಷುದ್ರ ದೇವತೆಗಳ ಆರಾಧನೆಯೂ ಇದೆ. ಯಜ್ಞ-ಯಾಗಾದಿಗಳ ನೆಪದಲ್ಲಿ ಶಾಸ್ತ್ರೀಯವಾಗಿ ಪ್ರಾಣವಧೆ ಹೇಳುವ ತಂತ್ರ ಒಂದು ಕಡೆ ; ಮಾರಿ ಮಸಣಿ ದುರ್ಗೆಯರಿಗೆ ಕ್ರೂರವಾಗಿ ಪ್ರಾಣಬಲಿ ಕೊಡುವ ಅನಿಷ್ಠ ಪದ್ಧತಿ ಮತ್ತೊಂದು ಕಡೆ. ನೀರುಳ್ಳಿ ಬೆಳ್ಳುಳ್ಳಿಯನ್ನು ತಿನ್ನದ ಆಹಾರ ಪದ್ಧತಿಯೂ ಹಿಂದುಗಳಲ್ಲುಂಟು. ಮಾಂಸಾಹಾರವನ್ನು ಮಾಡುವ ಸವರ್ಣೀಯರೂ ಉಂಟು. ಸ್ವತಃ ಬ್ರಾಹ್ಮಣರಲ್ಲೇ ಶುದ್ದ ಸಸ್ಯಾಹಾರಿಗಳೂ ಉಂಟು ; ಮೀನು ಮೊಟ್ಟೆ ತಿನ್ನುವ ಮಾಂಸಾಹಾರಿಗಳೂ ಉಂಟು. ಹಿಂದುಗಳಲ್ಲಿ ಬಹುಪಾಲು ಜನಕ್ಕೆ ಧರ್ಮ ಸಂಸ್ಕಾರ, ಸಮಾನತೆ ಪೂಜಾದಿಗಳ ಹಕ್ಕುಗಳೇ ಇಲ್ಲ.

ಇದು ವೈವಿಧ್ಯತೆ ಎಂದು (ಜನತಾ ದಳದವರು ಒಳಜಗಳಗಳನ್ನು ಸಮರ್ಥಿಸಿಕೊಂಡಂತೆ) ಸಮರ್ಥಿಸಿಕೊಳ್ಳುವ ಬದಲು ಈ ವೈರುದ್ಧ್ಯತೆಯಿಂದ ಹೊರಬಂದು ಏಕರೂಪದ ನಂಬಿಕೆ, ಆಚಾರ-ವಿಚಾರ, ಆಹಾರ-ಅರಿವನ್ನು ಅಳವಡಿಸಿಕೊಳ್ಳುವ ಅಗತ್ಯ ಲಿಂಗಾಯತ ಸಮಾಜಕ್ಕೆ ಎಂದಿಗಿಂತಲೂ ಹೆಚ್ಚಾಗಿ ಇಂದು ಇದೆ.

ಕೊಡವರು ಮತ್ತು ಬುಡಕಟ್ಟು ಜನರು

ಕೊಡವರು, ತೋಡರು, ಭಿಲ್ಲರು, ಸೋಲಿಗರು, ಬಡಿಗರು ಇತ್ಯಾದಿ ಇತ್ಯಾದಿ ನೂರಾರು ಬುಡಕಟ್ಟು ಗುಂಪು (tribal group)ಗಳು ಭಾರತ ದೇಶದಲ್ಲಿವೆ. ಜಗತ್ತಿನಲ್ಲೆಲ್ಲ ಹಾಗೆಯೇ ಇದ್ದುದು. ಮುಂದೆ ಎಲ್ಲರಿಗೂ ದೀಕ್ಷೆ ನೀಡುವ ಜಾಗತಿಕ ಧರ್ಮ (universal religions)ಗಳು ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್ ಧರ್ಮಗಳು ಹುಟ್ಟಿದಾಗ ಎಷ್ಟೋ ಜಾತಿ ಬುಡಕಟ್ಟುಗಳ ಜನರು, ಆ ಧರ್ಮಗಳ ದೀಕ್ಷೆ ಪಡೆದು ಆಯಾ ಸಮಾಜಗಳಲ್ಲಿ ಬೆರೆತು ಹೋದರು. ಒಮ್ಮೆ ಮಲೆನಾಡಿನಲ್ಲಿ ನಡೆದ ಬೃಹತ್ ಸಮಾರಂಭ ಒಂದರಲ್ಲಿ ಗುಡ್ಡಗಳಲ್ಲಿ ವಾಸಿಸುವ ಬುಡಕಟ್ಟು ಲಿಂಗಾಯತರ ಅಜ್ಜಿಗಳು ಮೊಳಕಾಲ ಎತ್ತರಕ್ಕೆ ಸೀರೆಯುಟ್ಟು ಬಂದಾಗ ಧರ್ಮಗುರು ಬಸವಣ್ಣನವರ ಧರ್ಮದ ದೂರಾಲೋಚನೆಯ ಅರಿವು ಉಂಟಾಗಿ ನನಗೆ ಹೆಮ್ಮೆಯಾಯಿತು.

ಇನ್ನೂ ಹಾಗೆಯೇ ಉಳಿದ ಬುಡಕಟ್ಟುಗಳವರನ್ನು ಜನಗಣತಿ ಮಾಡುವಾಗ ಪರಿಶಿಷ್ಟ ಪಂಗಡ (Schedule tribe) ಎಂದು ಬ್ರಿಟಿಷರು ಗುರುತಿಸಿದರು. ಈ ಹಿಂದು ಅಧ್ವರ್ಯುಗಳು ಅಂಥ ಬುಡಕಟ್ಟಿನವರಿಗೆ ಏಕೆ ಒಂದು "ಹಿಂದು ದೀಕ್ಷೆ" ಕೊಡಬಾರದು ? ಇವರ ಧೋರಣೆಯೇ ವಿಚಿತ್ರ. "ನೀವು ಇದ್ದಂತೆಯೇ ಇರಿ. ಹಿಂದು ಎಂದು ಹೇಳಿಕೊಳ್ಳಿರಿ" ಎನ್ನುತ್ತಾರೆ. ಹಿಂದು ಸಮಾಜದ ಬಹುಪಾಲು ಜನರ ಒಮ್ಮುಖದ ಪ್ರೀತಿ (one sided love) ಅವರು ಹಿಂದುತ್ವವನ್ನು ಘೋಷಿಸಿಕೊಂಡು ಹಿಂದು ಧರ್ಮವನ್ನು ಪ್ರೀತಿಸುತ್ತ, ಚತುರ್ವರ್ಣಗಳನ್ನು ಗಟ್ಟಿಗೊಳಿಸಿದ ಶ್ರೀಕೃಷ್ಣನನ್ನು, ತಪಸ್ಸು ಮಾಡಿದ ಶೂದ್ರ ಶಂಭುಕನನ್ನು ವಧೆ ಮಾಡಿದ ಶ್ರೀರಾಮನನ್ನು ದೇವರೆಂದು ಪೂಜಿಸುತ್ತಲೇ ಇರಬೇಕು. ಆದರೆ ಆ ಹಿಂದೂ ಧರ್ಮ ಈ ಶೂದ್ರರಿಗೆ, ಅಸ್ಪೃಶ್ಯರಿಗೆ ಮತ್ತು ಪರಿಶಿಷ್ಟರಿಗೆ ಮರಳಿ ಏನು ಕೊಟ್ಟಿದೆ ? ದೀಕ್ಷೆಯನ್ನೇ, ಗುರುತ್ವವನ್ನೇ ಸಾಮಾಜಿಕ ಸ್ಥಾನಮಾನವನ್ನೇ ? ಈ ಬಗ್ಗೆ ಹಿಂದುವಾದಿಗಳು ತುಟಿ ಪಿಟಕ್ ಎನ್ನುವುದಿಲ್ಲ. ಈ ದೌರ್ಬಲ್ಯವನ್ನು ಗುರುತಿಸಿಯೇ ಕ್ರೈಸ್ತ, ಇಸ್ಲಾಂ ಧರ್ಮಗಳು ಆಸೆಗಣ್ಣಿನಿಂದ ಭಾರತದ ಮೇಲೆ ಕಣ್ಣಿಟ್ಟಿರುವುದು. ಕೊಡವರಂತಹ ಸುಧಾರಿಸಿದ ಬುಡಕಟ್ಟುಗಳವರು ತಮ್ಮ ಜಾನಪದ ಆಚರಣೆಗಳ ಮೂಲಕ ಸಮಾಧಾನ ಪಡೆಯುತ್ತ ಮತಾಂತರದ ಪ್ರಭಾವಕ್ಕೆ ಒಳಗಾಗುವುದು ಕಡಿಮೆ ಇರಬಹುದು.

ಆದರೆ ಇನ್ನಿತರ ಅನೇಕ ಬುಡಕಟ್ಟಿನವರು ತೀವ್ರಗತಿಯಲ್ಲಿ ಮತಾಂತರ ಹೊಂದುತ್ತಿದ್ದಾರೆ. ಈ ಬಗ್ಗೆ ವಾಸ್ತವಿಕವಾಗಿ ಚಿಂತನೆ ಮಾಡದೆ ಚಿ.ಮೂ.ರಂತಹವರು ಹಿಂದುವಾದಿಗಳೊಡನೆ ಧ್ವನಿ ಸೇರಿಸುತ್ತಿರುವುದು ಆಶ್ಚರ್ಯಕರ.

ಹಿಂದು ಯಾರು ?

ಹಿಂದುಗಳೇ ಆಗಿದ್ದ ಸಿಖ್ಖರು ಮತ್ತು ಇತರ ಹಿಂದುಗಳ ಮಧ್ಯೆ ಭೇದಭಾವ ತಂದು ಹಾಕಲು ಬ್ರಿಟಿಷ್ ಅಧಿಕಾರಿಗಳು ಪ್ರಯತ್ನ ಮಾಡಿದರು ಎಂದು ರಾಮಸ್ವರೂಪ್ ಹೇಳಿದುದಾಗಿ ಚಿ.ಮೂ. ಉದಾಹರಿಸಿದ್ದಾರೆ.

ಹಿಂದು ಎಂದರೆ ಯಾರು ?

1. ವೇದ ಪ್ರಾಮಾಣ್ಯ ಒಪ್ಪುವವರು.
2. ಚತುರ್ವರ್ಣ ವ್ಯವಸ್ಥೆ, ಅಸ್ಪೃಶ್ಯತೆ ಒಪ್ಪುವವರು
3. ತ್ರಿಮೂರ್ತಿಗಳನ್ನು, ದೇವತೆಗಳನ್ನು ಮನ್ನಿಸಿ, ಪೂಜಿಸುವ ಬಹುದೇವತೋಪಾಸಕರು.
4. ಹೋಮ-ಹವನ, ಯಜ್ಞ-ಯಾಗ ಮಾಡುವವರು
5. ಗೋಪೂಜೆ, ನಾಗರಪೂಜೆ ಮಾಡುವವರು
6. ಪಂಚಸೂತಕಗಳನ್ನು ಒಪ್ಪುವವರು.
7. ಪಂಚಾಂಗ-ಜ್ಯೋತಿಷ್ಯ-ವಾಸ್ತುಗಳನ್ನು ನಂಬುವವರು

ಹಿಂದುಗಳ ಬಗ್ಗೆ ಹೀಗೆ ಎಂದು ವ್ಯಾಖ್ಯಾನಿಸಿದರೆ, ಆಗ ವೇದಾಗಮ ಪ್ರಾಮಾಣ್ಯ ಒಪ್ಪದೆ ಇರುವವರು, ವರ್ಣ-ಜಾತಿ-ಅಸ್ಪೃಶ್ಯತೆ ಮನ್ನಿಸದೆ ಇರುವವರು, ತ್ರಿಮೂರ್ತಿಗಳನ್ನು, ಬಹುದೇವತೆಗಳನ್ನು ಪೂಜಿಸದೆ ಏಕದೇವೋಪಾಸನೆ ಅಳವಡಿಸಿಕೊಂಡವರು, ಹೋಮ-ಹವನ, ಯಜ್ಞ-ಯಾಗ ಮಾಡದವರು, ಗೋ, ನಾಗರ ಪೂಜೆ ಮಾಡದವರು, ಪಂಚಸೂತಕಗಳನ್ನು ನಿರಾಕರಿಸುವವರು, ಪಂಚಾಂಗ-ಜ್ಯೋತಿಷ್ಯಗಳನ್ನು ನಂಬದವರು ಹೇಗೆ ಹಿಂದು ಎನ್ನಿಸಿಕೊಳ್ಳಲು ಸಾಧ್ಯ?. ಹಿಂದು ಧರ್ಮದಲ್ಲಿ ನಾವಿರಬೇಕು ಎಂದು ಬಯಸುವ ಹಿಂದು ಅಧ್ವರ್ಯುಗಳು ಮೇಲಿನ ನಂಬಿಕೆಗಳನ್ನು ಕೈಬಿಟ್ಟು ಇರಬಲ್ಲವರಾದರೆ ನಾವು ಅವರೊಡನೆ ಇರೋಣ.

ವೀರಶೈವ ಮಹಾಸಭೆಯ ದ್ವಂದ್ವ ನೀತಿ

ಡಾ|| ಚಿ.ಮೂ 1904ರಲ್ಲಿ ಅಂದರೆ ಸ್ಥಾಪನೆಗೊಂಡ ಸಮಯದಲ್ಲಿ ವೀರಶೈವ ಮಹಾಸಭೆ ಸ್ವೀಕರಿಸಿದ ಗೊತ್ತುವಳಿಯನ್ನು ಪ್ರಸ್ತಾಪಿಸಿದ್ದಾರೆ. "ವೀರಶೈವ ಮತವು ನಿಗಮಾಗಮೋಪನಿಷದ್ಬ್ರಾಹ್ಮ ಪ್ರತಿಪಾದಿತ ತತ್ತ್ವದಿಂದ ಅನುಪಸಂಸಿದ್ಧ"ವಾದುದೆಂದು ಹೇಳಲಾಯಿತಲ್ಲದೆ 1908ರಲ್ಲಿ ಅದೇ ಗೊತ್ತುವಳಿಯನ್ನು ಪುನರುಚ್ಚರಿಸಲಾಗಿದೆ.

ವೀರಶೈವ, ದ್ವೈತ, ಅದ್ವೈತದಂತೆ ಒಂದು ಶಿವಾಧಿಕ್ಯ ಸಾರುವ ಮತ. ಶೈವದ ಒಂದು ಅಂಗ, ಇದರ ಶಾಸ್ತ್ರಗಳು ನಿಗಮ ಆಗಮಗಳು, ಅಖಿಲ ಭಾರತ ವೀರಶೈವ ಮಹಾಸಭೆ ಮೂಲ ವಿಚಾರಗಳನ್ನು ತಿದ್ದಿ ಕೃತಕವಾಗಿ ಲಿಂಗಾಯತ ಪದವನ್ನು ಸೇರಿಸಿದೆ. 1904ರಲ್ಲಿ ವೀರಶೈವ ಮಹಾಸಭೆಯನ್ನು ಸ್ಥಾಪನೆ ಮಾಡಿದವರಿಗೆ ಲಿಂಗಾಯತ ಪದವು ಗೊತ್ತಿರಲಿಲ್ಲವೆ ? ಆಗ ಸಮಾಜದಲ್ಲಿ ರೂಢಿಯಲ್ಲಿದ್ದುದು ಲಿಂಗಾಯತ ಪದ ಮಾತ್ರ. ವೀರಶೈವ ಪದವು ಲಿಂಗಾಯತರಿಗೆ ಆಗಂತುಕವಾಗಿತ್ತು ಅಪರಿಚಿತವಾಗಿತ್ತು. ಅಲ್ಲಿಂದ ಮುಂದೆ ವೀರಶೈವ-ಲಿಂಗಾಯತಗಳ ಕಲಬೆರಕೆ, ಪ್ರತಿಫಲವಾಗಿ ಗೊಂದಲ ಶುರುವಾಯಿತು. 1940ರಲ್ಲಿ ಕುಂಭಕೋಣಂದಲ್ಲಿ ನಡೆದ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಇಂಗ್ಲೆಂಡಿನ

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬ್ಯಾರಿಸ್ಟರ್ ಪದವಿ ಪಡೆದಿದ್ದ ಸಂಗಮೇಶ್ವರ ಸರ್ದಾರರ ಅಧ್ಯಕ್ಷತೆಯಲ್ಲಿ ವೀರಶೈವರು ಹಿಂದೂಗಳಲ್ಲವೆಂದು ಘೋಷಿಸಲಾಯಿತು. ನಿಜಕ್ಕೂ ಈ ಗೊಂದಲ ಲಿಂಗಾಯತೇತರರಿಗೆ ತಮಾಷೆಯಾಗಿ ಕಾಣದೆ ಇರದು.

ಈ ಗೊಂದಲಕ್ಕೆ ಕಾರಣ ಲಿಂಗಾಯತ ಮತ್ತು ವೀರಶೈವ ಪದಗಳನ್ನು ಬೇರೆ ಮಾಡದೆ ಎರಡನ್ನೂ ಮನಸ್ವೇಚ್ಛೆ ಬಳಸುವುದು. ಸಾಲಾರ್‌ಜಂಗ್ ಮ್ಯೂಸಿಯಮ್‌ದಲ್ಲಿ ಒಂದು ಜಗತ್ ಪ್ರಸಿದ್ಧ ಶಿಲ್ಪವಿದೆ. ಎದೆ ಸೆಟೆಸಿ ನಿಂತ ಶೂರ ಸೈನಿಕನ ಚಿತ್ರವಿದೆ ಆದರೆ ಬೆನ್ನು ಕಡೆ ನೋಡಿದರೆ ನಾಚಿ, ತಲೆ ಬಾಗಿಸಿ ನಿಂತ ಸುಂದರ ಸ್ತ್ರೀಯ ಶಿಲ್ಪವಿದೆ. ಕರ್ನಾಟಕದಲ್ಲಿರುವ ಲಿಂಗಾಯತ ಧರ್ಮ, ಇದರ ನಂಬಿಕೆ, ಆಚಾರ ವಿಚಾರ, ಆಧಾರ ಶಾಸ್ತ್ರವಾದ ವಚನ ಸಾಹಿತ್ಯ ನೋಡಿದಾಗ ಲಿಂಗಾಯತವು ಹಿಂದುದೊಳಗಣ ಜಾತಿಯಲ್ಲ, ಸ್ವತಂತ್ರ ಧರ್ಮ ಎನ್ನಿಸುವುದು. ಕೇರಳದ ವೀರಶೈವರ ಆಚರಣೆ ನೋಡಿದಾಗ ಹಿಂದುದೊಳಗಣ ಒಂದು ಚಿಕ್ಕ ಪ್ರಭೇದ ಎನ್ನಿಸುವುದು. ಎರಡನ್ನೂ ಕೃತಕವಾಗಿ ಮೆತ್ತಿ ವೀರಶೈವ ಮಹಾಸಭೆಯ ಇಂದಿನ ಮುಖಂಡರು ಮೂಲ ಸಂಸ್ಥಾ ಸ್ಥಾಪಕರುಗಳ ಇಚ್ಛೆಗೂ ವಿರುದ್ಧವಾಗಿ ವೀರಶೈವ ಅಥವಾ ಲಿಂಗಾಯತ ಎಂದು ಸಮಾನಾರ್ಥದಲ್ಲಿ ಬಳಸುವ ಪಾಪದ ಕೆಲಸವನ್ನು ಮಾಡುತ್ತಿದ್ದಾರೆ. ಲಿಂಗಾಯತವನ್ನು ವೀರಶೈವವೆಂದು ಕರೆದು ಧರ್ಮಗುರು ಬಸವಣ್ಣನವರ ಆಶಯಕ್ಕೆ ವಿರುದ್ಧವಾಗಿ ಒಂದು ಕಡೆ, ವೀರಶೈವಕ್ಕೆ ಲಿಂಗಾಯತವನ್ನು ಗಂಟು ಹಾಕಿ ಮಹಾಸಭೆಯ ಸಂಸ್ಥಾಪಕ ಹಾನುಗಲ್ ಕುಮಾರಸ್ವಾಮಿಗಳ ಆಶಯಕ್ಕೂ ವಿರುದ್ಧವಾಗಿ ಇನ್ನೊಂದು ಕಡೆ ಅನ್ಯಾಯವನ್ನು ಮಾಡುತ್ತ ಲಿಂಗಾಯತ ಸಮಾಜಕ್ಕೆ ದ್ರೋಹವೆಸಗುತ್ತಿದ್ದಾರೆ.

1901 ಮತ್ತು 2001

1901 ಮತ್ತು 2001 ಎರಡರ ಮಧ್ಯೆ 100 ವರ್ಷಗಳ ಅಂತರ ; ಈ ಕಾಲಾವಧಿಯ ಮಧ್ಯೆ ಆಗಿರುವ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಬದಲಾವಣೆ ಎಷ್ಟು ?! 1901 ಮುಂಚಿನ ಜನಗಣತಿಯಲ್ಲಿ ಮುಂಬೈ ಬ್ರಿಟಿಷ್ ಸರ್ಕಾರವು ಲಿಂಗಾಯತರನ್ನು ಶೂದ್ರವರ್ಗಕ್ಕೆ ಸೇರಿಸಿದಾಗ, ಮುಂಬೈ ಕರ್ನಾಟಕದ ಲಿಂಗಾಯತರು ಪ್ರತಿಭಟಿಸಿರುವುದು ಅಭಿನಂದನಾರ್ಹ. ಆಗ ಲಿಂಗಾಯತದ ಹಿರಿಮೆಯನ್ನು ಪ್ರದರ್ಶಿಸುವ ವಚನ ಸಾಹಿತ್ಯ ಪ್ರಕಟವೇ ಆಗಿರಲಿಲ್ಲ. 1904ರಲ್ಲಿ ವೀರಶೈವ ಮಹಾಸಭೆ ಸ್ಥಾಪನೆಯಾಗುವಾಗ ಸಹಿತ ವಚನ ಸಾಹಿತ್ಯ ಇರುವುದೇ ತಿಳಿದಿರಲಿಲ್ಲ. ವಚನ ಶಾಸ್ತ್ರ ಪಿತಾಮಹ ಲಿಂ॥ ಶರಣ. ಫ.ಗು. ಹಳಕಟ್ಟಿ ಪ್ರಕಟಿಸಿದ ವಚನ ಶಾಸ್ತ್ರ ಸಾರದ ಮೊಟ್ಟ ಪ್ರಕಟಗೊಂಡುದು ದಿ.17-2-1923ರಂದು. ಸ್ವಾಮಿಗಳ ಚಿನ್ನದ ಕಿರೀಟ, ಬೆಳ್ಳಿಯ ಸಿಂಹಾಸನಕ್ಕೆ ಲಕ್ಷಗಟ್ಟಳೆ ಕೊಟ್ಟು, ಅಡ್ಡಪಲ್ಲಕ್ಕಿಯಲ್ಲಿ ಹೊತ್ತು ಮೆರೆಯಲು ಸಹಸ್ರಾರು ರೂಪಾಯಿ ವ್ಯವಹರಿಸಿ, ಫ.ಗು ಹಳಕಟ್ಟಿಯವರನ್ನು ಬಡತನದ ಬೇಗೆಯಲ್ಲಿ ಬೇಯಲು ಬಿಟ್ಟ ಬುದ್ಧಿವಂತ ಲಿಂಗಾಯತ ಸಮಾಜವನ್ನು ವಚನ ಸಾಹಿತ್ಯ ಮುಟ್ಟತೊಡಗಿದುದು 1960ರ ನಂತರವೇ ! ಅಂದಾಗ ಆವರೆಗೂ ತಮ್ಮದೊಂದು ಧರ್ಮವಿದೆ, ತಮಗೊಂದು ಶಾಸ್ತ್ರವಿದೆ ಎಂದೇ ಅರಿಯದಷ್ಟು ಲಿಂಗಾಯತರು ಮುಗ್ಧರಾಗಿದ್ದರಾದ್ದರಿಂದ ನಿಗಮ (ವೇದ)ಆಗಮುಗಳ ಆಶ್ರಯವನ್ನು ಅವಲಂಬಿಸಿದರೆ ಅದು ತಪ್ಪಲ್ಲ.

ಆದರೆ, ಇಂದು ವಚನ ಸಾಹಿತ್ಯವು ವಿಪುಲವಾಗಿ ಹೊರಬಂದಿದ್ದು ಒಂದು ಸ್ವತಂತ್ರ ಧರ್ಮಕ್ಕೆ ಬೇಕಾದ ಎಲ್ಲಾ ಲಕ್ಷಣಗಳನ್ನು ಹೊಂದಿ, ಜಾಗತಿಕ ಧರ್ಮಗಳೊಡನೆ ಜಗಜಟ್ಟಿಯಾಗಿ ವಿಜೃಂಭಿಸುವ ಅಪೂರ್ವ ಅವಕಾಶ ಲಿಂಗಾಯತ ಧರ್ಮಕ್ಕೆ ಒದಗಿಬಂದಿರುವಾಗ ಇದಕ್ಕೆ ವೀರಶೈವದ ಹೊದ್ದಿಕೆ ಹೊದ್ದಿಸಿ, ಹಿಂದೂ ಧರ್ಮದೊಳಗೆ ಒಂದು ಜಾತಿಯನ್ನಾಗಿ ಸೇರಿಸಿ, ಊಳಿಗ ಮಾಡಲು ಹಚ್ಚಲು

ಯತ್ನಿಸುತ್ತಿರುವ ಪೂಜ್ಯ ಸಿದ್ಧಗಂಗಾ ಮಠಾಧೀಶರಾಗಲೀ, ಡಾ॥ ಚಿ.ಮೂ, ಡಾ॥ ಶರಣ ಬಸಪ್ಪ ಅಪ್ಪಾ, ಡಾ॥ ಎಂ. ಶಿವಕುಮಾರ ಸ್ವಾಮಿಗಳಾಗಲೀ ಅಕ್ಷಮ್ಯ ಅಪರಾಧ ಮಾಡುತ್ತಿಲ್ಲವೆ ?

ಕಟು ಮಾತುಗಳಿಗಾಗಿ ಕ್ಷಮಿಸಿರಿ. ಅವರು ಲಿಂಗಾಯತಕ್ಕೆ ವಿಚ್ಛೇದನ ಕೊಟ್ಟು, ಲಿಂಗಾಯತ-ವೀರಶೈವ ಬೇರೆ ಬೇರೆ ಎಂದು ಘೋಷಿಸಿ, ತಮ್ಮ ಹೇಳಿಕೆಗಳನ್ನು ವೀರಶೈವಕ್ಕೆ ಸೀಮಿತಗೊಳಿಸಿಕೊಳ್ಳಲಿ. ಆಗ ಪರಧರ್ಮೀಯರಾದ ಅವರ ಬಗ್ಗೆ ನಾವೇಕೆ ಟೀಕಿಸುತ್ತೇವೆ ?

ವೀರಶೈವ ಮಹಾಸಭೆ ದ್ವಂದ್ವ ನೀತಿ ತೊರೆಯಲಿ

ಡಾ॥ ಚಿ.ಮೂ.ರವರು ಅನೇಕ ಐತಿಹಾಸಿಕ ದಾಖಲೆಗಳನ್ನು ಹೆಕ್ಕಿ ತೆಗೆದುಕೊಟ್ಟು ಮಹದುಪಕಾರ ಮಾಡಿ, ವೀರಶೈವದ ನಿಜ ಸ್ವರೂಪವನ್ನು ಬಿಚ್ಚಿಡುತ್ತಿದ್ದಾರೆ. ಹೌದೋ ಅಲ್ಲವೋ ಎಂಬಂತೆ ಬಹು ಬುದ್ಧಿವಂತಿಕೆಯಿಂದ ಅಪರೂಪಕ್ಕೆ ಲಿಂಗಾಯತವನ್ನು ಕಂಸಿನಲ್ಲಿ() ಬಳಸಿ ಬರಹಗಳ ಉದ್ದಕ್ಕೂ ವೀರಶೈವವನ್ನು ಬಳಸುತ್ತಿದ್ದಾರೆ. ಅವರ ಅಂತರಂಗಕ್ಕೆ ಮನವರಿಕೆಯಾಗಿದೆ ಲಿಂಗಾಯತ-ಬಸವಣ್ಣ-ವಚನಸಾಹಿತ್ಯ ಹಿಡಿದುಕೊಂಡರೆ, ಈ ಧರ್ಮವು ಅಹಿಂದು ಧರ್ಮ ಎಂಬುದು ಸುಸ್ಪಷ್ಟವಾಗುತ್ತದೆ. ಅದಕ್ಕೇ ವೀರಶೈವ-ನಿಗಮ ಆಗಮ, ಬಸವ ಪೂರ್ವ ಎಂಬುದನ್ನು ಗಟ್ಟಿಯಾಗಿ ಹಿಡಿದಿದ್ದಾರೆ. ನಮ್ಮಗಳ ಅಂದರೆ ಬಸವ ಧರ್ಮೀಯರ ಇಚ್ಛೆಯೂ ಇದೇ ಆಗಿದೆ. ಈಗ ನಿಜವಾದ ತಪ್ಪಿತಸ್ಥರು ವೀರಶೈವ ಮಹಾಸಭೆಯವರು. ಡಾ॥ ಚಿ.ಮೂ.ರಂತೆ ಪ್ರಾಮಾಣಿಕವಾಗಿ ವೀರಶೈವ ಹಿಂದೂದ ಅಂಗ, ಹಿಂದು ಧರ್ಮದೊಳಗಣ ಸ್ವತಂತ್ರ ಧರ್ಮ. ಇದು ಸಿಖ್, ಬೌದ್ಧ, ಜೈನಗಳಂತೆ ಅಹಿಂದು ಧರ್ಮ ಎಂದಾದರೂ ಹೇಳಬೇಕು. ಅದು ಬಿಟ್ಟು ವೀರಶೈವ ಅಥವಾ ಲಿಂಗಾಯತ ಎಂದು ಬಳಸಿ ಎರಡರ ಶುಚಿಯನ್ನು ಹಾಳು ಮಾಡುವುದು ಸಲ್ಲದು. ಹರಳೆಣ್ಣೆ ಒಂದು ಪದಾರ್ಥ. ಜೇನುತುಪ್ಪ-ಮತ್ತೊಂದು ಪದಾರ್ಥ. ಎರಡಕ್ಕೂ ಪ್ರತ್ಯೇಕ ಅಸ್ತಿತ್ವವಿದೆ. ಉಪಯುಕ್ತತೆ ಇದೆ. ಎರಡನ್ನೂ ಸೇರಿಸಿಬಿಟ್ಟರೆ ಎರಡರ ಶುಚಿಯೂ ಕೆಡುವುದಲ್ಲದೆ ; ಎರಡೂ ನಿಷ್ಪ್ರಯೋಜಕವಾಗುವುವು.

ಇನ್ನು ಸಿದ್ಧಗಂಗಾ ಪೂಜ್ಯರು ಚಿ.ಮೂ ಅವರಿಗೆ ಸಂದರ್ಶನ ನೀಡುವಾಗ ಹಿಂದುದ ಜಾಯಮಾನ ಆಳವಾಗಿ ತಿಳಿದು (?) ವೀರಶೈವರು ಹಿಂದುಗಳು ಎನ್ನುವರು (ಇದು ಚಿ.ಮೂ ಹೇಳಿಕೆ) ವೀರಶೈವ ಮಹಾಸಭೆಯವರು ಬೃಹತ್ ಜಾತ್ರೆ ಏರ್ಪಡಿಸಿದಾಗ ಪತ್ರಿಕೆಗಳ ಮುಖಪುಟದಲ್ಲಿ ಕಾಣಿಸಿಕೊಳ್ಳುವ ಸದವಕಾಶ ತಪ್ಪಿಸಿಕೊಳ್ಳಬಾರದೆಂದು ವೇದಿಕೆಯ ಮೇಲೆ ವಿರಾಜಿಸುವರು. ಇದರರ್ಥ, ಭೀಮಣ್ಣ ಖಂಡ್ರೆಯವರ ಹೋರಾಟ ವೀರಶೈವರು ಹಿಂದೂಗಳಲ್ಲ ಎಂಬುದನ್ನು ಬೆಂಬಲಿಸುವರೆಂದು ತಾನೆ ? ಭಾಷಣದ ಹುಚ್ಚಿಗಾಗಿ ಯಾವ ತತ್ತ್ವವನ್ನೂ , ಸತ್ಯವನ್ನೂ ಹಿಡಿಯದ ಜೋಕರ್ ಸ್ವಾಮಿಗಳು ಬೇಲಿ ಮಠದ ಶ್ರೀಗಳು, ರಾಮಜನ್ಮಭೂಮಿ ಹೋರಾಟದಲ್ಲಿ ಇಟ್ಟಿಗೆ ಹೊರಲು ಅವರೇ ಮುಂದು, ವೀರಶೈವರು ಹಿಂದುಗಳಲ್ಲ ಎಂದು ಘೋಷಿಸಲು ಭೀಮಣ್ಣ ಖಂಡ್ರೆ ಕರೆದ ವೀರಶೈವರ ಜಾಥಾದ ವೇದಿಕೆ ಮೇಲೆ ಅವರ ಫೋಟೋ ಪೋಸ್ ಚಂದ. ಅದ್ಭುತ ಮಠಾಧೀಶರು ! ಓರ್ವ ಸಾಧು ಪವಾಡ ಪುರುಷನೆಂದು ಪ್ರಚಾರ ಮಾಡಿಕೊಳ್ಳುತ್ತಿದ್ದ. ಆತ ದಿವ್ಯಜ್ಞಾನಿ ಮೌನ ವ್ರತಧಾರಿ ಮುಂದಾಗುವುದನ್ನು ತನ್ನ ವೇಷ ಭೂಷಣದಿಂದ ಅರಿಯಬೇಕು ಎಂದು ಪ್ರಚಾರ ಮಾಡಿಕೊಂಡಿದ್ದ, ಮಳೆ ಬರುವುದಿದ್ದರೆ ಕಂಬಳಿ ಹೊದ್ದಿರುತ್ತಾರೆ. ಬಿಸಿಲು ಬಹಳವಾಗುವುದಿದ್ದರೆ ಚಪ್ಪಲಿ ಹಾಕಿರುತ್ತಾರೆ ಎಂದು ಶಿಷ್ಯರು ಪ್ರಚಾರ ಮಾಡುತ್ತಿದ್ದರು. ಆತ ಕಂಬಳೀನೂ ಹೊದ್ದು ಚಪ್ಪಲಿ ಧರಿಸಿರುತ್ತಿದ್ದ. ಮಳೆ ಬಂದರೆ ಶಿಷ್ಯರು ಹೇಳುತ್ತಿದ್ದರು, ''ನೋಡಿ ಗುರುಗಳು ಮುನ್ಸೂಚನೆಯಾಗಿ ಕಂಬಳಿ ಹೊಂದಿದ್ದಾರೆ'' ಬಿಸಿಲು ಜೋರಾಗಿದ್ದರೆ, ''ನೋಡಿ ಮೊದಲೇ ತಿಳಿದ ಗುರುಗಳು ಚಪ್ಪಲಿ ಹಾಕಿಕೊಂಡಿದ್ದಾರೆ'' ಹೀಗೆ

ವೀರಶೈವರು ಹಿಂದುಗಳು ಎಂದು ಸಿದ್ಧಗಂಗಾ ಶ್ರೀಗಳು ಚಿ.ಮೂ ಅವರಿಗೂ ಹೇಳಿದ್ದಾರೆ. ವೀರಶೈವರು ಹಿಂದುಗಳಲ್ಲ ಪ್ರತ್ಯೇಕ ಕಾಲಂ ಬೇಕು ಎಂದು ಖಂಡ್ರೆಯವರಿಗೂ ಹೇಳಿರಲೇ ಬೇಕು. ಈಗಾಗುತ್ತಿರುವುದು ಜನರಿಗೆ ಫಜೀತಿ. ಆದ್ದರಿಂದ ಭೀಮಣ್ಣ ಖಂಡ್ರೆ ಮುಂತಾದ ಮಹಾಶಯರು ವೀರಶೈವವನ್ನೊಪ್ಪಿ ಹಿಂದು ಕಕ್ಷೆಯಿಂದ ಹೊರಬಂದು ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಡಲಿ. ಚಿ.ಮೂ ಅವರು (ಬಹುಶಃ ವಿಶ್ವಹಿಂದೂ ಪರಿಷತ್‌ದವರ ಒಪ್ಪಿಗೆಯೊಡನೆಯೇ) ಬ್ರಾಹ್ಮಣರನ್ನು ಬೈದು ಇವರು ಬ್ರಾಹ್ಮಣೇತರರನ್ನು ಕಡೆಗಣಿಸಿದರು ಎಂದು ವೀರಶೈವರು ತಮ್ಮನ್ನು ಲಿಂಗಿ ಬ್ರಾಹ್ಮಣರು ಎಂದು ಕರೆದುಕೊಂಡರು. ಬ್ರಾಹ್ಮಣರಿಗೆ ಮಾತ್ರವಲ್ಲ ತಮಗೂ ವೇದಾಧಿಕಾರವಿದೆ ಎಂದು ಪ್ರತಿಪಾದಿಸಿ ಗೆದ್ದರು. ತಾವು ಶೂದ್ರರಲ್ಲ ತಾವು ವರ್ಣ ವ್ಯವಸ್ಥೆಗೆ ಸೇರದೆ ಇರುವ ಹಿಂದುಗಳು ಎಂದು ಹೇಳಿಕೊಂಡರು ಎಂದು ಪ್ರತಿಪಾದಿಸಿದ್ದಾರೆ. ಎರಡು ಹುಡುಗರು ಜಗಳ ಆಡಿಕೊಂಡು ಬಂದಾಗ ಹಿರಿಯರು ಒಂದು ಹುಸಿ ಏಟು ಕೊಟ್ಟು "ಹೋಗು ಅಳಬೇಡ, ಅವನನ್ನು ಚೆನ್ನಾಗಿ ಹೊಡೆದಿದ್ದೇನೆ." ಎಂದು ಹೊಡಿಸಿಕೊಂಡು ಬಂದವನನ್ನು ಸಂತೈಸುವಂತಿದೆ ಡಾ|| ಚಿ.ಮೂರ ಹುಸಿ ಆಟ.

ಬುದ್ಧಿವಂತರಾಗಿದ್ದರೆ ಲಿಂಗಾಯತರು, ಒಂದು ದೇವಾಲಯದ ಪೂಜೆಯ ಸವಲತ್ತಿಗಾಗಿ ಲಿಂಗೀ ಬ್ರಾಹ್ಮಣರೆಂದು ಕರೆದುಕೊಳ್ಳುವ ಬದಲು ನಾವು ವರ್ಣ ವ್ಯವಸ್ಥೆಯನ್ನೇ ಒಪ್ಪದ ಅವೈದಿಕರು, ಅಹಿಂದುಗಳು ನೀವೂ ಬೇಡ, ನಿಮ್ಮ ಗುಡಿಯೂ ಬೇಡ ಎಂದು ಪ್ರಶ್ನಿಸಬೇಕಾಗಿತ್ತು. ತಾವೂ ಲಿಂಗಿ ಬ್ರಾಹ್ಮಣರೆಂದು, ರಾಹು ಕೇತು, ಅಮೃತ ಕುಡಿಯಲು ಕಳ್ಳ ವೇಷ ಧರಿಸಿ ಬಂದಂತೆ ವಾದಿಸುವ ಅಗತ್ಯವೇನಿತ್ತು ? ಇಲ್ಲಿಯೂ ಸಹ ವೀರಶೈವ ಪುರೋಹಿತಶಾಹಿಯೇ ತನ್ನ ಸ್ವಾರ್ಥವನ್ನು ಪ್ರದರ್ಶಿಸಿದೆ.

ಬ್ರಾಹ್ಮಣ ಆಚಾರ್ಯರಿಗೂ ವೀರಶೈವ ಆಚಾರ್ಯರಿಗೂ ವ್ಯತ್ಯಾಸವೇನೂ ಇಲ್ಲ. ಬ್ರಾಹ್ಮಣ್ಯದ ಪ್ರತಿಪಾದನೆಯಲ್ಲಿ ಉಭಯತರೂ ಒಂದೆ. ವೈದಿಕ ಬ್ರಾಹ್ಮಣರು ವಿಷ್ಣುವಿನ ಆಧಿಕ್ಯ ಪ್ರತಿಪಾದಿಸಿದರೆ ವೀರಶೈವ ಬ್ರಾಹ್ಮಣರು ಶಿವನ ಆಧಿಕ್ಯ ಪ್ರತಿಪಾದಿಸಿದರು. ಇಬ್ಬರೂ ವರ್ಣ ಜಾತಿ ವ್ಯವಸ್ಥೆಯ ಪ್ರತಿಪಾದಕರೇ ! ಎಂದೂ ಬ್ರಾಹ್ಮಣೇತರರ ಹಕ್ಕುಗಳನ್ನು ಎತ್ತಿಹಿಡಿದವರಲ್ಲ.

"ವರ್ಣ ವ್ಯವಸ್ಥೆಗೆ ಸೇರದಿರುವ 'ಹಿಂದು' ಎಂಬ ಬುದ್ಧಿವಂತಿಕೆಯ ಮಾತನ್ನು ಚಿ.ಮೂ. ಆಡಿದ್ದಾರೆ. ಇದು, "ಬೆಳಕಿನಿಂದ ಕೂಡಿದ ಕತ್ತಲೆ" ಎಂಬ ವಿಶೇಷ ಉಕ್ತಿಯಂತಿದೆ. ಹಿಂದು ಒಂದು ಮನೆ ಆದರಲ್ಲಿ 4 ಕೋಣೆಗಳು

1. ಸೂಪರ್ ಡಿಲಕ್ಸ್ ವ್ಯವಸ್ಥೆಯ ಕೋಣೆ - ಬ್ರಾಹ್ಮಣರಿಗೆ ಮೀಸಲು .
2. ಡಿಲಕ್ಸ್ ವ್ಯವಸ್ಥೆಯ ಕೋಣೆ - ಕ್ಷತ್ರಿಯರಿಗೆ ಮೀಸಲು
3. ಉತ್ತಮ ದರ್ಜೆಯ ಕೋಣೆ - ವೈಶ್ಯರಿಗೆ ಮೀಸಲು
4. ಸಾಮಾನ್ಯ ಕೋಣೆ - ಶೂದ್ರರಿಗೆ ಮೀಸಲು

ಉಳಿದ ದಲಿತರು, ಪರಿಶಿಷ್ಟ ಜಾತಿ, ಗುಂಪುಗಳವರಿಗೆ ಯಾವ ಕೋಣೆಯೂ ಇಲ್ಲ; ಹಿಂದು ಎಂಬ ಮನೆಯ ಕಾಂಪೌಂಡಿನಲ್ಲಿ ಅವರು ಮಲಗಬಹುದು, ಕುಳಿತುಕೊಳ್ಳಬಹುದು, ಆದರದ ಆತಿಥ್ಯವೂ ಇಲ್ಲ, ಹೊರಟು ಹೋಗಿ ಎಂಬ ತಿರಸ್ಕಾರವೂ ಇಲ್ಲ.

ಇಂಥ ಮನೆಯಲ್ಲಿ ಡಾ|| ಚಿ.ಮೂ ಹೇಳುವಂತೆ ಲಿಂಗಾಯತರು ವರ್ಣವ್ಯವಸ್ಥೆ ಎಂಬ ಯಾವುದಾದರೊಂದು ಕೋಣೆ ಸೇರದೆ ವರ್ಣಾತೀತರಾದ ಹಿಂದುವಾಗಿರಲು ಹೇಗೆ ಸಾಧ್ಯ ? ಅದಕ್ಕಾಗಿಯೇ ಬಸವಣ್ಣನವರು ಒಂದು ಬೃಹತ್ತಾದ ಮನೆ ಕಟ್ಟಿ ಇಲ್ಲಿ ವಿಭಜಕ ಗೋಡೆಗಳಿಲ್ಲ ; ಎಲ್ಲರಿಗೂ ಸಮಾನ ಸವಲತ್ತು ಎಂದು ಘೋಷಿಸಿ, ಇಷ್ಟಲಿಂಗ ದೀಕ್ಷಾ ಸಂಸ್ಕಾರ ಎಂಬ ಹೆಬ್ಬಾಗಿಲು ತೆಗೆದು, ಇಷ್ಟಲಿಂಗ ಎಂಬ ಗುರುತಿನ ಚೀಟಿ (Identity Card) ಕೊಟ್ಟರು.

ಡಾ|| ಚಿ.ಮೂ ಅವರು ಸಿದ್ಧಗಂಗಾ ಮಠಾಧೀಶರಾದ ಪೂಜ್ಯ ಶಿವಕುಮಾರ ಸ್ವಾಮಿಗಳನ್ನು ತಮ್ಮ ಬೆನ್ನು ಚಪ್ಪರಿಸಿಕೊಳ್ಳಲು ಬಳಸಿಕೊಂಡಿದ್ದಾರೆ. ಅವರು ಒಂದು ಹೆಜ್ಜೆ ಮುಂದೆ ಹೋಗಿ "ರಾಜಕಾರಣಿಗಳಿಗೆ ಹಿಂದೂ ಧರ್ಮದ ಜಾಯಮಾನವೇ ಗೊತ್ತಿಲ್ಲ" ಎಂಬ ಸ್ಪಷ್ಟೋಕ್ತಿಯನ್ನು ಆಡಿದ್ದಾರೆ ಎಂದು ಮೆಚ್ಚುಗೆ ಸೂಸಿದ್ದಾರೆ. ನಿಜ, ಸಿದ್ಧಗಂಗಾ ಶ್ರೀಗಳಿಗೆ ಹಿಂದೂ ಧರ್ಮದ ಆಳಹರವು, ಜಾಯಮಾನ ಗೊತ್ತಿರುವುದರಿಂದಲೇ, ತಾವು ಕಟ್ಟಿಕೊಂಡ ಇಷ್ಟಲಿಂಗದಲ್ಲಿ ಏಕನಿಷ್ಠೆ ಹೊಂದಿರದೆ ದಿನ ಬೆಳಗಾದರೆ ಗಣಪತಿ ಸ್ಥಾಪನೆ-ಪೂಜೆ, ನವಗ್ರಹ ಸ್ಥಾಪನೆ-ಪೂಜೆ, ಕರಿದಾರ-ತಾಯಿತ ಕಟ್ಟುವುದು ಮುಂತಾದ ಲಿಂಗಾಯತ ಧರ್ಮವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವುದು. ತಮ್ಮ ಜಾಡನ್ನು ಲಿಂಗಾಯತರೂ ತುಳಿದು ಧರ್ಮದ್ರೋಹ ಮಾಡಬಾರದು ಎಂಬ ಕಳಕಳಿ ಶ್ರೀಗಳಲ್ಲಿ ಇದ್ದರೆ ಅವರು ಒಂದು ಸ್ಪಷ್ಟ ನಿರ್ಧಾರಕ್ಕೆ ಬರಬೇಕು. ಇಲ್ಲಿಯವರೆಗೆ ತಾವು ಮಾಡಿದ ಬಹುದೇವತೋಪಾಸನೆಯ ಕಾರ್ಯಕ್ಕಾಗಿ ಸೃಷ್ಟಿಕರ್ತ ಲಿಂಗದೇವನಲ್ಲಿ, ಧರ್ಮಗುರು ಬಸವಣ್ಣನವರಲ್ಲಿ ಕ್ಷಮೆ ಕೇಳಿ, ಇನ್ನು ಮುಂದೆ ಇಷ್ಟಲಿಂಗದ ಹೊರತು ಅನ್ಯದೈವವನ್ನು ಪೂಜಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿ ನಡೆಯಬೇಕು. ವಿರಕ್ತರಾಗಿಯೂ ಏಕದೇವೋಪಾಸನೆ ಅಳವಡಿಸಿಕೊಳ್ಳುವ ಆತ್ಮಬಲ ಇಲ್ಲದೆ ಇದ್ದರೆ ಹಿಂದು ಎಂದಾದರೂ ಕರೆದುಕೊಳ್ಳಲಿ, ತಮ್ಮನ್ನು ವೀರಶೈವರೆಂದಾದರೂ ಕರೆದುಕೊಳ್ಳಲಿ, ಅಪ್ಪಟ ವೈದಿಕರೆಂದಾದರೂ ಕರೆದುಕೊಳ್ಳಲಿ ಇಷ್ಟಲಿಂಗಧಾರಣೆಯನ್ನು ತೊರೆಯಬೇಕು. ಲಿಂಗಪತಿ ಶರಣಸತಿ ನಿಷ್ಠೆಯಿಲ್ಲದೆ ಹಲವು ದೈವಾರಾಧನೆ ಮಾಡುವವರಿಗೆ ಇಷ್ಟಲಿಂಗವು ಎದೆಯ ಮೇಲಿದ್ದು ತಪ್ಪು ಮಾಡುತ್ತಿದ್ದಿ ಎಂದು ಚುಚ್ಚುವುದಕ್ಕೆ ಅವಕಾಶ ಏಕಿರಬೇಕು ? ಈ ಲೇಖನ ಬರೆಯುತ್ತಿರುವಾಗಲೇ ಸರ್ಕಾರದ ಒಂದು ಆಜ್ಞೆಯು ಪತ್ರಿಕೆಗಳಲ್ಲಿ ಮುದ್ರಣಗೊಂಡಿದೆ. ಸರ್ಕಾರಿ ಅಧಿಕಾರಿಗಳಾಗಿ ಸಂಬಳ ತೆಗೆದುಕೊಳ್ಳುವವರು ಚಲನಚಿತ್ರ, ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಲು ಸರ್ಕಾರದ ಅನುಮತಿ ಪಡೆಯಬೇಕು ಎಂಬುದಾಗಿ. ಗೌರವ ನಟರಾಗಿ ಎಂದೋ ಅಪರೂಪಕ್ಕೆ ನಟಿಸುವವರು ಅಂಥ ಪರವಾನಗಿಯೊಡನೆ ನಟಿಸಬಹುದು. ಅದರ ಮೂಲಕ ಆದಾಯ ಹೊಂದುವವರು ಸರ್ಕಾರಿ ಸಂಬಳ ತೆಗೆದುಕೊಂಡು ಇಲ್ಲಿ ಕೆಲಸ ಮಾಡದೆ ಅಲ್ಲಿ ನಟಿವುವುದು ತಪ್ಪಲ್ಲವೆ ? ತನ್ನ ಲಾಂಛನಕ್ಕೆ ಅನುಗುಣವಾಗಿ ವ್ಯಕ್ತಿಯು ಯಾವಾಗಲೂ ಕರ್ತವ್ಯ ಮಾಡಬೇಕು. ಅದೇ ಕಾಯಕದ ಸೂತ್ರ.

ವೀರಶೈವರೇ, ಡಾ|| ಚಿ.ಮೂರ ಸಲಹೆ ಪರಿಪಾಲಿಸಿರಿ

ಪರ ಧರ್ಮೀಯರಾದ ವೀರಶೈವರೇ, ನಮ್ಮ ಧರ್ಮಗುರು ಬಸವಣ್ಣನವರು ನಮಗೊಂದು ಉದಾತ್ತ ಸಂಸ್ಕೃತಿ ಕಲಿಸಿದ್ದಾರೆ. ಎಂಥವರಿಗೂ ನಾವು ಬಹಿಷ್ಕಾರ ಹಾಕುವಂತಿಲ್ಲ. ಆದ್ದರಿಂದ ನೀವು ಪರಧರ್ಮೀಯರಾದರೂ ನಮ್ಮ ನೆರೆ ಮನೆಯವರೆ. ಡಾ|| ಚಿ.ಮೂ ನಿಮ್ಮನ್ನು ಅರ್ಥಾತ್ ವೀರಶೈವರನ್ನು ಇರುಳರು, ಸೋಲಿಗರು, ಒಕ್ಕಲಿಗರು, ಕುರುಬರು, ಕೊಡವರು, ನಾಯ್ಡು, ಕಮ್ಮೆಗಳು, ಬ್ರಾಹ್ಮಣರು, ನಾಯಕರಂತೆ ಹಿಂದುದೊಳಗಣ ಒಂದು ಜಾತಿಯನ್ನಾಗಿ ಮಾಡಿದ್ದಾರೆ. ಸಂತೋಷಿಸುವುದು ದುಃಖಿಸುವುದು ನಿಮಗೆ ಬಿಟ್ಟದ್ದು.

ನಮ್ಮದು ಮಾತ್ರ ಒಂದು ಸ್ವತಂತ್ರ ಧರ್ಮ, ಪರಿಪೂರ್ಣ ಧರ್ಮ. ಅದುವೆ ಲಿಂಗಾಯತ ಧರ್ಮ. ಇದು ಹಿಂದು ಕಕ್ಷೆಯಿಂದ ಹೊರಗೆ ಇರುವ ಶ್ರೇಷ್ಠ ಧರ್ಮ. ನಿಮಗೂ ಇದರ ಸಿರಿಯನ್ನು ಹಂಚಿಕೊಳ್ಳಬೇಕೆಂದಿದ್ದರೆ ಧರ್ಮಗುರು ಬಸವಣ್ಣನವರನ್ನು ಸ್ಥಾಪಕರೆಂದು ನಂಬಿ, ಇಷ್ಟಲಿಂಗ ನಿಷ್ಠೆ ಬೆಳೆಸಿಕೊಂಡು, ವಚನ ಸಾಹಿತ್ಯವನ್ನು ಆಧಾರ ಶಾಸ್ತ್ರವೆಂದು ತಿಳಿದು ಬನ್ನಿರಿ. ಇಲ್ಲವಾದರೆ ನೀವು ಯಾರಾದರೇನಂತೆ-ಮಠಾಧೀಶರಿರಲಿ, ಗೃಹಸ್ಥರಿರಲಿ ನೀವು ನೀವೇ, ನಾವು ನಾವೇ ; ಶರಣು ಶರಣಾರ್ಥಿ.

-ಜಗದ್ಗುರು ಮಾತೆ ಮಹಾದೇವಿ

ಮಾತೆ ಮಹಾದೇವಿಯವರಿಗೆ ಒಂದು ಬಹಿರಂಗ ಪತ್ರ

ಈ ಸಂಪಾದಕೀಯವನ್ನು ಬರೆಯುವುದಕ್ಕೆ 'ಎಳ್ಳಷ್ಟೂ ಮನಸ್ಸಿರಲಿಲ್ಲ'. ಅಭಿಮಾನಿಗಳ, ವಿಚಾರಶೀಲರ, ಹೃದಯವಂತರ ಒತ್ತಾಯಕ್ಕೆ ಮಣಿದು ಪ್ರತಿಕ್ರಿಯಿಸುತ್ತಿದೆ 'ಸಿದ್ಧಗಂಗಾ'.

'ಕಲ್ಯಾಣ ಕಿರಣ' ಅಕ್ಟೋಬರ್ 2000ದ ಸಂಚಿಕೆಯ ಚಿದಾನಂದಮೂರ್ತಿ ಅವರ ವೀರಶೈವ ಧರ್ಮ ಚರಿತ್ರೆ - ಭಾಗ-2 ವಿಮರ್ಶೆ ಭಾಗ-4' ಎಂಬ ಶೀರ್ಷಿಕೆಯಡಿಯಲ್ಲಿ 'ಮಾತಾಜಿ' (ಮಾತೆ ಮಹಾದೇವಿಯವರು) ಬರೆಯುತ್ತ ಪುಟ 16ರಿಂದ 'ಸಿದ್ಧಗಂಗಾ ಮಠದ ಪೂಜ್ಯರು ಗಣಪತಿಯ ಪೂಜೆ, ಪ್ರತಿಷ್ಠಾಪನೆ ಮಾಡುವುದಲ್ಲದೆ ಯಾವ ದೇವತೆಯ ಗುಡಿಯ ಪ್ರಾರಂಭೋತ್ಸವಕ್ಕೂ ಹೋಗುತ್ತಾರೆ. ಇವರು ಮಾಡುವ ಆಚರಣೆ ನೋಡಿ ಇದೇ ಲಿಂಗಾಯತ ಧರ್ಮ' ಎಂದು ಚಿ.ಮೂ. (ಡಾ. ಚಿದಾನಂದಮೂರ್ತಿ) ಅಂಥ ವಿದ್ವಾಂಸರು ಶಾಸನ ಬರೆಯುವುದಾದರೆ ಭ್ರಷ್ಟಾಚಾರ ಮಾಡುವ ಸರ್ಕಾರಿ ಅಧಿಕಾರಿ, ಮಂತ್ರಿಗಳನ್ನು ನೋಡಿ ಭಾರತದ ಸಂವಿಧಾನದಲ್ಲಿ ಭ್ರಷ್ಟಾಚಾರವೂ ಒಂದು ಅತ್ಯಗತ್ಯ ಆಚರಣೆ ಎಂದು ಬರೆಯಬೇಕಾದೀತು'' ಎಂಬ ಕುಹಕವನ್ನಾಡಿದ್ದಾರೆ. ಪರಮ ಪೂಜ್ಯ ಸಿದ್ಧಗಂಗಾ ಶ್ರೀಗಳವರು ಆಚರಿಸುತ್ತಿರುವ ಧರ್ಮದಲ್ಲಿ 'ತಮ್ಮ ಲಿಂಗಾಯತ'ವನ್ನು ಕಾಣಲು 'ಮೊಸರಿನಲ್ಲಿ ಕಲ್ಲು ಹುಡುಕುವ' ಪ್ರಯತ್ನ ನಡೆಸಿದ್ದಾರೆ.

ಮಾನವ ಧರ್ಮ

ಸಿದ್ಧಗಂಗಾ ಪೂಜ್ಯ ಶ್ರೀಗಳವರದು ಮಾತೆ ಮಹಾದೇವಿಯವರು ಅಪಲಾಪಿಸುತ್ತಿರುವ ಧರ್ಮವಲ್ಲ. ಅಥಣಿಯ ಮಹಾಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಹೇಳಿರುವ 'ಆವಾವ ಕಾಯಕವ ಮಾಡಿದರು ಬಸವೇಶ ಆವಗಂ ಶರಣರ ಸೇವಿಪೆನು ಬಸವೇಶ' ಎಂಬ ಸುವಿಶಾಲ ಧರ್ಮ. ಅಲ್ಲಿ ಬಸವಣ್ಣನವರು ಹೇಳುವಂತೆ 'ಆನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು' ಎಂಬ ಧರ್ಮ. 'ಅನ್ಯರಿಗೆ ಅಸಹ್ಯ ಪಡಬೇಡ'ವೆಂಬ 'ಅಂತರಂಗ-ಬಹಿರಂಗ ಶುದ್ಧಿಯ' ಧರ್ಮ. ಪ್ರತಿನಿತ್ಯ ಏಳುಸಾವಿರಕ್ಕೂ ಹೆಚ್ಚು ಹಸಿದ ಚರಜಂಗಮದ ಹೊಟ್ಟೆಗೆ 'ಇವನಾರವ ಇವನಾರವ, ಇವನಾರವನೆನ್ನದೆ, ಇವ ನಮ್ಮವ, ಇವನಮ್ಮವ, ಇವನಮ್ಮವನೆನ್ನುವ' ಬಸವ ಧರ್ಮ. ನೂರು ಪ್ರವಚನಗಳಿಗಿಂತ, ಮಾತುಗಳಿಗಿಂತ, ಹಸಿದು ಬಂದವನಿಗೆ 'ಪ್ರಸಾದ ಮಾಡಿಕೊಂಡು ಬನ್ನಿ' ಎಂದು ಹೇಳುವ ಆಚರಣೆಯ ನಿಷ್ಠೆಯ ನಿಜವನರಿತ ನಿಶ್ಚಿಂತ ಮಾನವ ಧರ್ಮ.

ಬಸವಣ್ಣನವರ ತತ್ತ್ವಾದರ್ಶನಗಳ ಪ್ರಯೋಗಶಾಲೆ

ಶ್ರೀಗಳವರಿಗೆ ಇಷ್ಟಲಿಂಗವೆಂಬುದು ಕರಸ್ಥಲದ ಕುರುಹು ಮಾತ್ರವಲ್ಲ ; ಅಂತರಂಗದ ಅರಿವು. ಸೇವೆಯನ್ನೇ, ದಾಸೋಹದ ಒಳ-ಹೊರಗನ್ನೇ ಅನುಭಾವವೆಂದು ನಂಬಿ ನಡೆದಿರುವ ಧರ್ಮ. 'ದಯವೇ ಧರ್ಮದ ಮೂಲವಯ್ಯಾ' ಎಂಬ ಮಾನವೀಯತೆಯ ಆರಾಧನೆಯ ಧರ್ಮ. ಶ್ರೀಗಳವರು ಮಾಡುವ ಏಕಾಂತದ ಇಷ್ಟಲಿಂಗ ಪೂಜೆ ಲೋಕಾಂತದ ಕಲ್ಯಾಣಕ್ಕಾಗಿ ಎಂಬುದನ್ನು ಸಮಾಜ ಇಂದು ಅರಿತಿದೆ. ಕೃತಜ್ಞತೆಯ ನಮನಗಳನ್ನು ಸಲ್ಲಿಸುತ್ತಿದೆ. ಮಾತೆ ಮಹಾದೇವಿಯವರು ಹೇಳುವಂತೆ ಇಷ್ಟಲಿಂಗ ನಿಷ್ಠೆ ಬಸವಾದಿ ಪ್ರಮಥರು ಪ್ರತಿಪಾದಿಸಿದ ಲಿಂಗಾಯತ ಧರ್ಮ, ವಚನಸಾಹಿತ್ಯ ಎಂದು 'ಬಾಯಲ್ಲಿ ಹೇಳುವ ಧರ್ಮವಾಗದೆ, ಬಸವಣ್ಣನವರ ತತ್ತ್ವಾದರ್ಶನಗಳ ಪ್ರಯೋಗಶಾಲೆಯಾಗಿದೆ. ಸಿದ್ಧಗಂಗಾ ಶ್ರೀಗಳವರು ಆಚರಿಸುತ್ತಿರುವ ಧರ್ಮ. ಲಿಂಗಾಯತ ಧರ್ಮದ ಅಂತರಾರ್ಥವನ್ನು, ಆಚರಣೆಯ ವಿಧಿ-ವಿಧಾನಗಳನ್ನು ಸಿದ್ಧಗಂಗಾ ಪೂಜ್ಯರು ಮಾತೆ ಮಹಾದೇವಿಯವರಿಂದ ತಿಳಿದುಕೊಳ್ಳಬೇಕಾಗಿಲ್ಲ.

ಇಷ್ಟಲಿಂಗಾರ್ಚನೆ

'ನಿಮಗೇನಾದರೂ ವಿಶೇಷ ಬೃಹತ್ ಸಮಾರಂಭದಲ್ಲಿ ಎಲ್ಲರಿಗೂ ಕಡುಬು ಉಣ್ಣಿಸಬೇಕೆಂಬ ಬಯಕೆ ಇದೆಯೆ ? ಮಾಡಿಕೊಡುವ ಅಡಿಗೆ ಭಟ್ಟರು ಯಾರು ಎಂಬ ಚಿಂತೆಯುಂಟೆ ? ಇನ್ನೇನೂ ಚಿಂತಿಸುವ ಕಾರಣವಿಲ್ಲ. ಗಣಪತಿ ಹಬ್ಬದಲ್ಲಿ ಇಪ್ಪತ್ತುಸಾವಿರ ಕಡುಬು ಮಾಡಿ ದಾಖಲೆ ನಿರ್ಮಿಸಿರುವ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳನ್ನು ಆಹ್ವಾನಿಸಿರಿ. ನಿಮ್ಮ ಇಷ್ಟಪೂರ್ತಿಯಾಗಿ ನಿಮ್ಮ ಬಂಧು-ಮಿತ್ರರಿಗೆ ಕಡುಬಿನ ಊಟ ಮಾಡಿಸಬಹುದು' (ಪುಟ 17) ಎಂದು ವ್ಯಂಗ್ಯವಾಡಿದ್ದಾರೆ ಮಾತೆ ಮಹಾದೇವಿಯನರು. ಒಂದು ಧರ್ಮಪೀಠದ ಜವಾಬ್ದಾರಿ ಸ್ಥಾನದಲ್ಲಿರುವವರು ಇಂಥ ಸಣ್ಣಮಾತುಗಳನ್ನಾಡಬಾರದು. ಸ್ಥಾನಕ್ಕೆ ತಕ್ಕಂತೆ ನಡೆ ನುಡಿಯಿಲ್ಲದಿದ್ದರೆ ಅದು ಶೋಭಿಸುವುದಿಲ್ಲ. 'ಕಡುಬಿನ ಕಾಯಕ' ನಾಚುವಂತಹದಲ್ಲ ; ಕೈಮುಗಿಯುವಂತಹುದು. ಹಸಿದ ಹೊಟ್ಟೆಗೆ ವೇದಾಂತವಲ್ಲ ಎಂದರು ಶ್ರೀ ಸ್ವಾಮಿ ವಿವೇಕಾನಂದರು. ತಮ್ಮ ಸ್ವಂತ ಊರುಗಳಿಗೆ ಹೋಗಲೂ ಚೈತನ್ಯವಿಲ್ಲದ ಏಳೂವರೆ ಸಾವಿರ ಜಂಗಮ ಮಹಾಗಣಂಗಳಿಗೆ ಹಬ್ಬದ ಕಡುಬಿನ ಪ್ರಸಾದವನ್ನು ಸಿದ್ಧಮಾಡುವ ಕಿರಿಯ ಶ್ರೀಗಳವರ ಕಾಯಕ 'ಇಷ್ಟಲಿಂಗಾರ್ಚನೆ'ಯಷ್ಟೆ ಪವಿತ್ರ. ಪೂಜನೀಯ ಎಂಬುದನ್ನು ನಾಡು ತಿಳಿದಿದೆ. ಗೌರವಿಸುತ್ತಿದೆ.

''ಪೂಜ್ಯ ಸಿದ್ಧಗಂಗಾ ಶ್ರೀಗಳ ಬಗ್ಗೆಯಾಗಲೀ, ಸುತ್ತೂರು ಮಠದವರ ಬಗ್ಗೆಯಾಗಲೀ ಪ್ರಸ್ತಾಪಿಸಲು ನನಗೆ ಎಳ್ಳಷ್ಟೂ ಮನಸ್ಸಿರಲಿಲ್ಲ. ಆದರೆ ಚಿ.ಮೂ ಅವರು ಅನವಶ್ಯಕವಾಗಿ ತಪ್ಪು ಸಾಕ್ಷಿಗಳನ್ನಾಡಿ ಅವರನ್ನು ಮುಂದಿಟ್ಟಿದ್ದರಿಂದ, ಅವರ ಆಚರಣೆಗಳನ್ನೇ ಲಿಂಗಾಯತ ಧರ್ಮೀಯರು ಅಧಿಕೃತ ಧರ್ಮಾಚರಣೆ ಎಂದು ತಿಳಿಯಬಾರದು ಎಂದು ನಾನು ಅನಿವಾರ್ಯವಾಗಿ ಪ್ರಸ್ತಾಪಿಸಿದ್ದೇನೆ. ಇವರು ಮತ್ತು ಇನ್ನೂ ಅನೇಕರು ವೇದ, ಆಗಮ, ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದರೆ ಅದೇನೂ ಲಿಂಗಾಯತ ಮಠಾಧೀಶರಿಗೆ ಅನುಕರಣೀಯ ಆದರ್ಶವಲ್ಲ''(ಪುಟ 20) ಎಂದಿದ್ದಾರೆ ಮಾತೆ ಮಹಾದೇವಿಯವರು. ಸಿದ್ಧಗಂಗಾ ಶ್ರೀಗಳವರಾಗಲೀ, ಸುತ್ತೂರು ಶ್ರೀಗಳವರಾಗಲೀ ತಮ್ಮ ಆಚರಣೆ 'ಲಿಂಗಾಯತ ಮಠಾಧೀಶರಿಗೆ ಅನುಕರಣೀಯ ಆದರ್ಶ'ವೆಂದು ಎಂದೂ ತಮ್ಮ ಹಾಗೆ 'ನುಡಿಜಾಣರಾಗಿ' ಹೇಳಿಲ್ಲ. ನಡೆಧೀರರಾಗಿ ತಮ್ಮ ಗುರುಗಳು ತೋರಿಸಿದ 'ಗುರುಪಥ'ದಲ್ಲಿ ನಮ್ರವಾಗಿ ನಡೆದಿದ್ದಾರೆ.

ಬಸವ ಧರ್ಮ

ಸಿದ್ಧಗಂಗಾ ಪೂಜ್ಯ ಶ್ರೀಗಳವರು ಆಚರಿಸುತ್ತಿರುವ ಬಸವಧರ್ಮ ಘನಮನವುಳ್ಳವರ ಧರ್ಮ, ಜಂಗಮ ದೇವಾಲಯಗಳ ಧರ್ಮ, ನಿರ್ಜೀವಕ್ಕೆ ನೈವೈದ್ಯ ಮಾಡುವ ಧರ್ಮವಲ್ಲ, ಆರ್ತರಿಗೆ ಅರ್ಪಿಸಿಕೊಂಡ ಧರ್ಮ, ಪಶ್ಚಾತ್ತಾಪದ ಸರಳ ಧರ್ಮ, ಮಾತಿನ ಮಂಟಪವಲ್ಲ, ಕಾಯಕಯೋಗಿಗಳ ಬಾಳದೇಗುಲದಲ್ಲಿ ಬಾಳಿ ಬೆಳಗುವ ಧರ್ಮ. ಸುಲಿಗೆ ವಿರೋಧಿ ಸೇವೋಪಾಸಕ ಧರ್ಮ, ಕೇವಲ ಇಷ್ಟಲಿಂಗವೆಂಬ ಕುರುಹಿಂಗೆ ಬೋನವ ಹಿಡಿವ ಧರ್ಮವಲ್ಲ, ಜೀವಂತ ದೇಹಿಗಳಿಗೆ ಪ್ರಾಧಾನ್ಯವಿತ್ತ ಅರಿವೆಂಬ ಉದಾತ್ತ ಧರ್ಮ. ಲಿಂಗಾಯತ ಪದಕ್ಕೆ ಸಮಾನಾರ್ಥವಾಗಿ ವೀರಶೈವ ಬಳಸಬೇಡಿ ಎಂದು ಎಚ್ಚರಿಕೆ ಸಹಿತ ಕೊಡುತ್ತೇವೆ' ಎಂಬ ಅಹಂಕಾರ ಪ್ರಮತ್ತ ಆಜ್ಞಾಪ್ರಧಾನ ಅಧಿಕಾರೀ ಧರ್ಮವಲ್ಲ, ಅನುಭವ ಪ್ರಧಾನ, 'ಎನಗಿಂತ ಕಿರಿಯರಿಲ್ಲ'ವೆಂಬ ಜನತಾಂತ್ರಿಕ ಧರ್ಮ, ವೀರಶೈವ-ಲಿಂಗಾಯತ ಎಂಬ ಜಾಲವನ್ನು ಹೆಣೆವ ಧರ್ಮವಲ್ಲ, ಕುಲ-ಲಿಂಗ, ವಯ, ವೃತ್ತಿಜನಿತ ಎಲ್ಲ ಭೇದಗಳನ್ನು ನಿರ್ಮೂಲಗೊಳಿಸಿ ಸಾಮಾಜಿಕ ಆರ್ಥಿಕ ಸಮಾನತೆಯನ್ನು ಸಾಧಿಸುವ ಧರ್ಮ, ಕಾಯಕವೇ ಕೈಲಾಸ,

ಜೀವವೇ ಶಿವನೆಂದು ನಂಬಿ ನಡೆಯ ಹಚ್ಚಿದ ಧರ್ಮ, ನಾನು ಜ್ಞಾನಿ ನೀನು ಅಜ್ಞಾನಿಯೆಂದು ವಾದಿಸುವ ಧರ್ಮವಲ್ಲ, ನಿಮ್ಮನರಿಯದ (ದೇವರನ್ನು) ಜ್ಞಾನವೆಲ್ಲಾ ಅಜ್ಞಾನ ಎಂದು ಸಾರಿಹೇಳುವ ಧರ್ಮ, ಮಾತು ಬಲ್ಲಾತ ಜಾಣನಲ್ಲ ಮತ್ತು ಅನ್ನವನಿಕ್ಕುವ ಜಾಣನೆಂದರಿತ ಧರ್ಮ, ಸ್ವಮುಕ್ತಿ ಸಾಧನ ಬೋಧಕ ವ್ಯಕ್ತಿನಿಷ್ಠ ಧರ್ಮವಲ್ಲ, ಸ್ವವಿಮೋಚನೆಯೊಡನೆ ಸಾಮೂಹಿಕ ವಿಮೋಚನೆಯನ್ನು ಸಾಧಿಸಲು ಹಚ್ಚಿದ ಸಮಷ್ಟಿ ಧರ್ಮ, ಪ್ರವಚನ ಪರೋಪ ಜೀವಿತ್ವವನ್ನು ಪೋಷಿಸುವ, ಪ್ರೋತ್ಸಾಹಿಸುವ ಧರ್ಮವಲ್ಲ, ಸ್ವಾವಲಂಬನವನ್ನು ಬೀಜ ಮಂತ್ರವನ್ನಾಗಿ ಮಾಡಿದ ಸರ್ವೋದಯ ಧರ್ಮ.

'ಸದ್ದು ಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ
ಕಾಯಕವೇ ಕೈಲಾಸವೆಂಬುವ ಮಾತು ಕೃತಿಯೊಳು ಮೂಡಿದೆ
ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ'

ಎಂಬ ಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರ ವಾಣಿ ಸಿದ್ಧಗಂಗಾ ಪೂಜ್ಯಶ್ರೀಗಳವರ ವೀರಶೈವ ಅಥವಾ ಲಿಂಗಾಯತದ 'ಧರ್ಮ ಇರುವುದು ಪ್ರೇಮದಲ್ಲಿ, ಬಾಹ್ಯ ಆಚರಣೆಗಳಲ್ಲಿ ಅಲ್ಲ. ಹೃದಯದ ಶುದ್ಧವಾದ ಹಾಗೂ ನಿಷ್ಕಪಟವಾದ ಪ್ರೇಮದಲ್ಲಿ ಧರ್ಮವಿದೆ. ಮನುಷ್ಯನು ದೇಹ ಮತ್ತು ಮನಸ್ಸಿನಲ್ಲಿ ಪರಿಶುದ್ಧನಾಗಿರದೆ ಇಷ್ಟಲಿಂಗಾರ್ಚನೆ ಮಾಡುವುದು ನಿಷ್ಪ್ರಯೋಜಕ. ಹೃದಯ ಪರಿಶುದ್ಧತೆಯಿಲ್ಲದೆ ಇತರರಿಗೆ ಬೋಧಿಸುವವರು ಕೊನೆಯಲ್ಲಿ ತಾವೇ ಸೋತು ಹೋಗುವರು. ಅಂತರಂಗ ಶುದ್ಧಿಯಿಲ್ಲದೆ ಬಾಹ್ಯಪೂಜೆಯಿಂದ ಯಾವ ಪ್ರಯೋಜನವೂ ಇಲ್ಲ.'

ಸಿದ್ಧಗಂಗಾ ಪೂಜ್ಯ ಶ್ರೀಗಳವರಿಗೆ ಮಾತೆ ಮಹಾದೇವಿಯವರ ಸರ್ಟಿಫಿಕೇಟಿನ ಅಗತ್ಯವಿಲ್ಲ ಎಂದು 'ಸಿದ್ಧಗಂಗಾ' ತಿಳಿಸಲಾಶಿಸುತ್ತದೆ.

-ಸಂಪಾದಕ

(ಸಿದ್ಧಗಂಗಾ ಮಾಸಪತ್ರಿಕೆ ; ನವೆಂಬರ್ 2000 ಪುಟ 2 ಮತ್ತು 5)

ಲಿಂಗಾಯತ ಧರ್ಮ ಕಾನೂನು ದೃಷ್ಠಾಭಿಪ್ರಾಯದಲ್ಲಿ

ಮಾನ್ಯರೇ,

ಕರ್ನಾಟಕ ಉಚ್ಚನ್ಯಾಯಾಲಯವು, ಭಾರತ ಸಂವಿಧಾನದ ತತ್ವ (ಆರ್ಟಿಕಲ್) 226 ಮತ್ತು 227 ಪ್ರಕಾರ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುವ ಪ್ರಭುಶಂಕರ್ ಕೇಸಿನಲ್ಲಿ (ಕರ್ನಾಟಕ ಲಾ ಜರ್ನಲ್, ಸಂಪುಟ 1981(1)ರ ಪುಟ 255) ತೀರ್ಮಾನಿಸಿ ಆದೇಶವಿತ್ತಿರುವ ಪ್ರಕಾರ 'ಲಿಂಗಾಯತ' ಒಂದು ಧರ್ಮ, ಜನಾಂಗವಲ್ಲ. ಕಾರಣ, ಸರ್ಕಾರದವರು ಜನಾಂಗದ ಆಧಾರದ ಮೇಲೆ ಘೋಷಿಸಲಾದ ಎಲ್ಲಾ ಸೌಲಭ್ಯಗಳಿಗೂ, ಲಿಂಗಾಯತ ಧರ್ಮದ ತತ್ವಗಳನ್ನು ಅಪ್ಪಿಕೊಂಡ ಗಾಣಿಗ ಜನಾಂಗದವರೂ (ಕಮ್ಯುನಿಟಿಯವರು) ಸಹ ಅರ್ಹರು ಮತ್ತು ಯೋಗ್ಯರು.

ಲಿಂಗಾಯತ ಧರ್ಮದ ತತ್ವಗಳನ್ನು ಅಪ್ಪಿಕೊಂಡಿರುವ ಗಾಣಿಗ, ಬಣಜಿಗ, ನೇಕಾರ, ಚಿಂಪಿಗ, ಸಮಗಾರ ಹಾಗೂ ಇನ್ನೂ ಅನೇಕ ವಿವಿಧ ಜನಾಂಗ (ಕಮ್ಯುನಿಟಿ) ಇಡೀ ಭಾರತ ದೇಶದಲ್ಲಿದ್ದೇವೆ. ಕಾರಣ, ಜನಗಣತಿಯಿಂದು ಧರ್ಮದ ಕಾಲಂನಲ್ಲಿ ನಿಗಾವಹಿಸಿ 'ಲಿಂಗಾಯತ' ಎಂದು ಬರೆಸಿದರೆ ಅನಾಯಾಸವಾಗಿ ಯಾವ ಕಾನೂನಿನ ತೊಡಕುಗಳಿಲ್ಲದೆ ಸರ್ಕಾರದವರು ಜನಾಂಗದ ಆಧಾರದ ಮೇಲೆ ಘೋಷಿಸಬಹುದಾದ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅರ್ಹರು ಮತ್ತು ಯೋಗ್ಯರಾಗುತ್ತಾರೆ.

ಅಬ್ಬಿಗೆರೆ ಕಲ್ಲೇಶಪ್ಪ, ಅಡ್ವೋಕೇಟ್,
ದಾವಣಗೆರೆ.

ಪೂಜ್ಯ ಶ್ರೀ ನಿ.ಪ್ರ. ಡಾ|| ಶಿವಕುಮಾರ ಮಹಾಸ್ವಾಮೀಜಿ ಅವರಿಗೊಂದು ಬಹಿರಂಗ ಪತ್ರ

ಪೂಜ್ಯ ಮಹಾಸ್ವಾಮೀಜಿಗಳವರಿಗೆ,

ಶರಣು ಶರಣಾರ್ಥಿ. ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮವನ್ನು ಹಾರೈಸುತ್ತೇವೆ. ಹಿಂದು ಧರ್ಮದ ಜಾಯಮಾನವನ್ನು ವೇದಾಗಮಗಳ ಆಳವಾದ ಅಧ್ಯಯನ ಮಾಡಿ ತಿಳಿದವರು ತಾವು. ದ್ರೌಪದಿಯ ವಸ್ತ್ರಾಪಹರಣವನ್ನು ಮೌನ ಪ್ರೇಕ್ಷಕರಂತೆ ನೋಡಿ, ಕಡೆಗೂ ಕೌರವರನ್ನೇ ಬೆಂಬಲಿಸಿ ಭೀಷ್ಮ-ದ್ರೋಣ ಮುಂತಾದವರು ದುರ್ಯೋಧನನ ಪರವಾಗಿ ಯುದ್ಧಕ್ಕೆ ನಿಂತರು. ಹಿರಿಯರು ಎಂಬ ಗೌರವ ಭೀಷ್ಮ-ದ್ರೋಣರನ್ನು ಕುರಿತು ಇದ್ದರೂ ಪಾಂಡವರು ಯುದ್ಧ ಮಾಡಲೇಬೇಕಾಯಿತು. ಆದರೆ ಬಾಣಬಿಡುವ ಮುನ್ನ ಆ ಹಿರಿಯರಿಗೆ ವಂದಿಸುವ ಶಿಷ್ಟಾಚಾರ ತೋರಿದರು. ಇದೆಲ್ಲ ತಮಗೆ ತಿಳಿದಿರುವುದೇ ! ವಚನ ಸಾಹಿತ್ಯಕ್ಕಿಂತಲೂ ವೈದಿಕ-ಶೈವ ಸಾಹಿತ್ಯವನ್ನೇ ಅರೆದು, ಕುಡಿದು ಆಚರಣೆಯಲ್ಲೂ ಅಳವಡಿಸಿಕೊಂಡ ಹಿರಿಯರಾದ ತಮಗೆ ತುಂಬಾ ಸಣ್ಣವರಾದ ನಾವು ತಿಳಿಸುವುದೇನಿದೆ ? ಆ ಶಿಷ್ಟಾಚಾರದಂತೆ ಪ್ರಾರಂಭದಲ್ಲಿ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಪೂಜ್ಯರೇ, ಸಿದ್ಧಗಂಗಾ ಮಾಸಪತ್ರಿಕೆಯ 2000 ಇಸವಿಯ ನವೆಂಬರ್ ಸಂಚಿಕೆಯ ಪುಟ 2 ಮತ್ತು 5ರಲ್ಲಿ ನನ್ನ ಬಗ್ಗೆ ಪತ್ರಿಕೆಯ ಸಂಪಾದಕರು ವಿಮರ್ಶಿಸಿದ್ದಾರೆ. ನಾನು ಅದನ್ನು ಟೀಕೆ ಎನ್ನುವುದಿಲ್ಲ. ವಿಮರ್ಶೆ ಎಂದು ಸ್ವಾಗತಿಸುತ್ತೇನೆ. ಅದಕ್ಕೆ ಉತ್ತರ ನೀಡಲು ಬಹಳ ತಡವಾಯಿತು. ಬಹುಶಃ ಸಂಪಾದಕರ ವಿಮರ್ಶೆಗೆ ಅರ್ಥಾತ್ ಟೀಕಾಸ್ತ್ರಕ್ಕೆ ನಾನು ಹೆದರಿದ್ದೇನೆಂದು ಅವರು ಭಾವಿಸಿರಲೂಬಹುದು. ನವೆಂಬರ ತಿಂಗಳಲ್ಲಿ ಪ್ರವಾಸದ ಒತ್ತಡ ಬಹಳವಾಗಿ ಡಿಸೆಂಬರ್ ಕಲ್ಯಾಣ ಕಿರಣದಲ್ಲಿ ಉತ್ತರಿಸಲು ಆಗಲಿಲ್ಲ. ಮುಂದೆ ಧ್ವನಿ ಸುರುಳಿಗಳ ತಯಾರಿಕೆಯಲ್ಲಿ ತಲ್ಲೀನಳಾಗಿ ಜನವರಿ ಸಂಚಿಕೆಯನ್ನು ಹೊರತರಲು ಆಗಲಿಲ್ಲ ಮತ್ತು ಜನವರಿ-ಫೆಬ್ರವರಿ ಸಂಯುಕ್ತ ಸಂಚಿಕೆಯನ್ನು ಹೊರತರುವುದು ಸಹ ನಮ್ಮ ಉದ್ದೇಶವಾಗಿತ್ತು. ತಡವಾದರೇನಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಸಂಪಾದಕೀಯಕ್ಕೆ ಈಗ ಉತ್ತರಿಸುತ್ತಿದ್ದೇನೆ. ಇನ್ನೊಬ್ಬರ ಮೂಲಕ ಉತ್ತರಿಸುವ ಜಾಯಮಾನ ನನ್ನದಲ್ಲ. ಹೀಗಾಗಿ ನಾನೇ ತಮಗೆ ನೇರವಾಗಿ ಪತ್ರ ಬರೆದಂತೆ ಉತ್ತರ ಬರೆಯುತ್ತಿದ್ದೇನೆ. ಬಹಳ ವರ್ಷಗಳಿಂದಲೂ ಈ ಬಗ್ಗೆ ತಮ್ಮೊಡನೆ ಸಂವಾದ ಮಾಡಬೇಕು, ಕೇಳಬೇಕು ಎಂಬ ಆಸೆ ಇತ್ತು.

"ಸಂಪಾದಕೀಯವನ್ನು ಬರೆಯುವುದಕ್ಕೆ ಎಳ್ಳಷ್ಟೂ ಮನಸ್ಸಿರಲಿಲ್ಲ. ಅಭಿಮಾನಿಗಳ ಒತ್ತಡಕ್ಕೆ ಮಣಿದು ಸಿದ್ಧಗಂಗಾ ಪ್ರತಿಕ್ರಿಯಿಸುತ್ತಿದೆ." ಎಂದಿದ್ದಾರೆ ಸಂಪಾದಕರು. ಅದೇಕೆ ಅಂಥ ಸಂಕೋಚ ? ನಿರ್ಜೀವವಾದ ಲೇಖನಗಳನ್ನು ಪ್ರಕಟಿಸುವುದಕ್ಕಿಂತಲೂ ವಿಚಾರಶೀಲ ಸಂವಾದಗಳನ್ನು ನಡೆಸುವುದರಿಂದ ಪತ್ರಿಕೆಗಳಿಗೆ ಜೀವಂತಿಕೆ ಬರುತ್ತದೆ. ಜನರಲ್ಲಿ ಆಸಕ್ತಿಯೂ ಬೆಳೆದು ಪತ್ರಿಕೆಗಳನ್ನು ಓದಲು ಕಾತರಿಸುತ್ತಾರೆ.

"ಆ ಮಾಸ್ತರರು ಪಠ್ಯ ಕ್ರಮದಂತೆ ಪಾಠ ಮಾಡುವುದಿಲ್ಲ" ಎಂದು ಯಾರಾದರೂ ಪಾಲಕರು ಆಕ್ಷೇಪಿಸಿದಾಗ, ಆ ಮಾಸ್ತರರ ಅಭಿಮಾನಿ, "ಎಂಥಾ ಮಾತನಾಡುತ್ತೀರಿ ? ಮಾಸ್ತರರು ಬಹಳ ಒಳ್ಳೆಯ ಫೋಟೋ ಗ್ರಾಫರ್ ; ಬಹಳ ಚಂದ ಫೋಟೋ ತೆಗೆಯುತ್ತಾರೆ. ಇದನ್ನು ಗುರುತಿಸಲು ಆಗಲಿಲ್ಲವೆ ? ಮಾಸ್ತರ್ ತುಂಬಾ ಒಳ್ಳೆಯ ರೈತರು ; ಚೆನ್ನಾಗಿ ಇಳುವರಿ ತೆಗೆಯುತ್ತಾರೆ" ಎಂದು ಪಾಲಕರಿಗೆ ಉತ್ತರಿಸಿದರೆ ಹೇಗೋ ಹಾಗಿದೆ ತಮ್ಮ ಅಭಿಮಾನಿ ಸಂಪಾದಕರ ಉತ್ತರ. ಪಾಲಕರು ನಿರೀಕ್ಷಿಸುವುದು ಸರ್ಕಾರಿ ಸಂಬಳ

ಪಡೆದ ಶಿಕ್ಷಕರು ಮಕ್ಕಳಿಗೆ ಸರಿಯಾಗಿ ಪಾಠ ಮಾಡುತ್ತಾರೋ ಇಲ್ಲವೋ ಎಂಬುದನ್ನೇ ವಿನಾ ಆತ ಚಂದ ಫೋಟೋ ತೆಗೆಯುತ್ತಾರೆ, ಭೂಮಿಯಲ್ಲಿ ಒಳ್ಳೆಯ ಬೆಳೆ ತೆಗೆಯುತ್ತಾರೆ ಎಂಬುದನ್ನಲ್ಲ. ನಾನು ಕಲ್ಯಾಣ ಕಿರಣದ ಅಕ್ಟೋಬರ್ 2000ರ ಸಂಚಿಕೆಯಲ್ಲಿ ವಿಡಂಬಿಸಿದ್ದು ಗಣಪತಿ ಪೂಜೆ ಮತ್ತು ತಮ್ಮ ಶಿಷ್ಯರ ಕಡುಬಿನ ಕಾಯಕವನ್ನು, ತಾವು ವಿದ್ಯಾಸಂಸ್ಥೆ ತೆರೆದು ವಿದ್ಯಾದಾಸೋಹ ಮಾಡಿರುವುದನ್ನಲ್ಲ. ಪ್ರಶ್ನೆ ಪತ್ರಿಕೆಯಲ್ಲಿ ಒಂದೊಂದು ಪ್ರಶ್ನೆಗೂ ಬೇರೆ ಬೇರೆ ಅಂಕಗಳುಂಟು. ಹಾಗೆಯೇ ಗುರುವಿನ ವ್ಯಕ್ತಿತ್ವಕ್ಕೂ ಬೇರೆ ಬೇರೆ ಮುಖಗಳಿರುವುವು. ಆಯಾ ಸಾಧನೆಗೆ ಸೂಕ್ತ ಮನ್ನಣೆ ಉಂಟು.

1. ವಿರಕ್ತ ಜೀವನದ ವಿಧಾನ ಸ್ವೀಕರಿಸಿದ ಧಾರ್ಮಿಕ ಗುರು ತನ್ನ ಧರ್ಮ ವಿಧಿಸಿದ ಕಟ್ಟಳೆಯಂತೆ ನಡೆಯುವರೆ ?
2. ತನ್ನ ಧರ್ಮವನ್ನು ಅದಕ್ಕೆ ಚ್ಯುತಿ ಬರದಂತೆ ಬೋಧೆ ಮಾಡುವರೆ ?
3. ತನ್ನ ಧರ್ಮ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆಯೆ ? ಪರಧರ್ಮ ಕುರಿತು ಅಧ್ಯಯನವಿದೆಯೆ ?
4. ಕೇವಲ ವೈಯಕ್ತಿಕ ಆತ್ಮೋದ್ಧಾರದಲ್ಲಿ ಆಸಕ್ತರಾಗದೆ ಸಮಾಜದ ಹಿತವನ್ನು ಬಯಸುವುದು ಸಹ ತ್ಯಾಗಿಯ ಕರ್ತವ್ಯ. ಈ ದಿಶೆಯಲ್ಲಿ ಗುರುವಾಗಿ ಪಾರಮಾರ್ಥಿಕ ವಿದ್ಯೆಯನ್ನು ಜನತೆಗೆ ಬೋಧೆ ಮಾಡಲಾಗುತ್ತಿದೆಯೆ ?
5. ಸಮಾಜಕ್ಕೆ ಅಗತ್ಯವಾದ, ಉಪಜೀವನದ ವಿದ್ಯೆಗೆ ಅಗತ್ಯವಿರುವ ಲೌಕಿಕ ಶಿಕ್ಷಣ ಕೊಡುವುದು ವಿದ್ಯಾದಾನ ; ಇದೂ ಗುರುವಿನ ಕರ್ತವ್ಯವಲ್ಲವೆ ?

ಇಂಥ ಹತ್ತಾರು ಪ್ರಶ್ನೆಗಳನ್ನು ಗುರುವು ಎದುರಿಸಬೇಕಾಗುತ್ತದೆ. ತಾವು ಇಷ್ಟಲಿಂಗಧಾರಿ ಧರ್ಮದ ಅನುಯಾಯಿಗಳು ; ಏಕೆಂದರೆ ಭಕ್ತರ ಮನೆಗೆ ಹೋದಾಗ ಇಷ್ಟಲಿಂಗ ಪೂಜೆ ಮಾಡುತ್ತೀರಿ ಎಂದು ಕೇಳಿದ್ದೇನೆ. ಇಷ್ಟಲಿಂಗ ಧರಿಸಿದವರು ಪಾತಿವ್ರತ್ಯ ಭಕ್ತಿಯನ್ನು ಅನುಸರಿಸಬೇಕೆಂದು ಧರ್ಮಗುರುವಿನ ಕಟ್ಟಪ್ಪಣೆ. ವಿವಾಹಿತ ಸ್ತ್ರೀ ತನ್ನ ಪತಿಯನ್ನಲ್ಲದೆ ಇತರರನ್ನು ಮನಸಲ್ಲೂ ಬಯಸಬಾರದು ಎಂಬುವುದನ್ನು ಭಾರತೀಯ ನೀತಿ ಶಾಸ್ತ್ರ ಹೇಳಿದಂತೆ, ಇಷ್ಟಲಿಂಗದ ಹೊರತು ಅನ್ಯದೈವವನ್ನು ಪೂಜಿಸಬಾರದು ಎಂಬುದನ್ನು ನಮ್ಮ ಧರ್ಮ ಶಾಸ್ತ್ರವಾದ ವಚನ ಸಾಹಿತ್ಯ ಹೇಳುತ್ತದೆ.

1. ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ
   ನಂಬ ಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ
   ಬೇಡ ಬೇಡ ! ಅನ್ಯ ದೈವದ ಸಂಗ ಹೊಲ್ಲ
   ಬೇಡ ಬೇಡ ! ಪರದೈವದ ಸಂಗ ಹೊಲ್ಲ
   ಅನ್ಯ ದೈವವೆಂಬುದು ಹಾದರ ಕಾಣಿರೋ
   ಲಿಂಗದೇವ ಕಂಡಡೆ ಮೂಗಕೊಯ್ವ ಕಾಣಿರೋ ! -ಬ.ವ.ದೀ. 615
2. ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
   ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
   ಇದ್ದಡೇನೋ ಶಿವಶಿವಾ ಹೋದಡೇನೋ
   ಲಿಂಗದೇವಾ ಹಡೆದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ. -ಬ.ವ.ದೀ. 111
3. ಬದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ, ರಸವನು ಹಡೆಯಲು ಬಾರದು.
   ಮಳಲ ಹೊಸೆದಡೆ ಹೊಸೆದಂತಲ್ಲದೆ, ಸರವಿಯ ಹಡೆಯಲು ಬಾರದು.

   ನೀರ ಕಡೆದಡೆ ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು
   ನಮ್ಮ ಲಿಂಗದೇವನಲ್ಲದೆ ಅನ್ಯ ದೈವಕ್ಕೆರಗಿದಡೆ
   ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಆಯಿತ್ತಯ್ಯಾ. -ಬ.ವ.ದೀ 551
4. ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ ?
   ತಪ್ಪಿತ್ತು ಗಣಪದವಿ ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ
   ಒಬ್ಬರಿಗೆ ಆಳಾಗಿ ಇನ್ನೊಬ್ಬರನೋಲೈಸುವ
   ನಿರ್ಬುದ್ಧಿ ಮನುಜರನೇನೆಂಬೆ, ಲಿಂಗದೇವಾ -ಬ.ವ.ದೀ 617
5. ದೇವನೊಬ್ಬ ನಾಮ ಹಲವು ?
   ಪರಮ ಪತಿವ್ರತೆಗೆ ಗಂಡನೊಬ್ಬ
   ಮತ್ತೊಂದಕ್ಕೆರಗಿದಡೆ ಕಿವಿ-ಮೂಗ ಕೊಯ್ಯುವನು !
   ಹಲವು ದೈವದ ಎಂಜಲ ತಿಂಬುವವರನೇನೆಂಬೆ ಲಿಂಗದೇವಾ ? -ಬ.ವ.ದೀ 612

ಇದೆಲ್ಲ ನಿಮ್ಮ ಸಂಪಾದಕರು ತಿಳಿದಂತೆ ನನ್ನ ಕಲ್ಪನೆಯ ಲಿಂಗಾಯತ ಧರ್ಮವಲ್ಲ ; ಧರ್ಮಪಿತ ಬಸವಣ್ಣನವರ ಪರಿಕಲ್ಪನೆಯ ಲಿಂಗಾಯತ ಧರ್ಮ. ಅಂದಾಗ ತಾವು ಮತ್ತು ತಮ್ಮ ಶಿಷ್ಯರು ಮಠದಲ್ಲಿ ಮಂಟಪ ಕಟ್ಟಿ ಗಣಪತಿಯನ್ನಿಟ್ಟು ಪೂಜೆ ಮಾಡುವುದನ್ನು ಸಂಕೋಚವಿಲ್ಲದೆ ಮುದ್ರಿಸಿದ್ದೀರಲ್ಲಾ ; ಇದು ನ್ಯಾಯವೆ ?

ಡೊಳ್ಳು ಹೊಟ್ಟೆಯ, ಮೊರದಗಲ ಕಿವಿಯ, ಆನೆ ಸೊಂಡಿಲಿನ ಪುರೋಹಿತಶಾಹಿಯ ಪ್ರತಿನಿಧಿಯಾಗಿ ಶಿವಭಕ್ತ ರಾವಣನು ಶಿವಲಿಂಗವನ್ನು ಒಯ್ದು ಪೂಜಿಸಬಾರದೆಂದು ಮರಳಿನಲ್ಲೇ ಹುದುಗಿಸಿದ ಧೂರ್ತ ಗಣಪತಿ ನಮಗೆ ಪೂಜಾರ್ಹನಲ್ಲ. ನಮ್ಮ ಗಣದ ಅಂದರೆ ಸಮೂಹದ. ಪತಿ ಅಂದರೆ ಒಡೆಯ ಆದಿಗುರು ಬಸವಣ್ಣನವರು. ಬೌದ್ಧರಿಗೆ ಬುದ್ಧ, ಜೈನರಿಗೆ ಮಹಾವೀರ, ಕ್ರೈಸ್ತರಿಗೆ ಏಸು, ಮುಸ್ಲೀಮರಿಗೆ ಮೊಹಮ್ಮದ್ ಗಣಪತಿಗಳಾದಂತೆ ನಮ್ಮ ಗಣಪತಿ ಬಸವಣ್ಣನವರು. ಅಂದಾಗ ತಾವು ಸ್ವಧರ್ಮಕ್ಕೆ ವಿರುದ್ಧವಾಗಿ ಗಣಪತಿಯ ಗುಡಿಕಟ್ಟುತ್ತೀರಿ. ಕಟ್ಟಲ್ಪಟ್ಟ ಅನ್ಯ ದೇವತೆಗಳ ಗುಡಿಗಳ ಪ್ರಾರಂಭೋತ್ಸವಕ್ಕೆ ಹೋಗುತ್ತೀರಿ. ಲಿಂಗಾಯತ ಗುರುಗಳೆಂದು ನಂಬಿ ನಿಮ್ಮನ್ನು ಅನುಕರಿಸುವ ಲಿಂಗಾಯತರು ತಪ್ಪು ದಾರಿ ತುಳಿಯಲು ಇದರಿಂದ ಅವಕಾಶವಾಗದೆ ? ನಾವು ನಿಮ್ಮನ್ನು ಕೇಳುತ್ತೇವೆ. ಪೂಜ್ಯ ಪೇಜಾವರ ಶ್ರೀಗಳನ್ನಾಗಲಿ, ಪೂಜ್ಯ ಆದಿ ಚುಂಚನಗಿರಿಯ ಶ್ರೀಗಳನ್ನಾಗಲೀ ಕೇಳುವುದಿಲ್ಲ. ಏಕೆಂದರೆ ಅವರು ಆಶ್ರಯಿಸಿರುವ ವೈದಿಕ ಧರ್ಮದ ಸಂವಿಧಾನವೇ ಹಾಗಿದೆ. ನಿಮ್ಮನ್ನು ಕೇಳಲು ನಮಗೆ ಹಕ್ಕಿದೆ. ಏಕೆಂದರೆ ನೀವು ಇಷ್ಟಲಿಂಗಧಾರಿಗಳು. ಹೀಗಾಗಿ ನಮಗೂ ನಿಮಗೂ-ಪರಸ್ಪರ ಬೇಡವಾಗಿದ್ದಿರಬಹುದಾದರೂ, ಒಂದು ಧಾರ್ಮಿಕ ಸಂಬಂಧವಿದೆ. ನೀವು ಅಥವಾ ನಿಮ್ಮ ಅಭಿಮಾನಿಗಳಾದ ಸಿದ್ಧಗಂಗಾ ಪತ್ರಿಕಾ ಸಂಪಾದಕರು ಕೇಳಬಹುದು, ''ನಾವು ವೈದಿಕ ಸಂವಿಧಾನವನ್ನು ಅನುಸರಿಸುತ್ತೇವೆ. ನಿಮ್ಮ ಪ್ರಶ್ನೆ ನಮಗೆ ಸಂಬಂಧಿಸದು'' ಎಂದು. ಅದು ಸಾಧ್ಯವಿಲ್ಲ ; ಭಾರತದ ಪೌರತ್ವ ಸ್ವೀಕರಿಸಿದ ಮೇಲೆ ಭಾರತೀಯ ಸಂವಿಧಾನ ಒಪ್ಪಲೇ ಬೇಕು. ಭಾರತದ ಪೌರತ್ವ ಸ್ವೀಕರಿಸಿ ಪಾಕಿಸ್ಥಾನದ ಸಂವಿಧಾನಕ್ಕೆ ಬದ್ಧನಾದರೆ ಅದು ರಾಷ್ಟ್ರದ್ರೋಹ. ಭಾರತ ಪೌರತ್ವ, ಸಂವಿಧಾನ ಹೇಗೆ ಅವಿಭಾಜ್ಯವೋ ಹಾಗೆ ಇಷ್ಟಲಿಂಗಧಾರಣೆ-ಬಸವಾದೇಶ-ವಚನ ಸಾಹಿತ್ಯ ಸಂವಿಧಾನ ಪರಸ್ಪರ ಸಂಬಂಧಿಗಳು. ಕೇವಲ ಬಸವಭಕ್ತಿ ಅಳವಡಿಸಿಕೊಂಡರೆ ಸಾಲದು ; ಅವರು ಬೋಧಿಸಿದ ಏಕದೇವನಿಷ್ಠೆಯೂ ಅಷ್ಟೇ ಅಗತ್ಯ. ಗುರು ಬಸವಣ್ಣನವರ ಕಾಯಕವೇ ಕೈಲಾಸ ಅಳವಡಿಸಿಕೊಂಡು ದುಡಿದರೆ ಸಾಲದು. ಅವರು ಬೋಧಿಸಿದ ಪಂಚ

ಆಚಾರಗಳ ಆಚರಣೆಯೂ ಅಷ್ಟೇ ಮುಖ್ಯ.

ನೀವು ವಿದ್ಯಾರ್ಥಿಗಳಿಗೆ ಕಡುಬು ತಿನ್ನಿಸಬೇಕೆಂಬ ಉದಾತ್ತ ಗುಣ ಹೊಂದಿರುವುದು ಸ್ತುತ್ಯರ್ಹ. ಆದರೆ ಆ ಕಡುಬನ್ನು ಗಣಪತಿ ಪೂಜೆ ಮಾಡಿ, ಗಣಪತಿ ಹಬ್ಬದಂದು ನೈವೇದ್ಯ ಮಾಡಿ ತಿನ್ನಿಸಬೇಕು ಎಂಬುದೇ ಮಹಾನ್‌ದೋಷ ಲಿಂಗಾಯತ ಧರ್ಮದ ಜೀವಾಳವಾದ ಏಕದೇವೋಪಾಸನೆಯ ಮರ್ಮವನ್ನರಿತ ಗೃಹಸ್ಥ ಶರಣರು ಸಹ ಪೌರಾಣಿಕ ದೇವತೆಗಳ ಪೂಜೆ ತೊರೆಯುತ್ತಿರುವಾಗ ನೀವು ಸ್ವತ: ನಿಂತು ಮಾಡಿಸುವುದು ಸರಿಯೆ ? ಅದನ್ನು ಹೆಮ್ಮೆಯಿಂದ ಫೋಟೋ ತೆಗೆಸಿಕೊಂಡು ಮುದ್ರಿಸಿ ಪ್ರದರ್ಶಿಸುವುದು ನಿಜಕ್ಕೂ ಸೂಕ್ತವೆ ?

ನಿಮ್ಮ ಆಚರಣೆಯಲ್ಲಿ ಗಣಪತಿ ಪೂಜೆ ಇದೆ. ವಚನ ಸಾಹಿತ್ಯದಲ್ಲಿ ಅದರ ನಿಷೇಧವಿದೆ. ಹಾಗಾದರೆ ಲಿಂಗಾಯತರು ವಚನ ಸಾಹಿತ್ಯ ಓದಿ ನಿಮ್ಮನ್ನು ತಪ್ಪಿತಸ್ಥರು ಎನ್ನಬೇಕೋ ? ನಿಮ್ಮ ಆಚರಣೆ ನೋಡಿ ವಚನಕಾರರೇ ತಪ್ಪಿತಸ್ಥರು ಎನ್ನಬೇಕೋ ? ಈಗ ಇದಕ್ಕೆ ನಮಗೆ ಖಚಿತ ಉತ್ತರವನ್ನು ನೀವಾಗಲೀ, ನಿಮ್ಮ ಪರವಾಗಿ ಸಿದ್ಧಗಂಗಾ ಪತ್ರಿಕೆಯ ಸಂಪಾದಕರಾಗಲೀ ಕೊಡಬಹುದೆ ?

"ನೀವು ಆಚರಿಸುತ್ತಿರುವ ಧರ್ಮದಲ್ಲಿ ನನ್ನ ಲಿಂಗಾಯತವನ್ನು ಕಾಣಲು ಮೊಸರಿನಲ್ಲಿ ಕಲ್ಲು ಹುಡುಕುವ ಪ್ರಯತ್ನ ನಡೆಸಿದ್ದಾರೆ'' ಎಂದಿದ್ದಾರೆ ಸಿದ್ಧಗಂಗಾ ಪತ್ರಿಕೆ ಸಂಪಾದಕರು. ಮೊಸರಿನಲ್ಲಿ ಕಲ್ಲು ಹುಡುಕುವುದು ಬಹಳ ಸೂಕ್ಷ್ಮವಾಗಿರುವುದು. ಯಾವ ಸೂಕ್ಷ್ಮ ದೃಷ್ಟಿಯೂ ಬೇಡ ; ನಿಮ್ಮ ಆಚರಣೆಗಳು ಅಷ್ಟು ಸ್ಪಷ್ಟವಾಗಿ ಜನತೆಗೆ ತೋರಿಬರುತ್ತವೆ. ಗುರು (ಬಸವಣ್ಣ)-ಲಿಂಗ (ಇಷ್ಟಲಿಂಗ) ಜಂಗಮ (ಶರಣ ಪರಂಪರೆಯ ಯೋಗಿಗಳು) ಹೊರತಾಗಿ ಲಿಂಗಾಯತರು ಅನ್ಯವಸ್ತುಗಳನ್ನು ಆರಾಧಿಸಬಾರದು. ಅಷ್ಟಾವರಣ ಬಿಟ್ಟು ಅನ್ಯವಸ್ತುಗಳನ್ನು ಧರಿಸಿ ಆರಾಧಿಸಬಾರದು. ಕರಿದಾರ ಕಟ್ಟುವುದು. ತಾಯಿತ ಕಟ್ಟುವುದು ಅಷ್ಟಾವರಣಕ್ಕೆ ಸಂಬಂಧಿಸಿಲ್ಲ. ಮಾನಸಿಕವಾಗಿ ದುರ್ಬಲರಾಗಿ ತಮ್ಮಂತಹ ಗುರುಗಳ ಅನುಗ್ರಹಕ್ಕಾಗಿ ಬರುವರು. ಅನುಗ್ರಹದಲ್ಲಿ ಶಕ್ತಿ ಇದೆ. ಆಗ ತಾವು ಅಂಥ ಜನರಿಗೆ ವಿಭೂತಿ ಮಂತ್ರಿಸಿ ಕೊಡಬಹುದು; ರುದ್ರಾಕ್ಷಿ ಮಂತ್ರಿಸಿ ಕಟ್ಟಬಹುದು, ಓಂ ನಮ: ಶಿವಾಯ ಓಂ ಶ್ರೀ ಗುರು ಬಸವಲಿಂಗಾಯ ನಮ: ಮಂತ್ರ ಕಲಿಸಬಹುದು. ಧರ್ಮಗುರು ಬಸವಣ್ಣನವರ ಕೊರಳ ಪದಕ ಕಟ್ಟಿ, ಆಶೀರ್ವದಿಸಬಹುದು. ಕರಿದಾರ, ತಾಯಿತ, ತೆಂಗಿನಕಾಯಿ, ನಿಂಬೆ ಹಣ್ಣಗಿಂತಲೂ ಹೆಚ್ಚಿನ ಅನುಗ್ರಹ ಶಕ್ತಿಯನ್ನು ವಿಭೂತಿ, ರುದ್ರಾಕ್ಷಿ ಸಂವಹನ ಮಾಡಬಲ್ಲವು. ಸರ್ವಜ್ಞ ಹೇಳುತ್ತಾನೆ :

ದರುಶನ ಆರರಿಂ ಪುರುಷರು ಮೂವರಿಂ
ಪರತತ್ತ್ವದಿರವು ಬೇರೆಂದು । ತೋರಿದ
ಗುರು ತಾನೆ ದೈವ ಸರ್ವಜ್ಞ ॥

ಸರ್ವಜ್ಞನು ಬಸವ ಮಾರ್ಗಿ. ಲಿಂಗಾಯತ ಧರ್ಮದ ಗುರು ಏನನ್ನು ಕಲಿಸುತ್ತಾನೆ ಎಂಬುದನ್ನು ಈ ತ್ರಿಪದಿಯಲ್ಲಿ ಹೇಳಿದ್ದಾನೆ. ಷಡ್‌ದರ್ಶನಗಳಾದ ಸಾಂಖ್ಯ-ಯೋಗ, ನ್ಯಾಯ-ವೈಶೇಷಿಕ, ಪೂರ್ವ ಮೀಮಾಂಸ-ಉತ್ತರ ಮೀಮಾಂಸ ಇವುಗಳಿಂದ, ಬ್ರಹ್ಮ-ವಿಷ್ಣು-ಮಹೇಶ್ವರ ಎಂಬ ಮೂವರು ಐತಿಹಾಸಿಕ ಪುರುಷರಿಂದ ಪರತತ್ತ್ವವು ಬೇರೆ. ಅದು ನಿರಾಕಾರ, ನಿರ್ಗುಣ ಎಂಬುದನ್ನು ಬಿಂಬಿಸಿ, ಲಿಂಗಾಯತ ಗುರು ಅಂಥ ದೇವನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸಲು ಹೇಳುತ್ತಾನೆ. ಅಂದಾಗ ನಮ್ಮ ಪೂಜಾ ವಿಧಾನ, ಮಂತ್ರ, ಪೂಜಿಸುವ ವಸ್ತು ಲಿಂಗಾಯತ ಧರ್ಮದ ಚೌಕಟ್ಟಿನಲ್ಲಿರಬೇಕಷ್ಟೆ ?

ದೇವನು ಒಬ್ಬನೇ ! ಅವನೇ ಸೃಷ್ಟಿಕರ್ತ-ಪಾಲಕ-ಲಯಕರ್ತನೂ ಸಹ. ಅವನೇ ವಿಘ್ನ ನಿವಾರಕ, ವಿದ್ಯಾದಾತ, ಧನದಾತ, ಶಕ್ತಿದಾತ. ಆದ್ದರಿಂದ ವಿಘ್ನ ನಿವಾರಣೆಗಾಗಿ ಗಣಪತಿಯನ್ನು, ವಿದ್ಯೆಗಾಗಿ ಸರಸ್ವತಿಯನ್ನು, ಹಣಕ್ಕಾಗಿ ಲಕ್ಷ್ಮಿಯನ್ನೂ, ಶಕ್ತಿಗಾಗಿ ದುರ್ಗೆಯನ್ನು ಆಕಾರ ನೀಡಿ

ಪೂಜಿಸುವುದು ತಪ್ಪು. ತೋಂಟದ ಸಿದ್ದಲಿಂಗೇಶ್ವರರ ಸಾಧನೆ ಬಹುದೊಡ್ಡದು. ಬಸವ ಧರ್ಮವನ್ನು ಸಂಕಷ್ಟ ಕಾಲದಲ್ಲಿ ಪುನಶ್ಚೇತನಗೊಳಿಸಿದ ಮಹಾಯೋಗಿಗಳು. ಶರಣ ಸಂಸ್ಕೃತಿಗನುಗುಣವಾಗಿ ಅವರನ್ನು ಪೂಜಿಸಿ, ಕೊಂಡಾಡಿರಿ. ಆದರೆ ಅವರನ್ನೊಂದು ದೇವತೆಯಂತೆ ಗರುಡ ವಾಹನ, ವೃಷಭವಾಹನ ಎಂದೆಲ್ಲ ಉತ್ಸವಗಳ ಮೂಲಕ ಮೆರೆಸುವುದು ಸರಿಯೆ ?

ವಚನ ಸಾಹಿತ್ಯದ ವೈಚಾರಿಕತೆ, ಮಾನವೀಯ ಕಳಕಳಿ, ಸೈದ್ಧಾಂತಿಕ ಆಳ ಕಂಡು ಜಗತ್ತೇ ಅಚ್ಚರಿ ಪಡುತ್ತಿದೆ. ಜಾತಿ ವಾದಿಗಳಾದ ಪಂಚಪೀಠದ ಗುರುಗಳು, ಅವರ ಕಟ್ಟಾ ಅನುಯಾಯಿಗಳು ಬಿಟ್ಟರೆ ಉಳಿದ ಲಿಂಗಾಯತರು ಮತ್ತು ಲಿಂಗಾಯತೇತರು ವಚನ ಸಾಹಿತ್ಯದ ಆರಾಧಕರಾಗಿದ್ದಾರೆ. ನಿಮ್ಮ ಧಾರ್ಮಿಕ ಸಂವಿಧಾನವಾದ ವಚನ ಸಾಹಿತ್ಯ ಕಲಿಸದೆ ನಿಮ್ಮಲ್ಲಿ ವಿದ್ಯಾಭ್ಯಾಸ ಮಾಡುವ ಸ್ವಾಮಿಗಳಿಗೆ ವೈದಿಕ ಧರ್ಮದ ಸಂವಿಧಾನವಾದ ವೇದ ಆಗಮಗಳನ್ನೇಕೆ ಕಲಿಸುವಿರಿ ? ಇವೆಲ್ಲ ಆಚರಣೆಗಳ ಅಭ್ಯಾಸ, ಮೊಸರಿನಲ್ಲಿರುವ ಕಲ್ಲಿನಂತಿರದೆ, ಸಿದ್ಧಗಂಗೆಯ ಹೆಬ್ಬಂಡೆಯಂತೆ ಬಸವ ಭಕ್ತರ ಕಣ್ಣಿಗೆ ರಾಚುತ್ತವೆ.

ಕಡುಬನ್ನು ವಿದ್ಯಾರ್ಥಿಗಳಿಗೆ ತಿನ್ನಿಸಬೇಕೆಂಬ ಮಾತೃ ಹೃದಯ ತಮ್ಮದು. ಆದರೆ ಅದನ್ನು ಅಡಿಗೆಯ ಭಟ್ಟರೇ ಮಾಡಬಲ್ಲರು. ತಮ್ಮ ಶಿಷ್ಯರು ಏನೋ ಘನ ಸಾಧನೆ ಮಾಡಿದಂತೆ ಕಡುಬು ಮಾಡುವ ಫೋಟೋಕ್ಕೆ ಪೋಸ್ ಕೊಡದೆ ಅದೇ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಇಷ್ಟಲಿಂಗ ಪೂಜೆ ಕಲಿಸಿದ್ದರೆ, ಧರ್ಮ ಬೋಧೆ ಮಾಡಿದ್ದರೆ ಸಮಯದ ಸಾರ್ಥಕತೆ ಆಗುತ್ತಿತ್ತಲ್ಲವೆ ?

ಮಾನವ ಧರ್ಮ

" ಪ್ರತಿ ನಿತ್ಯ 7000 ಚರ ಜಂಗಮರ ಹಸಿದ ಹೊಟ್ಟೆಗೆ ಪ್ರಸಾದ ದಾಸೋಹ ಮಾಡಿಸುವ ತಮ್ಮದು ಮಾನವ ಧರ್ಮ '' ಎಂದು ತಮ್ಮನ್ನು ಎತ್ತಿ ಹಿಡಿದು, ನೂರು ಪ್ರವಚನಗಳಿಗಿಂತ, ಮಾತುಗಳಿಗಿಂತ ಹಸಿದು ಬಂದವನಿಗೆ ಅನ್ನವಿಕ್ಕುವುದು ನಿಜ ಮಾನವ ಧರ್ಮ ಎಂದು ತಮ್ಮ ಅಭಿಮಾನಿ ಸಂಪಾದಕರು ನಮ್ಮ ಜ್ಞಾನ ದಾಸೋಹವನ್ನು ತೆಗಳಿದ್ದಾರೆ. ಸಂತೋಷ. ಲಿಂಗಾಯತ ಗುರುಗಳು ತಮ್ಮ ಧರ್ಮ ಬೋಧೆಯ ಕಾಯಕವನ್ನು ಚೆನ್ನಾಗಿ ಮಾಡಿದ್ದರೆ ಇಂದಿನ ಸಮಾಜ ಇಷ್ಟು ಅಜ್ಞಾನದಲ್ಲಿರುತ್ತಿರಲಿಲ್ಲ. ಒಂದು ಕಾಲವಿತ್ತು ವಿದ್ಯಾದಾನ ಅತೀವ ಅಗತ್ಯವಿತ್ತು. ಸಿದ್ಧಗಂಗಾ ಮಠ, ಸುತ್ತೂರು ಮಠ ಇತ್ಯಾದಿ ಶಿಕ್ಷಣವಿಲ್ಲದಿದ್ದ ಲಿಂಗಾಯತರು ಮತ್ತು ಲಿಂಗಾಯತೇತರರಿಗೆ ಶಿಕ್ಷಣ ನೀಡಿ ಮಹದುಪಕಾರ ಮಾಡಿದವು. ಈಗಲೂ ಸಿದ್ಧಗಂಗಾ ಮಠ ಬಡ ವಿದ್ಯಾರ್ಥಿಗಳಿಗೆ ದೊಡ್ಡ ಆಸರೆಯಾಗಿದೆ. ಆ ಬಗ್ಗೆ ಯಾರೇ ಆದರೂ ಗೌರವಿಸಬೇಕು.

ಆದರೆ ಸರ್ಕಾರದ ಸಹಾಯ ಧನ ಪಡೆದು ವಿದಾರ್ಥಿಗಳಿಗೆ ಇಡುವ ಊಟ ಬಸವ ಧರ್ಮದ ದಾಸೋಹವಲ್ಲ ; ವಿದ್ಯಾರ್ಥಿಗಳು ಚರ ಜಂಗಮರಲ್ಲ. ನಿಮ್ಮನ್ನು ಹೊಗಳುವ ಭರದಲ್ಲಿ ಇಂಥ ಪವಿತ್ರ ಪದಗಳ ಅರ್ಥ ಕೆಡಿಸದೆ ಇರಲು ಸಿದ್ಧಗಂಗಾ ಸಂಪಾದಕರಿಗೆ ತಿಳಿಸಿರಿ. ದೊಡ್ಡ ದೊಡ್ಡ ಮಠಗಳಲ್ಲಿ ತಿಮಿಂಗಲಗಳಂತೆ ಸೇರಿಕೊಂಡು ಮೇಯುವ ಹಾವಪ್ಪ, ನುಂಗಪ್ಪಗಳನ್ನು ತಮ್ಮ ಸಂಪಾದಕರು ಚರ ಜಂಗಮರೆಂದು, ಅವರು ಮೇಯುವುದೆಲ್ಲ ಜಂಗಮ ದಾಸೋಹ ಎಂದೂ ಬಣ್ಣಿಸಿಬಿಟ್ಟಾರು ?!

ಅನ್ನದಾನವು ಬಹಳ ಶ್ರೇಷ್ಠ ; ವಿದ್ಯಾದಾನ ಅದಕ್ಕೂ ಶ್ರೇಷ್ಠ, ಜ್ಞಾನ ದಾನ ಈ ಎಲ್ಲಕ್ಕೂ ಶ್ರೇಷ್ಠ. ಉಪಜೀವನದ ದಾರಿಯನ್ನು ತೋರಿಸುವ ಸಾಧನ ವಿದ್ಯೆಯಾದರೆ, ಜೀವನದ ಸಾರ್ಥಕ್ಯತೆ ಕಲಿಸುವ ಸಾಧನ ಜ್ಞಾನ. ಜಂಗಮದ ಕರ್ತವ್ಯ ಜ್ಞಾನದಾನ. ಅವನು ನಿಂತ ನೀರಿನ ಮಡುವಲ್ಲ, ಜ್ಞಾನ ನೀಡುತ್ತ ಹರಿವ ಜೀವಂತ ವಾಹಿನಿ. ಪ್ರಭುದೇವರು, ಸಿದ್ಧಲಿಂಗೇಶ್ವರರು, ಮಾದೇಶ್ವರರು ಬದುಕಿ ತೋರಿಸಿದ್ದು ಅದೇ ಜಂಗಮನ ಜೀವನವನ್ನು.

ಕೆಲವು ತಿಮಿಂಗಿಲಗಳು ದೊಡ್ಡ ದೊಡ್ಡ ಮಠಗಳಲ್ಲಿ ಸೇರಿಕೊಂಡು ಬಡ್ಡಿರಹಿತವಾಗಿ ಸಾಲ ಪಡೆದು (ಅದನ್ನು ಈ ಜೀವಮಾನಗಳಲ್ಲಿ ತೀರಿಸುತ್ತಾರೋ ಇಲ್ಲವೋ) ತಮ್ಮ ವ್ಯಾಪಾರ ವ್ಯವಹಾರಕ್ಕೆ ಬಳಸುತ್ತಾರೆ ಎಂದು ಕೆಲವು ನಾಸ್ತಿಕರು, ಧರ್ಮನಿರಾಸಕ್ತರು ವ್ಯಂಗ್ಯವಾಡುವುದುಂಟು. ಇಂಥವರನ್ನು ಜಂಗಮರೆಂದು, ಅವರು ಮಠಗಳಿಂದ ಪಡೆದ ಹಣವನ್ನು ಜಂಗಮ ದಾಸೋಹಕ್ಕೆ ಸಲ್ಲಿದ ಹಣ ಎಂದು ಕರೆಯಬಹುದೋ ಎಂದು ತಮ್ಮ ಪತ್ರಿಕಾ ಸಂಪಾದಕರು ವಿವರಿಸಿದರೆ, ನಮಗೆ ಇನ್ನು ಮುಂದೆ ವಚನಗಳಿಗೆ ವ್ಯಾಖ್ಯಾನ ಬರೆಯಲು ಅನುಕೂಲವಾಗುತ್ತದೆ.

"ಶಿಕ್ಷಣ ಒಂದು ವ್ಯಾಪಾರವಾಗಿದೆ" ಎಂದು ಟೀಕಿಸಿ ಶಿಕ್ಷಣ ಮಂತ್ರಿಗಳು ಈಗ ಅನೇಕರನ್ನು ಎದುರು ಹಾಕಿಕೊಂಡಿರುವುದು ತಮಗೆ ಗೊತ್ತಿರಬಹುದು. ಹೇರಳವಾಗಿ ಕ್ಯಾಪಿಟೇಷನ್ ಶುಲ್ಕ ತಂದುಕೊಟ್ಟು ಅನೇಕರಿಗೆ ಮೇಯಲು ಹುಲ್ಲುಗಾವಲಾಗಿರುವ ಶಿಕ್ಷಣ ಕ್ಷೇತ್ರ ಇಂದಿರುವ ಸ್ಥಿತಿಯಲ್ಲಿ ಜಂಗಮದ ದಾಸೋಹದ ವ್ಯಾಪ್ತಿಗೆ ಬರಲು ಸಾಧ್ಯವಿಲ್ಲ.

ಬಸವಣ್ಣನವರ ತತ್ವಾದರ್ಶನಗಳ ಪ್ರಯೋಗಶಾಲೆ ಎಂಬ ಶೀರ್ಷಿಕೆಯಡಿಯಲ್ಲಿ ಸಿದ್ಧಗಂಗಾ ಮಠ ಬಸವಣ್ಣನವರ ತತ್ವಾದರ್ಶನಗಳ ಪ್ರಯೋಗಶಾಲೆ ಎಂದು ಸಂಪಾದಕರು ತಿಳಿಸಿ ಕಡೆಯಲ್ಲಿ ಮಾತೆ ಮಹಾದೇವಿಯವರ ಸರ್ಟಿಫಿಕೇಟ ಅಗತ್ಯವಿಲ್ಲ ಎಂದಿದ್ದಾರೆ. ತಮಗೆ ಸಿದ್ಧಗಂಗಾ ಪತ್ರಿಕೆಯ ಸಂಪಾದಕರೇ ದಿನ ನಿತ್ಯ ಹೊಗಳಿ ಹೊಗಳಿ ಸರ್ಟಿಫಿಕೇಟ್ ಕೊಡುತ್ತಿರುವಾಗ, ನೀವು ಅಂತರ್ ಅವಲೋಕನ ಮಾಡಿಕೊಳ್ಳುವುದಾದರೂ ಹೇಗೆ ?

ಇಂದು ಬಹುಪಾಲು ಲಿಂಗಾಯತ ಮಠಾಧೀಶರ ಪರಿಸ್ಥಿತಿ ಹೇಗಾಗಿದೆ ಎಂದರೆ ನಾಯಿ ಬಾಲ ಅಲ್ಲಾಡಿಸುವುದಕ್ಕಿಂತಲೂ ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆ. ಒಬ್ಬ ಸ್ವಾಮಿಗಳು ರುದ್ರಾಭಿಷೇಕ ಮಾಡಬಾರದು ಎಂದು ಭಾಷಣ ಮಾಡುತ್ತಿದ್ದರು. ಅವರ ಮಠದ ಗದ್ದುಗೆಗೆ ಹೋದಾಗ ರುದ್ರಾಭಿಷೇಕ ನಡೆದಿತ್ತು. ಇದೇಕೆ ಹೀಗೆ ಎಂದಾಗ, 'ನನಗೆ ಇಷ್ಟವಿಲ್ಲ, ಮಠದ ಭಕ್ತರ ಕಮಿಟಿಯವರು ಮಾಡುತ್ತಾರೆ' ಎಂದರು. ಇಂದೆಂಥಾ ದೌರ್ಬಲ್ಯ ?

ಡಾ|| ಚಿದಾನಂದ ಮೂರ್ತಿಯವರು ತಮ್ಮೊಂದು ಹೇಳಿಕೆಯನ್ನು ಬಹಳ ಚೆನ್ನಾಗಿ ನಗದೀಕರಿಸಿಕೊಳ್ಳುತ್ತಿದ್ದಾರೆ. ತಮಗೆ ಅರ್ಪಿಸಿರುವ ಪುಸ್ತಕ "ವೀರಶೈವ ಧರ್ಮ, ಭಾರತೀಯ ಸಂಸ್ಕೃತಿ" ಓದಿರಬಹುದು. ತಮ್ಮ ಹೇಳಿಕೆಯನ್ನು ಹೀಗೆ ಉಲ್ಲೇಖಿಸಿದ್ದಾರೆ. "ವೀರಶೈವ ಧರ್ಮ ಹಿಂದೂ ಧರ್ಮದ ಅರ್ಥಾತ್ ಶೈವ ಧರ್ಮದ ಒಂದು ಶಾಖೆ....... ಪುಟ 189) ಅಂದರೆ ನೀವು ಆಗ ವೀರಶೈವವು ಹಿಂದುದ ಅಂಗ ಎಂದು ಅಭಿಪ್ರಾಯ ಪಟ್ಟಿದ್ದೀರಿ.

ಬೆಂಗಳೂರಿನ ಮಲ್ಲೇಶ್ವರಂ ಮೈದಾನದಲ್ಲಿ ನವೆಂಬರ ತಿಂಗಳಲ್ಲಿ ವೀರಶೈವ ಮಹಾಸಭೆ ಒಂದು ಜಾಥಾ ಏರ್ಪಡಿಸಿದಾಗ, ತಮ್ಮ ಸನ್ನಿಧಿಯಲ್ಲಿ ನಡೆದ ಸಭೆಯಲ್ಲಿ ವೀರಶೈವರು ಹಿಂದುಗಳಲ್ಲ ಎಂದು ಘೋಷಿಸಲಾಯಿತು. ಅವರೊಡನೆ ಮಾತನಾಡುವಾಗ ಅವರಂತೆ, ಇವರೊಡನೆ ಮಾತನಾಡುವಾಗ ಇವರಂತೆ ಹೇಳುವುದು ನಿಮ್ಮ ಸ್ವಭಾವವೋ ಅಥವಾ ಮಹಾತಪಸ್ವಿ ಪುಸ್ತಕ ಮುದ್ರಣವಾಗುವಾಗಿನ ವಿಚಾರಕ್ಕೂ ಈಗಿನ ನಿಮ್ಮ ವಿಚಾರಕ್ಕೂ ನಿಮ್ಮಲ್ಲಿಯೇ ಬದಲಾವಣೆ ಆಗಿದೆಯೋ ? ನೀವು ಮೌನ ಮುರಿಯದೆ ಎಲ್ಲರಿಗೂ ಬೇಕಾಗುವವರು ಎಂದು ಕುಳಿತರೆ ನಿಮ್ಮ ಮೌನದ ದುರುಪಯೋಗವನ್ನು ಡಾ|| ಚಿ.ಮೂ ಅಥವಾ ಭೀಮಣ್ಣ ಖಂಡ್ರೆ ಇಬ್ಬರಲ್ಲೊಬ್ಬರು ಮಾಡಿಕೊಳ್ಳುವರು. ಚಿ.ಮೂ ನಿಮ್ಮನ್ನು ಅಸಾಮಾನ್ಯವಾಗಿ ಹೊಗಳಿದ್ದಾರೆ. ಅಂಥ ಅಭಿಮಾನಿಯನ್ನು ವೀರಶೈವ ಮಹಾಸಭೆ ಬಹಿಷ್ಕರಿಸುವಾಗ ನೀವೇಕೆ ಸುಮ್ಮನೆ ಕುಳಿತರಿ ? ಡಾ|| ಚಿ.ಮೂ ಅವರ ಮಾತು, ಪುಸ್ತಕಗಳು ಲಿಂಗಾಯತ ಸಮಾಜಕ್ಕೆ,

ಧರ್ಮಕ್ಕೆ ಅಪಕಾರ ಮಾಡಿದಂತೆ ತಮ್ಮ ದಿವ್ಯ ಮೌನವೂ ಅಪಕಾರ ಮಾಡದೆ ?

ಡಾ|| ಜಿ.ಎಸ್.ಶಿವರುದ್ರಪ್ಪನವರ ಒಂದು ಕವನವನ್ನು ನಿಮ್ಮ ಸಂಪಾದಕರು ಉಲ್ಲೇಖಿಸಿದ್ದಾರೆ. ಅಂಥ ಸಹೃದಯದ ಕವಿಯನ್ನು ವೀರಶೈವ ಮಹಾಸಭೆ ಬಹಿಷ್ಕರಿಸಿದಾಗ, ವಿಚಾರ ಭಿನ್ನಾಭಿಪ್ರಾಯ ಸಾವಿರ ಇರಲಿ, ಚರ್ಚಿಸೋಣ ; ಆದರೆ ವೀರಶೈವ ಮಹಾಸಭೆ ಹಾಕಿದ ಬಹಿಷ್ಕಾರ ತಪ್ಪು ಎಂದು ತಾವು ತಡೆಗಟ್ಟಲಿಲ್ಲವೇಕೆ ? ಗುರುಗಳ ಜವಾಬ್ದಾರಿ ಇಂಥ ವಿಷಯಗಳಲ್ಲಿ ಏನೂ ಇರುವುದೇ ಇಲ್ಲವೆ ?

ಜಂಗಮನಾರು ?

ಲಿಂಗಾಯತ ಧರ್ಮ ಜಂಗಮ ತತ್ವವನ್ನೇ ಉಸಿರಾಗಿ ಹೊಂದಿದ ಧರ್ಮ. ಅದೇ ಆದರ್ಶದಲ್ಲಿ ನಡೆದ ತೋಂಟದ ಸಿದ್ಧಲಿಂಗೇಶ್ವರರು ತಾವೂ ಚರಜಂಗಮರಾಗಿ ನಿರಂತರವಾಗಿ ಕರ್ನಾಟಕದಲ್ಲಿ ಮಾತ್ರವಲ್ಲ ತಮಿಳುನಾಡಿನಲ್ಲಿ ಸಂಚರಿಸಿ, ಕೇರಳದವರೆಗೂ ಹೋಗಿ ಬಂದರು. ಅವರ ಸಂಚಾರದ ಫಲವಾಗಿ ಲಿಂಗಾಯತ ಧರ್ಮ-ಸಮಾಜಗಳು ಬಲಗೊಂಡವು. ತಾವಷ್ಟೇ ಸಂಚರಿಪ ಜಂಗಮವಾಗದೆ ನೂರಾರು ವಿರಕ್ತ ಜಂಗಮರನ್ನು ಸಿದ್ಧಗೊಳಿಸಿ ಧರ್ಮಪ್ರಚಾರಕ್ಕೆ ಬಿಟ್ಟ ಸಿದ್ಧಲಿಂಗೇಶ್ವರರ ಕಾರ್ಯ ಕೇವಲ ಮಾತಿನ ಮಂಟಪವೆ ? ಪ್ರವಚನಗಳ ಬೂಟಾಟಿಕೆಯೆ ? ಜಂಗಮದ ಮೊದಲ ಕರ್ತವ್ಯ ಧರ್ಮಪ್ರಸಾರ ಅರ್ಥಾತ್ ಜ್ಞಾನ ದಾಸೋಹ ; ನಂತರದ್ದು ಅನ್ನದಾಸೋಹ ; ಬಹಿರಂಗವಾಗಿ ಒಪ್ಪಿಕೊಂಡು ಮೆಚ್ಚಿಕೊಳ್ಳದಿದ್ದರೂ ಅಂತರಂಗದಲ್ಲಿ ಸರಿಯಾಗಿ ಅರ್ಥ ಮಾಡಿಕೊಳ್ಳಿರಿ. ಲಿಂಗೈಕ್ಯ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರವಚನದ ಕಾಯಕದ ಮೂಲಕ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳನ್ನು ಧಾರ್ಮಿಕವಾಗಿ ಬೆಸೆಯದಿದ್ದರೆ ಲಿಂಗಾಯತ ಸಮಾಜದ ಪರಿಸ್ಥಿತಿ ಹೇಗಿರುತ್ತಿತ್ತೊ ! ಆದ್ದರಿಂದ ಜಂಗಮನ ಧರ್ಮಪ್ರಚಾರ ಕಾಯಕವನ್ನು ಮಾತಿನ ಮಾಲೆ ಎಂದು ವಿಡಂಬಿಸಿ ಜಡಶಾಲೆಗಳ ನಿರ್ಮಾಣವೇ ದೊಡ್ಡದೆಂದು ಪ್ರಚಾರ ಮಾಡುವ ತಮ್ಮ ಪತ್ರಿಕಾ ಸಂಪಾದಕರಿಗೆ ತಾವೇ ಹಿತೋಪದೇಶ ಮಾಡಬೇಕೆಂದು ಕೋರುತ್ತೇವೆ.

ಸಿದ್ಧರಾಮೇಶ್ವರ - ಅಲ್ಲಮಪ್ರಭು

ಲಿಂಗಾಯತ ಧರ್ಮದ ಆರು ಮಹಾನ್ ಚೇತನಗಳಾದ ಷಡುಗಣಾಧೀಶರಲ್ಲಿ ಈ ಇಬ್ಬರು ಅಪ್ರತಿಮರು. ಅಲ್ಲಮಭುದೇವರು ಚರಜಂಗಮ. ಲಿಂಗಾಂಗಯೋಗಿಯಾಗುವ ಮೊದಲು ಸಿದ್ಧರಾಮೇಶ್ವರರು ಕರ್ಮಯೋಗಿ. ಕೆರೆ,ಭಾವಿ, ದೇವಾಲಯ ಕಟ್ಟಿಸುತ್ತ, ಸ್ಥಾವರಲಿಂಗಗಳಿಗೆ ಗುಡಿ ಕಟ್ಟಿಸುತ್ತ ಕೀರ್ತಿಯಲ್ಲಿ ಮೈಮರೆತವರು. ಆಗ ಅಲ್ಲಮಪ್ರಭುದೇವರು ಬಂದು ವಿಡಂಬಿಸಿ, ಚುಚ್ಚಿ ಎಚ್ಚರಿಸುತ್ತಾರೆ. "ಈ ಕೆರೆ ಕಟ್ಟೋದು ದೊಡ್ಡದಲ್ಲ ; ಗುರುವಾಗಿ ಪಾರಮಾರ್ಥದ ಕೆರೆ ಕಟ್ಟು" ಎನ್ನುತ್ತಾರೆ. ಅಂತೂ ಸಿದ್ಧರಾಮೇಶ್ವರರು ಎಚ್ಚರಗೊಳ್ಳುತ್ತಾರೆ. ದೀಕ್ಷೆ ಪಡೆದು ಲಿಂಗಾಂಗಿಯಾದ ಮೇಲೆ ಹೀಗೆ ಹಾಡುತ್ತಾರೆ.

ಹಸುಳೆಯಾಗಿಯೆ ನಾನು ಕೆರೆಭಾವಿ ದೇವಾಲ್ಯ
ವಿರಚಿಸಿ ಭವಕೆ ಬಂದು ಫಲವನುಂಡು
ನರಕಕ್ಕೆ ಬೀಳುವನ ಕರುಣದಿಂದಿಡಿದೆತ್ತಿ
ಹೊರೆಯೊಳಿರಿಸಿದೆ ಬಸವ ಯೋಗಿನಾಥಾ -(ಬ.ಸ್ತೊ.ತ್ರಿ 22)

ಕಲ್ಯಾಣಕ್ಕೆ ಹೋಗಿ ಲಿಂಗಾಂಗಿಯಾಗಿ ಬಂದಾಗ ಅವರ ಅಭಿಮಾನಿ ಹಳೆ ಶಿಷ್ಯರು, "ನೀನು ಸಿದ್ಧಪುರುಷ ; ಹೋಗಿ ಹೋಗಿ ಲಿಂಗಾಯತ ಧರ್ಮದ ದೀಕ್ಷೆ ತೆಗೆದುಕೊಂಡು ಬಂದುದೇಕೆ ? ಎಂದು ಪ್ರಶ್ನಿಸಿದರು ಆಗ ಸಿದ್ಧರಾಮೇಶ್ವರರು ಹೇಳುತ್ತಾರೆ.

ಕಸವ ಕೊಂಡು ಹೊಸ ಧಾನ್ಯವ ಕೊಟ್ಟಡೆ ಒಲ್ಲೆಂಬ ಚದುರರಾರು ?
ಜಲವ ಕೊಂಡು ಅಮೃತವ ಕೊಟ್ಟಡೆ ಒಲ್ಲೆಂಬ ಭಾಷೆಯದಾರದು ?
ಎನ್ನಂತರಂಗದ ಅಜ್ಞಾನವ ಕೊಂದು ಸುಜ್ಞಾನವಪ್ಪ ಕರತೇಜವನಿತ್ತಡೆ
ಒಲ್ಲೆನೆಂಬ ಪಾತಕಿ ಯಾರು ಕಪಿಲಸಿದ್ಧಮಲ್ಲಿಕಾರ್ಜುನಾ ? -ಸಿ.ವ. 194

ಬಾಲ್ಯದಿಂದಲೂ ಸ್ಥಾವರಲಿಂಗೋಪಾಸಕರು, ಸ್ಥಾವರಲಿಂಗ ಸ್ಥಾಪಕರೂ ಆದ ಸಿದ್ಧರಾಮೇಶ್ವರರು ಇದೀಗ ಲಿಂಗಪತಿಯ ಧಾರಣೆ ಆದ ಮೇಲೆ ಶರಣ ಸತಿಯಾಗಿ ಪಾತಿವ್ರತ್ಯ ಭಕ್ತಿ ಅಳವಡಿಸಿಕೊಳ್ಳಬೇಕು. ಅವರ ಮನಸ್ಸಿನಲ್ಲಿ ಹೊಯ್ದಾಟ ನಡೆಯುತ್ತದೆ ; ಆಗ ಒಂದು ನಿರ್ಧಾರಕ್ಕೆ ಬರುತ್ತಾರೆ.

ಎಲ್ಲ ಪ್ರಮಥರು ಲಿಂಗವ ಧರಿಸುತ್ತಿರಲು
ನಾನು ಒಲ್ಲೆನೆಂಬುವುದು ಕರ್ಮದ ಬಲೆಯೋ ? ಮಾಯೆಯ ಬಲೆಯೋ ?
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾಥಯ್ಯಾ, ನಾ ಧರಿಸಿಕೊಂಬುವೆ ಲಿಂಗವ
ನೀ ಕರೆಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ
ನಾ ನಿನ್ನವನಲ್ಲಲೇ ದೇವ -ಸಿ.ವ. 189

ನಾನಂತೂ ದೀಕ್ಷೆ ಪಡೆದು ಲಿಂಗಧಾರಿಯಾಗುತ್ತೇನೆ. ಇನ್ನು ಮುಂದೆ ನಿನ್ನ ಪೂಜೆ (ಸ್ಥಾವರಲಿಂಗ) ಮಾಡಲಾರೆ. ಆದ್ದರಿಂದ ಮತ್ತೋರ್ವನ ನಿನ್ನ ಪೂಜೆಗೆ ಕರೆಸಿಕೋ ಎನ್ನುವರು.

ವಿರಕ್ತ ಮೂರ್ತಿ ಸಿದ್ಧರಾಮೇಶ್ವರರು ಹೇಳುತ್ತಾರೆ.

''ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು
ಮಾಡಿದ ಕಾರ್ಯದಿಂದ ಸತ್ಪುರುಷರ ಹರ್ಷ ನಿರ್ಭರವಾಗಿರಬೇಕು
ಮಾಡಿದ ಕಾರ್ಯದಿಂದ ಪ್ರಮಥರು ಅಹುದಹುದೆನಬೇಕು
ಅದು ಕಾರಣ,
ಮಾಡಿಸಿ ಜ್ಞಾನಪ್ರಾಪ್ತಿಯಾಗಲಿಲ್ಲ ;
ಮಾಡಿಸಿ ಪ್ರಮಥರ ಮನೋಲ್ಲಾಧವಾಗಲಿಲ್ಲ ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಾಕ್ಷಾತ್ಕಾರವಾಗಲಿಲ್ಲ.
ಕೇಳಾ ಕೇದಾರಯ್ಯ. -ಸಿ.ವ. 127

ಈವರೆಗೂ ನಾನು ಮಾಡಿದ ಕೆಲಸ-ಕೆರೆಭಾವಿ ದೇವಾಲಯ ಕಟ್ಟುವ ಕೆಲಸದಿಂದ ಜ್ಞಾನಸಾಧನೆಯಾಗಲಿಲ್ಲ, ಪ್ರಮಥರು ಮೆಚ್ಚಲಿಲ್ಲ, ಸತ್ಪುರುಷರು ಹರ್ಷಪಡಲಿಲ್ಲ, ಸಾಕ್ಷಾತ್ಕಾರವಾಗಲಿಲ್ಲ ಎಂದು ಕರ್ಮಯೋಗದ ವಿಫಲತೆಯ ಬಗ್ಗೆ ಕೇದಾರಯ್ಯ ಎಂಬ ಶೈವ ಶಿಷ್ಯನಿಗೆ ವಿವರಿಸುತ್ತಾರೆ. ದೀಕ್ಷೆ ಪಡೆದ ಮೇಲೆ ಹರ್ಷ ಪುಳಕಿತರಾಗಿ ಹಾಡುತ್ತಾರೆ.

ಸೀಮೆಯ ಮೀರಿದ ಸಂಬಂಧನೆ, ಸಂಬಂಧದಲ್ಲಿ ಸಮನಿಸಿದ ಸಂಯೋಗನೆ,
ಎನ್ನ ಸಲಹುವ ಗುರುಲಿಂಗ ಜಂಗಮ ಪಾದೋದಕ ಪ್ರಸಾದಕ್ಕೆ ಅರ್ಹನ ಮಾಡಿದೆ.
ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಬಸವನಾಗಿ ಬಂದು ನಿನ್ನವರಿಗೆ ಯೋಗ್ಯನ ಮಾಡಿ ಭವವ ತಪ್ಪಿಸಿದೆ. -ಸಿ.ವ. 180

ಬಸವ ಗುರುವಿನಿಂದಾಗಿ ಗುರು-ಲಿಂಗ-ಜಂಗಮ; ಪಾದೋದಕ-ಪ್ರಸಾದದ ಹಾದಿ ಲಭ್ಯವಾಯಿತು ಎಂದು ಹಾಡಿಕೊಂಡಾಡುವರು. ತಾವು ಈಗ ಪೂಜಿಸುವ ಇಷ್ಟಲಿಂಗದ ಮಹತ್ವವನ್ನು ಕೇದಾರಯ್ಯನಿಗೆ ಹೀಗೆ ವಿವರಿಸುವರು.

ಅಗ್ನಿಲಿಂಗವ ಬ್ರಾಹ್ಮಣ ಪೂಜಿಸಿದ. ಧನುರ್ಲಿಂಗವ ಕ್ಷತ್ರಿಯ ಪೂಜಿಸಿದ ;

ಧನಲಿಂಗವ ವೈಶ್ಯ ಪೂಜಿಸಿದ ; ಖಡ್ಗಲಿಂಗವ ರಾಜ ಪೂಜಿಸಿದ
ಧಾನ್ಯಲಿಂಗವ ಶೂದ್ರ ಪೂಜಿಸಿದ ; ಪರ್ವತಲಿಂಗವ ಶೈವ ಪೂಜಿಸಿದ
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಸಿದ್ಧರಾಮ ಪೂಜಿಸಿದ ನೋಡಾ
ಕೇದಾರ ಗುರುದೇವಾ. -ಸಿ.ವ. 181

ಇಷ್ಟಲಿಂಗದ ಮಹತಿಯನ್ನು ಅರಿತುದೇ ಆದರೆ ಅನ್ಯ ದೈವಂಗಳ ಆರಾಧನೆಗೆ ಮನಸ್ಸು ಸರ್ವಥಾ ಒಪ್ಪದು. ಲಿಂಗಾಯತ ಧರ್ಮದ ಅಂತರಾರ್ಥವನ್ನು, ಆಚರಣೆಯ ವಿಧಿ-ವಿಧಾನಗಳನ್ನು ಸಿದ್ಧಗಂಗಾ ಪೂಜ್ಯರು ಮಾತೆ ಮಹಾದೇವಿಯವರಿಂದ ತಿಳಿದುಕೊಳ್ಳಬೇಕಾಗಿಲ್ಲ'' ಎಂದಿದ್ದಾರೆ ಸಂಪಾದಕರು. ಅಂಥ ದೊಡ್ಡ ನಿರೀಕ್ಷೆಯನ್ನು ನಾವೂ ಇಟ್ಟುಕೊಳ್ಳುವುದಿಲ್ಲ. ಆದರೆ ಮುಖ್ಯಪ್ರಶ್ನೆ ಕೆಲವು ಇವೆ.

1. ಇಷ್ಟಲಿಂಗವು ನಿರಾಕಾರ ಸೃಷ್ಟಿಕರ್ತನ ಕುರುಹು. ಆದರೆ ಬಹುಪಾಲು ಸ್ವಾಮಿಗಳು ಹೇಳುವ ಶ್ಲೋಕ-ಮಂತ್ರಗಳು ಶಿವನ ಸ್ತುತಿಗಳು. ಆಕಾರ ಸಹಿತ ಶಿವನು ಬೇರೆ, ನಿರಾಕಾರನಾದ ಪರಮಾತ್ಮನು ಬೇರೆ. ಪೂಜ್ಯ ಶ್ರೀಗಳು ಇಷ್ಟಲಿಂಗಾರ್ಚನೆಗೆ ಯಾವ ಶ್ಲೋಕಗಳನ್ನು ಬಳಸುತ್ತಾರೆ ? ಸಿದ್ಧಗಂಗಾ ಪತ್ರಿಕೆ ಮೂಲಕ ಅದನ್ನು ತಿಳಿಸಬೇಕು ಎಂದು ಕೋರಿಕೆ. ತನ್ಮೂಲಕ ಜನರೂ ಇಷ್ಟಲಿಂಗ ಪೂಜೆಯ ವಿಧಾನವನ್ನು ಅರಿಯಲು ಅನುಕೂಲವಾಗುವುದು.

2. ರುದ್ರಾಭಿಷೇಕ ರುದ್ರನ ಸ್ತುತಿಯನ್ನು ಒಳಗೊಂಡಿದೆ. ಇದು ನಿರಾಕಾರ ದೇವನಿಗೆ ಅನ್ವಯಿಸದು. ಶ್ರೀಗಳು ರುದ್ರಾಭಿಷೇಕವನ್ನು ಇಷ್ಟಲಿಂಗಕ್ಕೆ ಮತ್ತು ಶ್ರೀ ಸಿದ್ಧಲಿಂಗೇಶ್ವರರಿಗೆ ಮಾಡುವರೋ, ನಿಷೇಧಿಸಿರುವರೋ ?

3. ಇಷ್ಟಲಿಂಗ ರಾಸಾಯನಿಕ ವಸ್ತುಗಳಿಂದ ತ್ರಾಟಕ ಯೋಗಕ್ಕಾಗಿ ರಚಿಸಲಾದ ಕುರುಹು. ಇದಕ್ಕೆ ಜಿಡ್ಡು ಬಡಿದರೆ ಕಂಥೆ ಕೆಡುವುದು, ಹೀಗಾಗಿ ಪಂಚಾಮೃತ ಅಭಿಷೇಕ ಸಲ್ಲದು. ಕಂಥೆ ಕೆಡುವ ಒಂದು ಕಾರಣದೊಡನೆ ಆಪ್ಯಾಯನ ಪ್ರಸಾದವನ್ನು ಕೆಡಿಸಬಾರದು ಎಂಬ ಅಮೋಘ ಪರಿಕಲ್ಪನೆ ಇದ್ದು, ಶ್ರೀಗಳು ಪಂಚಾಮೃತ ಬಳಸುವರೋ ಇಲ್ಲವೋ ?

4. ಲಿಂಗಾಯತ ಧರ್ಮ ಅಚ್ಚ ಕನ್ನಡದ ಧರ್ಮ, ದೇವರನ್ನು ಮನ ಒಲಿದಂತೆ ಸ್ತುತಿಸಲು ಧರ್ಮಪಿತರು ಕಲಿಸಿದರು. ಬೌದ್ಧ ಧರ್ಮವು ಪಾಲಿ ಭಾಷೆಯಲ್ಲಿ ಹೇಳಲ್ಪಟ್ಟಂತೆ, ಇಸ್ಲಾಂ ಅರಾಬಿಕ್ ಭಾಷೆಯಲ್ಲಿ ಬೋಧಿಸಲ್ಪಟ್ಟಂತೆ, ಲಿಂಗಾಯತವು ಕನ್ನಡದಲ್ಲಿ ಜನಿಸಿತು. ಶ್ರೀಗಳು ಇಷ್ಟಲಿಂಗಾರ್ಚನೆ ಮಾಡುವಾಗ ಕನ್ನಡದ ವಚನಗಳ ಮೂಲಕ ಆರಾಧಿಸುವರೋ ಅಥವಾ ಸಂಸ್ಕೃತ ಮಂತ್ರಗಳ ಮೂಲಕವೋ ?

5. ''ಇಷ್ಟಲಿಂಗ ಕರಸ್ಥಲದ ಕುರುಹು ಮಾತ್ರವಲ್ಲ ಅಂತರಂಗದ ಅರಿವು'' ಎಂದಿದ್ದಾರೆ ಸಂಪಾದಕರು. ಅಂಥ ಮಹಾನ್ ಅರಿವನ್ನು ಕರಸ್ಥಲದ ಕುರುಹಿನ ಮೂಲಕ ಪಡೆದ ಬಳಿಕ ಈ ಕೈ ಅದೆಂತು ಅನ್ಯ ದೇವತೆಗಳನ್ನು , ಉಪಾಸಿಸಲು ಸಾಧ್ಯ ? ಈ ನಾಲಿಗೆ ದೇವನನ್ನು ಬಿಟ್ಟು ಅದೆಂತು ಸರಸ್ವತಿ, ದುರ್ಗೆ, ಬನ್ನಿ ಮರಗಳನ್ನು ಪೂಜಿಸಲು ಸಾಧ್ಯ ? (ಮಠದಿಂದ ಹೊರಡಿಸಲಾದ ಕರಪತ್ರವನ್ನು ಮುದ್ರಿಸಲಾಗಿವೆ)

6. ಪಂಚ ಸೂತಕಗಳಲ್ಲಿ ಜಾತಿ ಸೂತಕ ಒಂದು. ಇದನ್ನು ಬಸವಾದಿ ಪ್ರಮಥರು ನಿರಾಕರಿಸಿದ್ದಾರೆ. ತಮ್ಮಲ್ಲಿ ಈಗ ಯಾವ ಆಚರಣೆ ಇದೆಯೋ ಗೊತ್ತಿಲ್ಲ ; ಕೆಲವಾರು ವರ್ಷಗಳ ಹಿಂದೆ ಲಿಂಗಾಯತರ ಹುಡುಗರನ್ನು ಒಂದು ಕಡೆ, ಲಿಂಗಾಯತೇತರರನ್ನು ಬೇರೆ ಕಡೆ ಕೂರಿಸಿ ಊಟಕ್ಕೆ ಇಡಲಾಗುತ್ತಿತ್ತು ಎಂದು ದೊಡ್ಡ ಹಗರಣವೇ ಆಯಿತು. ಇಂಥ ಭೇದ ತಮ್ಮ ಸಂಪಾದಕರು ಬಡಬಡಿಸುವ ಮಾನವ ಧರ್ಮಕ್ಕೆ ಸಲ್ಲುವಂಥದೆ ? ಅಥವಾ ಪಂಚಸೂತಕ ಆಚರಿಸಬಾರದು, ಪಂಕ್ತಿ ಭೇದ ಮಾಡಬಾರದು ಎಂಬ ನೀತಿಯುಳ್ಳ ಬಸವ ಧರ್ಮಕ್ಕೆ ಸಲ್ಲುವಂಥದೆ ?

ನಾನು ಉದ್ದೇಶಪೂರ್ವಕವಾಗಿ ವ್ಯಂಗ್ಯ ಲೇಖನಗಳನ್ನು ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ಬರೆದೆ. ಅದಕ್ಕೆ ಪ್ರತಿಕ್ರಿಯೆಯಾಗಿ "ಒಂದು ಧರ್ಮಪೀಠದ ಜವಾಬ್ದಾರಿ ಸ್ಥಾನದಲ್ಲಿರುವವರು ಇಂಥ ಸಣ್ಣ ಮಾತುಗಳನ್ನಾಡಬಾರದು." ಎಂದು ಸಿದ್ದಗಂಗಾ ಸಂಪಾದಕರು ಹೇಳಿದ್ದಾರೆ. ಇದು ನಮ್ಮ ವ್ಯಕ್ತಿತ್ವಕ್ಕೆ ಚ್ಯುತಿ ತರುವಂಥ ಮಾತಲ್ಲ ; ಅಥವಾ ಧರ್ಮ ಪೀಠದ ಘನತೆಯನ್ನು ಕಳೆಯುವ ಮಾತೂ ಅಲ್ಲ. ಏಕೆಂದರೆ ಇಲ್ಲಿ ಯಾರ ವೈಯಕ್ತಿಕ ನಿಂದೆ ಇಲ್ಲ ತಾತ್ವಿಕ ವಿಡಂಬನೆ ಇದೆ.

"ಹಸಿದ ಹೊಟ್ಟೆಗೆ ವೇದಾಂತವಲ್ಲ, ಊಟ ಬೇಕು" ಎಂದ ಸ್ವಾಮಿ ವಿವೇಕಾನಂದರ ಉಕ್ತಿಯನ್ನು ಸಂಪಾದಕರು ಕಡುಬಿನ ಕಾಯಕ ಕುರಿತು ಬರೆದಿದ್ದಾರೆ. ಮಹಾತ್ಮರ ಉಪದೇಶಗಳನ್ನು ಎಷ್ಟು ತಪ್ಪಾಗಿ ಅರ್ಥೈಸುತ್ತಾರೆ. ಎಂಬುದಕ್ಕೆ ಇದು ನಿದರ್ಶನ. ಮಾನವನ ಲೌಕಿಕ ಬದುಕು, ಅಗತ್ಯಗಳಿಗೂ ಧರ್ಮವು ಗಮನ ಕೊಡಬೇಕು ಬರಿ ತಪಸ್ಸು, ಜಪ-ತಪಗಳೇ ಧರ್ಮದ ಗುರಿಯಲ್ಲ ಎಂಬುವ ಸಿದ್ಧಾಂತ ಪ್ರತಿಪಾದಿಸಲು ಶ್ರೀ ವಿವೇಕಾನಂದರು. "ಹಸಿದವರ ಮುಂದೆ ವೇದಾಂತ ಹೇಳುವುದು ಪಾಪ" ಎಂದಿದ್ದಾರೆ. ಹಾಸ್ಟೆಲ್ ವಿದ್ಯಾರ್ಥಿಗಳು ಉಪವಾಸವಿರುವವರಲ್ಲ, ನಿತ್ಯ ಊಟ ಮಾಡುವವರೆ ! ಸ್ವಾಮಿಗಳವರು ಫೋಟೋಗೆ ಪೋಸ್ ಕೊಡಲು ಒಂದು ದಿನ ಕಡುಬು ಮಾಡಿದರು. ಹಾಗಾದರೆ ದಿನಾಲೂ ಹಸಿದ ಹೊಟ್ಟೆಗೆ ಉಣ್ಣಿಸಲು ದಿನಾ ಅವರೇ ಅಡಿಗೆ ಮಾಡುವರೆ ?

ನಾನು ಕೇಳಿದ ಪ್ರಶ್ನೆ, ಆಡಿದ ವ್ಯಂಗ್ಯ ನುಡಿ ಈ ಬಗ್ಗೆ ಅಲ್ಲ. ನನ್ನ ಪ್ರಶ್ನೆ ನೇರವಿದೆ.

1. ಇಷ್ಟಲಿಂಗಧಾರಿ ವಿರಕ್ತ ಸ್ವಾಮಿಗಳು ಗಣಪತಿ ಪೂಜೆ ಮಾಡಿದ್ದು ಸರಿಯೆ ?

2. ಗಣಪತಿಗೆ ಪ್ರಿಯ ಭಕ್ಷ ಕಡುಬು ಎಂದು ಗಣಪತಿ ಪೂಜೆ ನಿಮಿತ್ತ ನೈವೇದ್ಯ ಮಾಡಿದ್ದು ಸರಿಯೆ ? ಗಣಪತಿಗೂ ಕಡುಬಿಗೂ ಏನು ಸಂಬಂಧ ? ಅಂಥ ಕಾಗಕ್ಕ ಗುಬ್ಬಕ್ಕನ ಕಥೆ ನಂಬಬಹುದೆ ? ಊಟ ಎಂದು ಪಂಚಭಕ್ಷ್ಯ ಪರಮಾನ್ನ ನೀಡಲಿ. ಗಣಪತಿಗೆ ನೈವೇದ್ಯ ಎಂದಾಗ ತಾತ್ವಿಕ ದೋಷ ಸಂಭವಿಸುವುದಲ್ಲವೆ ?

3. ಗುರುಗಳಾಗಿ ಬೋಧೆ ಮಾಡುವ ಅಥವಾ ಅಧ್ಯಯನ ಮಾಡುವ ಅಮೂಲ್ಯ ಕೆಲಸ ಬಿಟ್ಟು ಅಡಿಗೆ ಭಟ್ಟರು ಮಾಡುವ ಕೆಲಸಕ್ಕಾಗಿ ಸಮಯ ಹರಣ ಮಾಡಿದ್ದೇಕೆ ?

4. ಅಂಥ ದಿನವನ್ನು ಒಳ್ಳೆಯ ಅಧ್ಯಯನ, ಬೋಧೆಗೆ ಸಾರ್ಥಕವಾಗಿ ಬಳಸಬಹುದಿತ್ತಲ್ಲ.

ಇಂಥ ವಿಮರ್ಶೆಯಿಂದ ನಮ್ಮ ಬಸವ ಧರ್ಮ ಪೀಠದ ಘನತೆ ಏನೂ ಕುಂದುವುದಿಲ್ಲ

ಪತ್ರಿಕಾ ಸಂಪಾದಕರು ತಾವು ನುಡಿ ಜಾಣರಲ್ಲ, ನಡೆ ಧೀರರು ಎಂದು ಬಣ್ಣಿಸಿದ್ದಾರೆ. ಆದರೆ ಸೋಜಿಗವೆಂದರೆ ನಾನು ಕೇಳಿದ ಒಂದು ಪ್ರಶ್ನೆಗೂ ಉತ್ತರಿಸದೆ ಬರಿ ಹುತ್ತವ ಬಡಿಯುವ ಕೆಲಸ ಮಾಡಿದ್ದಾರೆ. ನಮ್ಮ ನುಡಿಯಲ್ಲಿ ಜಾಣತನ ಗುರುತಿಸಿದ್ದಕ್ಕೆ ಧನ್ಯವಾದ ; ಅವರ ನುಡಿಯಲ್ಲಿ ದಡ್ಡತನ ತೋರಿಸಿದ್ದಕ್ಕೆ ನಮಗೆ ಅನುಕಂಪ. ಲಿಂಗಾಯತ ಮಠಾಧೀಶರು ವೇದಾಗಮ, ಸಂಸ್ಕೃತ ಪಾಠಶಾಲೆ ನಡೆಸುವುದು ಸರಿಯೆ? ಭಾಷಾ ಪರಿಣತಿ ದೃಷ್ಟಿಯಿಂದ ಕಲಿಸಿದರೂ ತನ್ನ ಧರ್ಮವನ್ನು ಮೊದಲು ಅಭ್ಯಸಿಸಬೇಕು ತಾನೆ? ತನ್ನ ಧರ್ಮದ ಸಾಹಿತ್ಯ ವಚನ ಸಾಹಿತ್ಯ ; ಅದನ್ನು ಮುಂದೆ ಮಠಾಧಿಕಾರಿಗಳಾಗುವವರಿಗೆ ಕಲಿಸದೆ, ವೈದಿಕ-ಶೈವ ಪಠ್ಯಗಳನ್ನು ಲಿಂಗಾಯತ ಮಠಾಧೀಶರಿಗೆ ಕಲಿಸುವುದು ನಡೆ ಧೀರತನವೆ ? ಹೊಗಳುವುದರಲ್ಲೂ ಒಂದು ಅರ್ಥವಿದ್ದರೆ ಅದಕ್ಕೆ ಮಹತ್ವ ಬರುತ್ತದೆ.

ಆಚರಣೆಯಲ್ಲಿ ವೀರಶೈವರಾಗಿ ಲಿಂಗಾಯತ ಎಂಬ ಶ್ರೇಷ್ಠ ಪದವನ್ನು ಕುಲಗೆಡಿಸುವುದರೊಡನೆ ಈಗ ಬಸವ ಧರ್ಮ ಎಂಬ ಇನ್ನೂ ಶ್ರೇಷ್ಠಪದ ಕೆಡಿಸುವ ಕೆಲಸಕ್ಕೆ ಸಿದ್ದಗಂಗಾ ಸಂಪಾದಕರು ಕೈಹಾಕದಿರಲು ತಾವು ಬುದ್ಧಿ ಹೇಳಿರಿ. ಧರ್ಮಪಿತ ಬಸವಣ್ಣನವರು ಕೊಟ್ಟ ಸಮತಾವಾದಿ, ಏಕದೇವೋಪಾಸಕ,

ಪ್ರಗತಿಪರ ಧರ್ಮವನ್ನು ವೀರಶೈವ ವಾದಿಗಳು ಕುಲಗೆಡಿಸಿದ್ದು ನೋಡಿ ಇವರಿಂದ ಲಿಂಗಾಯತ ಧರ್ಮವನ್ನು ವಿಮೋಚನೆಗೊಳಿಸಲು ಕಳಕಳಿಯಿಂದ ಶ್ರಮಿಸುವುದನ್ನು ಅರಿಯಲಾರದ ಸಂಪಾದಕರು ಅಹಂಕಾರದ ಪ್ರಮತ್ತತೆಯಿಂದ ನಾವು ಹೇಳುತ್ತಿದ್ದೇವೆಂದು ಟೀಕಿಸಿ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ

ಹಂದಿ ಚಂದನ ಸಾರ ಗಂಧವ ಬಲ್ಲುದೆ ?
ಒಂದುವ ತಿಳಿಯಲರಿಯದ ಗುರುವಿಂಗೆ
ನಿಂದ್ಯವೇ ಬಹುದು ಸರ್ವಜ್ಞ ||

ಎಂಬ ಸರ್ವಜ್ಞನ ನುಡಿಯಂತೆ ವೀರಶೈವ ಎಂಬ ವಿಶಿಷ್ಟ ಶೈವ ಪಂಥವೆಲ್ಲಿ ? ಲಿಂಗಾಯತ ಎಂಬ ಅಪೂರ್ವ ವಿಶ್ವಧರ್ಮವೆಲ್ಲಿ? ಇಂಥ ವಿವೇಕ ಜ್ಞಾನವಿಲ್ಲದ ಸಂಪಾದಕರಿಂದ ಅಜ್ಞಾನ ಪ್ರದರ್ಶನವಲ್ಲದೆ ಮತ್ತೇನಾದೀತು? ವೀರಶೈವ-ಲಿಂಗಾಯತಗಳ ಶಾಸ್ತ್ರೀಯ ವ್ಯತ್ಯಾಸ ಕುರಿತು ಬರೆದು ಡಾ||ಚಿ.ಮೂ.ಗೆ ಉತ್ತರ ಕೊಟ್ಟ ಲೇಖನ ಓದಿ ಸಾಮಾನ್ಯ ಜನರು ಎಂಥಾ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ. ಅಂದಾಗ ಓರ್ವ ಪತ್ರಿಕೆ ಸಂಪಾದಕರಿಗೆ ಕೆಸರು- ಚಂದನ ಒಂದೇ ಅನ್ನಿಸಿರುವುದು ಸೋಜಿಗವೇ ಸರಿ. ಅವರ ಬುದ್ಧಿ ಮಟ್ಟ ಏನೇ ಇರಲಿ, ಶ್ರಮಪಟ್ಟು ಸಂಶೋಧಿಸಿ ನಾವು ಬೆಳಕಿಗೆ ತರುತ್ತಿರುವ ಸತ್ಯಗಳ ಮೇಲೆ ಮಸಿ ಚೆಲ್ಲುವಂತೆ ಬಸವ ಧರ್ಮ ಎಂಬ ಪದವನ್ನು ಅವರು ಕೆಡಿಸುವುದು ಬೇಡ.

ಕ್ರಾಂತಿಪುರುಷ ಬಸವಣ್ಣನವರು ಕೊಟ್ಟ ಅಮೂಲ್ಯ ಸಿದ್ಧಾಂತಗಳಲ್ಲಿ ಕಾಯಕವೇ ಕೈಲಾಸ, ಸಮತಾವಾದದ ಜೊತೆಗೆ ಏಕದೇವೋಪಾಸನೆ ಅತಿ ಶ್ರೇಷ್ಠವಾದುದು. ಇದು ಜಾಗತಿಕ ಧರ್ಮ (Universal Religion) ದ ಲಕ್ಷಣ . ಇದನ್ನು ಅಳವಡಿಸಿಕೊಳ್ಳದೆ ಯಾರೇ ಇರಲಿ ಎಷ್ಟೇ ದೊಡ್ಡವರಿರಲಿ 'ಬಸವ ಧರ್ಮ'ದ ಅನುಯಾಯಿ ಎಂದು ಹೇಳಿಕೊಳ್ಳಲು ಅವರಿಗೆ ನೈತಿಕ ಹಕ್ಕಿಲ್ಲ.

ಅಂಥವರು ಇವತ್ತೇ ಪಶ್ಚಾತ್ತಾಪ ಪಡಲಿ ; ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ಬಿಟ್ಟು ಇನ್ನಾವ ನೀರು, ಗಿಡ, ಮರ, ದೈವ, ದೇವತೆಗಳನ್ನು ಪೂಜಿಸುವುದಿಲ್ಲ ಎಂದು ಸಂಕಲ್ಪತೊಟ್ಟು, ಸಮತಾವಾದವನ್ನು ಬೋಧಿಸಲಿ, ನಾಳೆಯೇ ಬಸವ ಧರ್ಮಿ ಎಂದು ಹೇಳಿಕೊಳ್ಳಲಿ, ಬಸವ ಧರ್ಮ ಪದ ಬಳಸಿಕೊಳ್ಳಲಿ.

ವಚನ ವಾಕ್ಯಗಳ ಅರ್ಥವನ್ನೇ ಅರಿಯದೆ ಸಂಪಾದಕ ಮಹಾಶಯರು ಅಜೀರ್ಣವಾದವರು ವಾಂತಿ ಮಾಡುವಂತೆ ವಚನ ವಾಕ್ಯಗಳನ್ನು ಕಕ್ಕಿದ್ದಾರೆ. " ನಾನು ಜ್ಞಾನಿ ನೀನು ಅಜ್ಞಾನಿಯೆಂದು ವಾದಿಸುವ ಧರ್ಮವಲ್ಲ. " ಎಂದಿದ್ದಾರೆ. ಲಿಂಗಾಯತ ಧರ್ಮದ ಮೂಲ ಧ್ಯೇಯವೇ ಅಜ್ಞಾನಿಗಳನ್ನು ತಿದ್ದುವುದು. ಅಜ್ಞಾನಿಗಳನ್ನು ಅದೇ ಸ್ಥಿತಿಯಲ್ಲಿ ಬಿಡದೆ ಅವರನ್ನು ಉದಾತ್ತ ಚಿಂತನೆಗೆ ತೊಡಗಿಸಲೆಂದೇ ವಚನ ಶಾಸ್ತ್ರ ಹುಟ್ಟಿರುವುದು. " ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನ ಎಂದು ಸಾರಿ ಹೇಳುವ ಧರ್ಮ." ಎಂದಿದ್ದಾರೆ ಸಂಪಾದಕರು. ನಾವೂ ಅದನ್ನೇ ತಲೆ ಚಚ್ಚಿಕೊಂಡು ಸಂಪಾದಕರಿಗೆ ಹೇಳುತ್ತಿರುವುದು. " ಸೃಷ್ಟಿಕರ್ತ ಲಿಂಗದೇವನು ಮಾತ್ರ ಸತ್ಯ ; ಅವನನ್ನು ಅರಿಯಿರಿ, ಅವನನ್ನು ಪೂಜಿಸಿರಿ. ಅನ್ಯ ದೈವಂಗಳನ್ನು ಪೂಜಿಸಬೇಡಿರಿ. ಇದು ಬಸವಾದೇಶಕ್ಕೆ ವಿರುದ್ಧ ; ಎಂದು ಹೇಳಲೆಂದೇ ಗಣಪತಿ ಪೂಜೆಯನ್ನು ವಿಮರ್ಶಿಸಿದ್ದು.

1. ಹರ - ಶಕ್ತಿಗಳಲ್ಲಿ ಹುಟ್ಟಿದ ಬೆನಕ - ಭೈರವ - ಷಣ್ಮುಖರ
ಮಹಾಹರನ (ಅಂದರೆ ಸೃಷ್ಟಿಕರ್ತನ) ಮಕ್ಕಳೆಂಬ ಪಾತಕಿ ನೀ ಕೇಳೋ
ಹರಿ ಹರನು ಒಂದೆಂಬ ಶಿವದ್ರೋಹಿ ನೀ ಕೇಳೊ
ಹರಿ ಹರ ಸಹಿತರಿಂದತ್ತತ್ತ, ಅಜಾತ ಅಚರಿತ್ರ ಅಪ್ರತಿಮ
ಲಿಂಗದೇವನೊಬ್ಬನೆ ಕಾಣಭೋ - ಬ. ವ. ದೀ- 1171

2. ನೀನಲ್ಲದೆ ಅನ್ಯದೈವ ಉಂಟೆಂಬವನ ಬಾಯ
ಕೆನ್ನವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ
ಎನ್ನ ಕೋಪವಡಗದಯ್ಯಾ
ಎನ್ನ ಬಿನ್ನಪವನವಧರಿಸು, ಲಿಂಗದೇವಾ. - ಬ. ವ. ದೀ-748

3. ಪಂಚ ಬ್ರಹ್ಮವ ಕಿಡಿಸಿತ್ತು ಪ್ರಣವ ಮಂತ್ರವ ನೀಡಾಡಿತಲ್ಲಾ
ಕರ್ಮಂಗಳನೆ ಕಳೆಯಿತ್ತು ; ಕ್ರೀಗಳನೇ ಮೀರಿತ್ತಲ್ಲಾ!
ಆಗಮದ ಹಲ್ಲ ಕಳೆಯಿತ್ತು
ಲಿಂಗದೇವಯ್ಯನ ಭಕ್ತಿಗಜ, ಹೊ ! -ಬ. ವ. ದೀ-745

ಗುರುಜಂಗಮರು ಧರ್ಮಬೋಧೆಯ ಕರ್ತವ್ಯ ಮಾಡದ ಲೋಪದಿಂದ ಲಿಂಗಾಯತ ಸಮಾಜ ವಿರೂಪಗೊಂಡಿರುವಾಗ ಆತ್ಮಾವಲೋಕನ ಮಾಡಿಕೊಳ್ಳಲರಿಯದೆ ಪ್ರವಚನ ಪರೋಪ ಜೀವಿತ್ವ ಎಂದು ಬರೆದಿರುವ ಸಿದ್ಧಗಂಗಾ ಸಂಪಾದಕರು ಇಂದು ಅನ್ಯ ಜನ ಎಂತೆಂಥಾ ಟೀಕೆ ಮಾಡುತ್ತಿದ್ದಾರೆಂಬುದನ್ನು ಅರಿಯುವುದು ಒಳ್ಳೆಯದು.

★ ಬೋಧೆ ಮಾಡಬೇಕಾದ ಗುರುಗಳು ರಾಜಕೀಯ ಮಾಡುತ್ತಿದ್ದಾರೆ.

★ ಧರ್ಮ ಬೋಧೆ ಮಾಡಬೇಕಾದ ಮಠಾಧೀಶರು ಶಿಕ್ಷಣ ಸಂಸ್ಥೆಗಳ ಮೂಲಕ ವ್ಯಾಪಾರ ಮಾಡುತ್ತಿದ್ದಾರೆ (ಶಿಕ್ಷಣ ಸಚಿವ ವಿಶ್ವನಾಥ) ಪ್ರಾಜ್ಞ ಜನರು ಇಂದು ಹಸಿದು ಹಂಬಲಿಸುತ್ತಿರುವುದು ಧರ್ಮದ ಜ್ಞಾನಕ್ಕಾಗಿ. ಇದನ್ನು ಎಲ್ಲ ಮಠಾಧೀಶರು ಎಷ್ಟು ಬೇಗನೆ ಅರಿತರೆ ಅಷ್ಟು ಒಳ್ಳೆಯದು.

" ಹೃದಯ ಪರಿಶುದ್ಧತೆಯಿಲ್ಲದೆ ಇತರರಿಗೆ ಬೋಧಿಸುವವರು ಕೊನೆಯಲ್ಲಿ ತಾವೇ ಸೋತು ಹೋಗುವರು. " ಎಂದು ಸಂಪಾದಕರು ನುಡಿದಿದ್ದಾರೆ. ಹೃದಯ ಪರಿಶುದ್ಧತೆ ಇದೆಯೋ ಇಲ್ಲವೋ ಎಂಬುದು ದೇವರಿಗೆ ಮಾತ್ರ ತಿಳಿಯುವ ಸಂಗತಿ. ಏಕೆಂದರೆ ಅವನು ಮಾತ್ರ ಅಂತರಂಗ ಅರಿಯಬಲ್ಲ ಸರ್ವ ದ್ರಷ್ಟಾರ, ತೀರ್ಪು ಕೊಡುವ ನ್ಯಾಯಾಧೀಶ. ಆದರೆ ಸಿದ್ಧಗಂಗಾ ಮಠದಲ್ಲಿ ತಾತ್ತ್ವಿಕ ಶುದ್ಧಿ ಇಲ್ಲ, ಅಲ್ಲಿ ಗಣಪತಿ - ನವಗ್ರಹ ಪೂಜೆ, ಸರಸ್ವತಿ - ದುರ್ಗಾ - ಶಮೀಪೂಜೆ ನಡೆಯುತ್ತ ಎಂಬುದು ಮಾತ್ರ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುತ್ತಿರುವ ಸಂಗತಿ. ನಮ್ಮ ಸರ್ಟಿಫಿಕೇಟ್ ಯಾರಿಗೂ ಅಗತ್ಯವಿಲ್ಲ. ಆದರೆ ಧರ್ಮಗುರು ಬಸವಣ್ಣನ ಸರ್ಟಿಫಿಕೇಟ್ ಮೋಕ್ಷಕ್ಕೆ ಅತ್ಯಗತ್ಯ. ಅದಕ್ಕೇ ಅಕ್ಕ ಹೇಳಿರುವುದು "ಬಸವಣ್ಣ ಮೆಚ್ಚುವಂತೆ ಒಗೆತನವ ನಾ ಮಾಡುವೆ " ಎಂದು. ಮುಕ್ತಿದಾತ ಲಿಂಗದೇವನು ಅನುಗ್ರಹಿಸಬೇಕಾದರೆ ಮುಕ್ತಿದಾಯಕ ಬಸವಣ್ಣನವರ ಶಿಫಾರಸು ಬೇಕೇ ಬೇಕು. ಅದು ಸಿಗಬೇಕಾದರೆ ಏಕದೇವೋಪಾಸನೆ, ಇಷ್ಟಲಿಂಗ ನಿಷ್ಠೆ ಅತ್ಯಗತ್ಯ ಎಂದು ನಮ್ರವಾಗಿ ತಿಳಿಸಿ, ಬರೀ ಹೊಗಳಿಕೆಯ ಮಾತುಗಳ ಮಧ್ಯೆ ಅಂತರಾವಲೋಕನ ನಿಲ್ಲಿಸದೆ ಬಸವ ಗುರುವಿನ ವಚನಾದೇಶ ನೋಡಿ ತಮ್ಮ ತಮ್ಮ ಆಚರಣೆಗಳನ್ನು ಒರೆಗೆ ಹಚ್ಚಿಕೊಳ್ಳಬೇಕೆಂದು ನಮ್ರತೆಯಿಂದ ಕೋರುತ್ತೇನೆ. ಶರಣು ಶರಣಾರ್ಥಿಗಳೊಡನೆ -ಬಸವಾತ್ಮಜೆ.

ಬಸವ ವಚನಾಮೃತ

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ
ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ
ಲಿಂಗಭಕ್ತನು ಲಿಂಗಪಥವ ಹೇಳಿದಡೆ ಮಚ್ಚರಿಸುವವರ ಮೆಚ್ಚ ಲಿಂಗದೇವ.

- ಬ.ವ.ದೀ 651

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಬಸವ ಧರ್ಮ ಪೀಠ (ರಿ.)

ಮಹಾಮನೆ ಮಹಾಮಠ, ಶರಣಲೋಕ
ಕೂಡಲ ಸಂಗಮ ಸುಕ್ಷೇತ್ರ-587115
ತಾ-ಹುನಗುಂದ, ಜಿ-ಬಾಗಲಕೋಟೆ. ಕರ್ನಾಟಕ ರಾಜ್ಯ,ಭಾರತ

ಗಣಮೇಳಕ್ಕೆ ಕರೆ

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವ
ಕೋಳಿಯೊಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ ?

ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ ಎಂದು ಧರ್ಮಪಿತರು ಹೇಳುವಂತೆ ಭಕ್ತಿಪಕ್ಷದ ಸದಸ್ಯರಾಗಬೇಕಾದುದು ಎಲ್ಲ ಬಸವ ಭಕ್ತರ ಆದ್ಯ ಕರ್ತವ್ಯ.

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡುಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥವೆ ಮೊದಲು ;
ನಮ್ಮ ಲಿಂಗದೇವರನರಿವೊಡೆ ಶರಣರ ಸಂಗವೇ ಮೊದಲು ಮೊದಲು !

ಆದ್ದರಿಂದ ಗಣ ಸಮಾವೇಶಗಳಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ. ನೆನಹು-ಪ್ರತಿನಿತ್ಯ ಸಂಜೆ 7 ಗಂಟೆಗೆ ಮಾಡುವ ಸಂಕ್ಷಿಪ್ತ ಪ್ರಾರ್ಥನೆ, ಶರಣ ಸಂಗಮ-ವಾರದ ಸಾಮೂಹಿಕ ಪ್ರಾರ್ಥನೆ, ಗಣ ಮೇಳ-ಶಿವರಾತ್ರಿಯಂದು ಮಾಡುವ ಸಮುದಾಯ ಪ್ರಾರ್ಥನಾ ಸಭೆ, ಶರಣ ಮೇಳ-ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ 11 ರಿಂದ 15ರ ವರೆಗೆ ನಡೆಯುವ ಶರಣ ಯಾತ್ರೆ; ಇದಲ್ಲದೆ ಶರಣ ಬಂಧುಗಳು ತಮ್ಮ ಮನೆಯ ಸುಖದ ಸಮಾರಂಭಗಳಾದ ವಿವಾಹ, ನಾಮಕರಣ, ಗೃಹ ಪ್ರವೇಶ ಮುಂತಾದವು. ಧಾರ್ಮಿಕ ವಿಧಿಗಳಾದ ವಿಭೂತಿ ವೀಳ್ಯ, ಲಿಂಗೈಕ್ಯ ಸಂಸ್ಕಾರ, ಲಿಂಗೈಕ್ಯರ ಸಂಸ್ಮರಣೆ ಮುಂತಾದವುಗಳನ್ನು ನಡೆಸುವ ಸಮಯದಲ್ಲಿ ಮಾಡುವ ಗಣ ಸಮಾವೇಶವಾದ ಶರಣ ಸಮಾಗಮ ಇವೆಲ್ಲವೂ ಶರಣ ಬಂಧುಗಳನ್ನು ಪರಸ್ಪರ ಒಂದು ಕಡೆ ಬೆರೆಯುವಂತೆ, ಬೆಸೆಯುವಂತೆ ಮಾಡುವ ಅಪೂರ್ವ ಕಾರ್ಯಕ್ರಮಗಳು. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆದ ಏಳನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ. 15-1-1994 ರಂದು ಶರಣರ ಮಹಾಸಭೆಯು ಒಂದು ಚಾರಿತ್ರಿಕ ನಿರ್ಣಯವನ್ನು ತೆಗೆದುಕೊಂಡಿದೆ. ಅದೆಂದರೆ ಪ್ರತಿ ವರ್ಷವೂ ಮಹಾಶಿವರಾತ್ರಿಯಂದು ಎಲ್ಲ ಗ್ರಾಮ, ಊರು, ಜಿಲ್ಲಾ ಕೇಂದ್ರ, ನಗರಗಳಲ್ಲಿ "ಶರಣ ಗಣ ಮೇಳ" ಎಂಬ ಸಮಾವೇಶವನ್ನು ನಡೆಸಿ ಸೃಷ್ಟಿಕರ್ತ ಲಿಂಗದೇವನನ್ನು-ಧರ್ಮಗುರು ಬಸವಣ್ಣನವರನ್ನು ಕೊಂಡಾಡಬೇಕೆಂಬುದು. ಈ ಗಣಮೇಳವನ್ನು ನೀವು ನಡೆಸಬೇಕೆಂಬ ದಿವ್ಯ ಆದೇಶವನ್ನು ಬಸವ ಧರ್ಮದ ಮಹಾಜಗದ್ಗುರು ಪೀಠವು ಕಳಿಸಿಕೊಟ್ಟಿದೆ. ಈ ದಿವ್ಯ ಆದೇಶ ಪಾಲನೆ ನಿಮ್ಮ ಪವಿತ್ರ ಕರ್ತವ್ಯ ಎಂದೇ ಭಾವಿಸಿದ್ದೇವೆ.

ಶಿವರಾತ್ರಿಯು ಬುಧವಾರ ದಿ.21-2-2001 ರಂದು ಒದಗಿ ಬಂದಿದ್ದು ಅಂದು ಗಣಮೇಳವನ್ನು

ತಾವು ನಡೆಸಬೇಕು. ಊರಿನ ಮಧ್ಯದಲ್ಲಿರುವ ಒಂದು ವಿಶಾಲವಾದ ಮೈದಾನದಲ್ಲಿ ಅಥವಾ ವಿಶಾಲವಾದ ಸಭಾ ಭವನದಲ್ಲಿ ಪ್ರಾರ್ಥನೆಯನ್ನು ನಡೆಸಬೇಕು. ಗಣ್ಯರಿಂದ ಧ್ವಜಾರೋಹಣ, ಬಸವ ಭಾವಚಿತ್ರ ಪೂಜೆ ಮಾಡಬೇಕು. ಅಂದು ಯಾವುದೇ ವ್ಯಕ್ತಿಗೆ ಅವರು ಎಷ್ಟೇ ದೊಡ್ಡವರಿರಲಿ ಅವರಿಗೆ ಮಾಲಾರ್ಪಣೆ ಮಾಡದೆ ಅವರಿಂದ ಧರ್ಮಪಿತರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿಸಬೇಕು. ಬಸವ ಧರ್ಮಪೀಠದಿಂದ ಕಳಿಸಿಕೊಡುವ (ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಮುದ್ರಿಸಲಾಗುವ) ಸಂದೇಶವನ್ನು ಓದಬೇಕು. ಶ್ರದ್ಧಾ-ಭಕ್ತಿಯಿಂದ ಉಪನ್ಯಾಸ ಮಾಡುವವರಿದ್ದರೆ ಮಾಡಿಸಬೇಕು. ಧಾರ್ಮಿಕ ಶ್ರದ್ಧೆಯೇ ಇರದ ಉಪಾನ್ಯಾಸಕರಿಂದ ಗೊಂದಲಪೂರ್ಣ ಭಾಷಣಗಳನ್ನು ಮಾಡಿಸಲು ಹೋಗಬಾರದು. ಬೆಳಿಗ್ಗೆ ಮಾಡುವ ಸಮುದಾಯ ಪ್ರಾರ್ಥನೆ-ಶರಣ ಸಂಗಮ ಕಡ್ಡಾಯ ವಿಧಿ. ಸಾಮೂಹಿಕ ಇಷ್ಟಲಿಂಗಾರ್ಚನೆ, ಜಾಗರಣೆ ಮುಂತಾದುವನ್ನು ಅವರವರ ಅನುಕೂಲತೆಗೆ ತಕ್ಕಂತೆ ಇಟ್ಟುಕೊಳ್ಳಬಹುದು..

"ಕಲ್ಯಾಣ ಕಿರಣ" ಮಾಸ ಪತ್ರಿಕೆ

ಬಸವ ಧರ್ಮ ಪೀಠ, ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳ ಚಟುವಟಿಕೆ, ಕಾರ್ಯಕ್ರಮ ವಿವರ ಮುಂತಾದುವನ್ನು ತಿಳಿಯಲು, ತಾತ್ವಿಕವಾಗಿ ಮಾಹಿತಿ ಪಡೆಯಲು ಬಸವ ತತ್ವಾನುಯಾಯಿಗಳು ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ತಪ್ಪದೇ ಓದುವುದು ಅತ್ಯಗತ್ಯ. ಕೆಲವೊಂದು ವಿಷಯಗಳನ್ನು ಬೇರೆ ಪತ್ರಿಕೆಗಳ ಮೂಲಕ ಕೊಡುವುದು ತಿಳಿಸುವುದು ಸಾಧ್ಯವಾಗದು. ಅವರು ಹಾಕುವುದೂ ಇಲ್ಲ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ವೈಯಕ್ತಿಕವಾಗಿ ಮತ್ತು ಪ್ರಾರ್ಥನಾ ಸಭೆಗಳಲ್ಲಿ ಓದುವುದು ಅತ್ಯಗತ್ಯವಾಗಿರುತ್ತದೆ. ಕೆಲವು ಪತ್ರಿಕೆಗಳು ಪೂರ್ವಾಗ್ರಹ ಪೀಡಿತವಾಗಿ ಉತ್ಪ್ರೇಕ್ಷಿತ ವರದಿಗಳನ್ನು, ಸುಳ್ಳು ವಿವರಗಳನ್ನೂ ಕೊಡುತ್ತಿರುತ್ತವೆ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು 500 ರೂ. ಕಟ್ಟಿ ಆಜೀವ ಸದಸ್ಯರು ಅಥವಾ 50 ರೂ. ಕಟ್ಟಿ ವಾರ್ಷಿಕ ಚಂದಾದಾರರಾಗುವುದು ಅವಶ್ಯವಿರುತ್ತದೆ.

ವಿಳಾಸ : ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, 2035, 20ನೆಯ ಮೇನ್,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 560010

ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಲ್ಲಿರುವ ರಾಷ್ಟ್ರೀಯ ಬಸವ ದಳಗಳವರು ಕನ್ನಡ ಬಲ್ಲ ಯಾರಾದರೂ ಒಬ್ಬರನ್ನು ಆಹ್ವಾನಿಸಿ ಕಲ್ಯಾಣ ಕಿರಣವನ್ನು ಪೂರ್ಣವಾಗಿ ಓದಿ, ತಿಳಿಯುವ ಪರಿಪಾಠ ಇರಿಸಿಕೊಳ್ಳಬೇಕು.

ಶರಣ ಮೇಳ ರಸೀತಿ ಪುಸ್ತಕ ವಾಪಸ್ಸು

2001 ನೆಯ ಜನವರಿಯಲ್ಲಿ ನಡೆದ 14ನೆಯ ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ರಸೀತಿ ಪುಸ್ತಕಗಳನ್ನು ಕಳಿಸಲಾಗಿತ್ತು. ಕೆಲವರು ಶರಣ ಮೇಳದ ಸಮಯದಲ್ಲಿ ತಂದು ಕೊಟ್ಟಿದ್ದಾರೆ ಮತ್ತೆ ಕೆಲವರು ಕೊಡುತ್ತಿದ್ದಾರೆ. ಆದರೆ ಎಲ್ಲರೂ ಫೆಬ್ರವರಿ ಕೊನೆಯೊಳಗೆ ರಸೀದಿ ಪುಸ್ತಕವನ್ನು ತಲುಪಿಸಲೇಬೇಕೆಂದು ಕೋರುತ್ತೇವೆ. ಸಂಗ್ರಹ ಮಾಡಿದ ಹಣಕ್ಕೆ ಡಿ.ಡಿ.ತೆಗೆಸಿ ಕಳಿಸಬೇಕು. ಒಂದು ವೇಳೆ ಏನೂ ಸಂಗ್ರಹ ಮಾಡಿರದಿದ್ದರೆ ರಸೀತಿ ಪುಸ್ತಕಗಳನ್ನು ವಾಪಸ್ಸು ಕಳಿಸಬೇಕು: ಬೆಂಗಳೂರು ವಿಳಾಸಕ್ಕೇ ಕಳಿಸಬೇಕೆಂದು ಕೋರುತ್ತೇವೆ. ಶರಣ ಮೇಳ ಉತ್ಸವ ಸಮಿತಿಯು ನೋಂದಾಯಿತ ಟ್ರಸ್ಟ್ ಇರುವುದರಿಂದ ನಾವು ಸರಿಯಾಗಿ ಲೆಕ್ಕವಿಡಬೇಕಾದುದು ಕರ್ತವ್ಯವಾಗಿದೆ. ಆದ್ದರಿಂದ ಸಹಕರಿಸಿರಿ.

ಸದ್ಯದಲ್ಲಿ ಬರುವ ಹಬ್ಬ -ಹುಣ್ಣಿಮೆಗಳು.

೧. ಚನ್ನಹುಣ್ಣಿಮೆ - ಮಾಘ ಪೌರ್ಣಿಮೆ. ಅಂದು ಶರಣ ಗಣ ಸಮಾವೇಶ ಮಾಡಿ ಬೆಳುದಿಂಗಳ ಊಟವನ್ನು ಸಾಮೂಹಿಕ ಪ್ರಾರ್ಥನಾ ನಂತರ ಮಾಡುವುದು. ದಿ.8-2-2001

2. ದಿ. 21-2-2001 ಬುಧವಾರ ಮಹಾಶಿವರಾತ್ರಿಯಂದು ಗಣಮೇಳ.

೩. ಹೋಳಿ ಹುಣ್ಣಿಮೆಯು ದಿ.9-3-2001 ರಂದು ಬಂದಿದ್ದು, ಅದರ ಹಿಂದಿನ ದಿನಗಳಲ್ಲಿ ಕ್ರಿ.ಶ. 1196 ರಲ್ಲಿ ಕಲ್ಯಾಣ ಕ್ರಾಂತಿ ಸಂಭವಿಸಿದುದು, ಹೋಳಿ ಹುಣ್ಣಿಮೆಯಂದು ಇನ್ನಿತರ ಜನರು ಅತ್ಯಂತ ಕೆಳಮಟ್ಟದ ಆಚರಣೆ ಮಾಡುವ ಕಾರಣ ಬಸವಾಯತರು ತಮ್ಮ ತಮ್ಮ ಮನೆಗಳಲ್ಲೇ 806ನೆಯ ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮವನ್ನು ಆಚರಿಸಬೇಕು.

ಫಾಲ್ಗುಣ ದ್ವಾದಶಿಯಂದು	ದಿ. 6-3-2001	ಧರ್ಮಪಿತರ ಬಸವಣ್ಣನವರ ಗಡಿಪಾರು
ತ್ರಯೋದಶಿಯಂದು	ದಿ. 7-3-2001	ಹರಳಯ್ಯ-ಮಧುವರಸ-ಶೀಲವಂತರ ಬಂಧನ
ಚತುರ್ದಶಿಯಂದು	ದಿ. 8-3-2001	ಶರಣರ ವಧೆ ಎಳೆಹೂಟೆ
ಹೋಳಿ ಹುಣ್ಣಿಮೆಯಂದು	ದಿ. 9-3-2001	ಬಿಜ್ಜಳನ ವಧೆ
ಪಾಡ್ಯದಂದು	ದಿ. 10-3-2001	ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ
ದ್ವಿತಿಯಾದಂದು	ದಿ. 11-3-2001	ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನ

ಈ ಆರೂ ದಿವಸಗಳು ಬಸವ ಧರ್ಮದ ಇತಿಹಾಸದಲ್ಲಿ ಕರಾಳ ದಿನಗಳು. ಆದ್ದರಿಂದ ಶರಣ ಬಂಧುಗಳು ಆರು ದಿವಸಗಳ ಕಾಲ ತಮ್ಮ ತಮ್ಮ ಮನೆಗಳಲ್ಲಿ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಸಂಜೆಯ ವೇಳೆ ಪಾರಾಯಣ ಮಾಡಬೇಕು. ಕಲ್ಯಾಣ ಕ್ರಾಂತಿ ಪುಸ್ತಕ 142 ಪುಟಗಳಿಂದ ಕೂಡಿದ್ದು ಆರು ದಿನಗಳಿಗೆ ವಿಂಗಡಿಸಿಕೊಳ್ಳಬೇಕು. ಪ್ರತಿದಿನ ಸಂಜೆ 7 ಗಂಟೆಗೆ ಧರ್ಮಪಿತರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನೆನಹು ಮಾಡಿ, ಕಲ್ಯಾಣ ಕ್ರಾಂತಿಯ 24 ಪುಟಗಳನ್ನು ಪಠಣ ಮಾಡಬೇಕು. ಇನ್ನಿತರರು ಕುಳಿತು ಕೇಳಬೇಕು. ಫಾಲ್ಗುಣ ಮಾಸದ ಬಹುಳ ದ್ವಿತೀಯ ದಿ.11-3-2001 ರಂದು ಮಹಾಮಂಗಲದೊಡನೆ ಪಠಣವನ್ನು ಮುಕ್ತಾಯ ಮಾಡಬೇಕು. ನಾನು ಬರೆದಿರುವ ಕಲ್ಯಾಣ ಕ್ರಾಂತಿ ಪುಸ್ತಕವು ಮರಾಠಿ ಭಾಷೆಯಲ್ಲೂ ತರ್ಜುಮೆಗೊಂಡಿದೆ. ಮರಾಠಿ ಮಾತೃಭಾಷೆಯವರು ಅದನ್ನೇ ಪಠಣ ಮಾಡಬೇಕು. ಈ ಎಲ್ಲ ಧಾರ್ಮಿಕ ಆದೇಶಗಳನ್ನು ಶ್ರದ್ಧಾ-ಭಕ್ತಿಯಿಂದ ಪಾಲಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇವೆ.

ದಿ. 25-1-2001

ಶುಭಹಾರೈಕೆಗಳೊಡನೆ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

೧೦. ಆರು ಮುನಿದು ನಮ್ಮನೇನ-ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವದು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ!
ಆನೆಯ ಮೇಲೆ ಹೋಹವನ ಶ್ವಾನ ಕಚ್ಚ ಬಲ್ಲುದೆ,
ನಮಗೆ ನಮ್ಮ ಲಿಂಗದೇವಯ್ಯನುಳ್ಳನ್ನಕ್ಕರ ?

ಗಣಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ 'ಗಣಮೇಳ'ದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣಮೇಳ'ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು. ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣಧರ್ಮ' ಒಂದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು ; ನಿಮ್ಮಾಳಿನ'ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ

ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು, ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣಮೇಳಾಪ' ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage)ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ , ಶಿವಯೋಗಿ ಸಿದ್ಧರಾಮೇಶ್ವರ , ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈ ವರೆಗೆ ಆಗಿ ಹೋಗಿರುವ ಶಿವಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ - ಲಿಂಗೈಕ್ಯ ದಿನ ಆಚರಿಸಲು ವರ್ಷದ ೩೬೫ ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ 'ಯೋಗಿಶಿವ'ನ ತಪಸ್ಸಿನ ಧಿನವಾದ 'ಶಿವರಾತ್ರಿಯಂದು' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸಾರವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. ೧೧೩೪ ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ

ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯುಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನಿಂದ ದಿವ್ಯ ಆದೇಶವನ್ನು ಪಡೆದರು. ಸಾಕ್ಷಾತ್ಕಾರದ ಅನುಭವವಾಗಿ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ-ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು. ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು. ಅವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರು ನಳನಾಮಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ.೧೧೯೬ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಬಸವಾದಿ ಪ್ರಮಥರು ವಿಶೇಷ ಪಥವನ್ನು ತೋರಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

೧. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
೨. ದೇವನು ಒಬ್ಬ (ಲಿಂಗಾಚಾರ)
೩. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
೪. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
೫. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
೬. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ -ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ -ಪರಮಾತ್ಮನಲ್ಲಿ ಒಡವೆರೆದು ಒಂದಾಗುವುದು, ಜೀವನು ಪರಶಿವನೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರುಸ್ಥಲ (stages)ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು ! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ- ಜಂಗಮ-

ವಿಭೂತಿ-ರುದ್ರಾಕ್ಷಿ-ಮಂತ್ರ, ಪಾದೋದಕ-ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟುಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ಈ ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅ ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಲ್ಲ

ವಿಶ್ವಗುರು ಬಸವಣ್ಣನವರು ವಿಶ್ವಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ , ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ, ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣಮೇಳದ ಇಂದು ತೊಡೋಣ.

★

"ಜಯಗುರು ಬಸವೇಶ ಹರಹರ ಮಹಾದೇವ"

೧೨. ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ
ಅಡಿಗಡಿಗೆ ಗುರುವಿನಾಣೆ ಎಂಬ ವಚನವೆ ಹೊಲ್ಲ !
ಮುಂದೆ ಶಿವಪಥಕ್ಕೆ ಸಲ್ಲರು
ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದಡೆ
ನಗುತಲಿರಿದುಕೊಂಡಡೆ ಅಲಗು ನೆಡದಿಹುದೆ ಲಿಂಗದೇವಾ ?

ದಿ. 29-1-2001ರಂದು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ
ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ವಿವರ

ಲಿಂಗಾಯತರು ಹಿಂದುಗಳಲ್ಲ, ಸ್ವತಂತ್ರ ಧರ್ಮಾನುಯಾಯಿಗಳು

-ಜಗದ್ಗುರು ಮಾತೆ ಮಹಾದೇವಿ

★ ಮುಂಬರುವ ಜನಗಣತಿಯಲ್ಲಿ 8ನೆಯ ಕಾಲಂದಲ್ಲಿ ಕೇವಲ ಲಿಂಗಾಯತ ಬರೆಸಲು ಕರೆ
★ ಲಿಂಗಾಯತ-ವೀರಶೈವ ಬೇರೆ ಬೇರೆ
★ ವೀರಶೈವರು ಹಿಂದುಗಳೇ, ಲಿಂಗಾಯತರು ಹಿಂದುಗಳಲ್ಲ
★ ವೀರಶೈವ ಮಹಾಸಭೆಯ ದ್ವಂದ್ವನೀತಿ ಖಂಡನಾರ್ಹ.
★ ಡಾ|| ಚಿದಾನಂದ ಮೂರ್ತಿಯವರು ಲಿಂಗಾಯತ-ವೀರಶೈವಗಳ ಕಲಬೆರಕೆ ಮಾಡದಿರಲಿ.
★ ಲಿಂಗಾಯತರ ಮದುವೆಯ ವಿಧಿ-ವಿಧಾನ, ಹಬ್ಬ ಹುಣ್ಣಿಮೆ ಬೇರೆಯೇ ಆಗಿವೆ.
★ ಬಸವಣ್ಣನವರು ವೀರಶೈವ ಮತವನ್ನು ಸ್ವೀಕರಿಸಲೇ ಇಲ್ಲ.
★ ಲಿಂಗಾಯತರು ಜೈನ, ಬೌದ್ಧ, ಸಿಖ್ಖರಂತೆ ಸ್ವತಂತ್ರ ಧರ್ಮಾನುಯಾಯಿಗಳು ಎಂದ ಮಾತ್ರಕ್ಕೆ ರಾಷ್ಟ್ರ ವಿರೋಧಿಗಳಲ್ಲ.
★ ಲಿಂಗಾಯತ ಧರ್ಮ ವಿಮೋಚನಾ ಚಳುವಳಿ.

"ಲಿಂಗಾಯತರು ಹಿಂದುಗಳಲ್ಲ. ವಚನ ಸಾಹಿತ್ಯವು ಅಜ್ಞಾತವಾಸವನ್ನನುಭವಿಸುತ್ತ ಪ್ರಕಟಗೊಳ್ಳದೆ ಇರುವಾಗ ಲಿಂಗಾಯತ ಧರ್ಮೀಯರು ತಮ್ಮ ಧರ್ಮದ ಸ್ವರೂಪ ತಿಳಿಯದೆ ಲಿಂಗಾಯತವು ಹಿಂದೂ ಧರ್ಮದೊಳಗಣ ಒಂದು ಜಾತಿ ಎಂದು ಭಾವಿಸಿ ಅದೇ ರೀತಿ ಧರ್ಮ ಕಾಲಂನಲ್ಲಿ ಹಿಂದೂ ಎಂದು, ಜಾತಿ ಎಂಬಲ್ಲಿ ಲಿಂಗಾಯತ ಎಂದು ಬರೆಸುತ್ತ ಬಂದರು. ವಚನ ಸಾಹಿತ್ಯವು ಪ್ರಕಟಗೊಂಡು ಈಗ ಜನಮನದಲ್ಲಿ ಆಳವಡುತ್ತ ಬಂದಂತೆ ಲಿಂಗಾಯತವು 12ನೆಯ ಶತಮಾನದಲ್ಲಿ ಕ್ರಾಂತಿ ಪುರುಷ ಬಸವಣ್ಣನವರಿಂದ ಸ್ಥಾಪನೆಗೊಂಡ, ವಚನ ಸಾಹಿತ್ಯ ಆಧಾರಿತವಾದ ಸ್ವತಂತ್ರ, ಪ್ರಗತಿಪರ ಮತ್ತು ಪರಿಪೂರ್ಣ ಧರ್ಮ ಎಂಬ ತಿಳುವಳಿಕೆ ಸ್ಪಷ್ಟವಾಗಿ ಮೂಡಿದೆ. ವಚನ ಸಾಹಿತ್ಯದಲ್ಲಿ ಹೇಳಲ್ಪಟ್ಟ ವಿಶಿಷ್ಟ ನಂಬಿಕೆ, ಆಚಾರ, ವಿಚಾರ, ವಿಧಿ-ವಿಧಾನಗಳಿಂದ ಕೂಡಿದ ಲಿಂಗಾಯತವು ಅವೈದಿಕ ಧರ್ಮ. ಆದ್ದರಿಂದ ಮುಂಬರುವ ಜನಗಣತಿಯಲ್ಲಿ ಲಿಂಗಾಯತರು ಜನಗಣತಿಯ 8ನೆಯ ಕಾಲಂದಲ್ಲಿ ಹಿಂದೂ ಲಿಂಗಾಯತ, ವೀರಶೈವ ಎಂದಾಗಲೀ ಬರೆಸದೆ ಕೇವಲ ಲಿಂಗಾಯತ ಎಂದು ಮಾತ್ರ ಬರೆಸಬೇಕು" ಎಂದು ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಇಂದು ಕರೆದಿದ್ದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು "ಲಿಂಗಾಯತ-ವೀರಶೈವಗಳು ಸ್ಪಷ್ಟವಾಗಿ ಬೇರೆ ಬೇರೆ. ಲಿಂಗಾಯತವು ಒಂದು ಸ್ವತಂತ್ರ ಧರ್ಮ, ವೀರಶೈವವು ಶೈವದೊಳಗಣ ಒಂದು ಪ್ರಭೇದ ಮಾತ್ರ. ಲಿಂಗಾಯತವು ಜಾತ್ಯತೀತ ದೃಷ್ಟಿಕೋನದ ವೈಚಾರಿಕ ಧರ್ಮ. ವೀರಶೈವವು ವರ್ಣಾಶ್ರಮ ವ್ಯವಸ್ಥೆಯನ್ನು ಪಾಲಿಸುವ ವೇದಾಗಮ, ಆಧಾರಿತವಾದ ಒಂದು ಶೈವದ ಶಾಖೆ. ಆದ್ದರಿಂದ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನನ್ನು ಪೂಜಿಸುವ ವೀರಶೈವವು ಹಿಂದು ಧರ್ಮದೊಳಗಣ ಅವಿಭಾಜ್ಯ ಅಂಗ ಎಂಬುದೇ ಸತ್ಯ. ಈ ದಿಶೆಯಲ್ಲಿ ಡಾ|| ಚಿದಾನಂದಮೂರ್ತಿ, ಆರ್.ಎಸ್.ಎಸ್ ಮುಖಂಡರು ಮುಂತಾದವರ ಅಭಿಪ್ರಾಯ ಸರಿ. ಆದರೆ ಚಿದಾನಂದ ಮೂರ್ತಿಯವರಾಗಲೀ ಡಾ|| ಶಿವಕುಮಾರ ಸ್ವಾಮಿಯವರಾಗಲಿ ಮಾಡುವ ತಪ್ಪೇನೆಂದರೆ

ಅವರು ವೀರಶೈವ ಕುರಿತು ಮಾತ್ರ ತಮ್ಮ ಹೇಳಿಕೆಗಳನ್ನು ಸೀಮಿತಗೊಳಿಸಿಕೊಳ್ಳದೆ ವೀರಶೈವ ಪಂಥಕ್ಕೆ ಸಂಬಂಧವೇ ಇಲ್ಲದ ಲಿಂಗಾಯತ ಧರ್ಮ ಕುರಿತು ಕಲಬೆರಕೆ ಮಾಡುವ ಅಪ್ರಾಮಾಣಿಕತೆ ಪ್ರದರ್ಶಿಸುತ್ತಿರುವುದು. ಇದು ಖಂಡನಾರ್ಹ.

ಅದೇ ರೀತಿ ವೀರಶೈವ ಮಹಾಸಭೆಯವರು ವೀರಶೈವ ಅಥವಾ ಲಿಂಗಾಯತ ಎಂದು ಎರಡರಲ್ಲಿ ಯಾವುದನ್ನಾದರೂ ಬರೆಸಿ ಎಂದು ಪ್ರಚಾರ ಮಾಡುತ್ತ ಲಿಂಗಾಯತ ಧರ್ಮ-ಸಮಾಜಗಳ ಶುಚಿತ್ವವನ್ನು ಕೆಡಿಸುತ್ತಿರುವುದು ಸಹ ಆಕ್ಷೇಪಾರ್ಹ. ಜನಜೀವನದಲ್ಲಿ ರೂಢಿಯಲ್ಲಿದ್ದುದು, ಇರುವುದು ಲಿಂಗಾಯತ ಪದ ಮಾತ್ರ. ವೀರಶೈವ ಮಹಾಸಭೆಯವರು ವೀರಶೈವ ಪದವನ್ನು ಕೃತಕವಾಗಿ ತಂದು ಸೇರಿಸುವ ಪ್ರಯತ್ನ ಮಾಡಿ ಜನರಲ್ಲಿ ಗೊಂದಲವನ್ನು ಉಂಟು ಮಾಡುತ್ತಿದ್ದಾರೆ. ಅತಿ ದೊಡ್ಡ ಶಿಕ್ಷಣ ಸಂಸ್ಥೆ ಬೆಳಗಾಂವಿಯ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬಿಜಾಪುರ ಲಿಂಗಾಯತ ಅಭಿವೃದ್ಧಿ ಶಿಕ್ಷಣ ಸಂಸ್ಥೆ ಮುಂತಾದ ಹೆಸರುಗಳೇ ನಮ್ಮದು ಲಿಂಗಾಯತ ಸಮಾಜವೇ ವಿನಾ ವೀರಶೈವವಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತವೆ. ಕರ್ನಾಟಕ ಗಾಜ್ಯದಲ್ಲಿ ಪ್ರಮುಖವಾಗಿ, ಇದಕ್ಕೆ ಹೊಂದಿಕೊಂಡಂತೆ ಇರುವ ಪಕ್ಕದ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಗೋವಾಗಳಲ್ಲಿ ಗಣನೀಯವಾಗಿ ಇರುವ ಇಷ್ಟಲಿಂಗಧಾರಿಗಳು ಲಿಂಗಾಯತರೇ ವಿನಾ ವೀರಶೈವರಲ್ಲ. 12ನೆಯ ಶತಮಾನದಲ್ಲಿ ಲಿಂಗಾಯತ ಎಂಬ ಹೊಸಧರ್ಮವನ್ನು ಕ್ರಾಂತಿ ಪುರುಷ ಬಸವಣ್ಣನವರು ಕೊಟ್ಟಾಗ ಎಲ್ಲ ವರ್ಣ ಜಾತಿಗಳವರು ಬಂದು ಸೇರಿದಂತೆ ವೀರಶೈವರೂ ಸಹ ಬಂದು ಸೇರಿದರು. ಹೊಸ ಧರ್ಮದಲ್ಲಿ ಸೇರಿದ ಅವರು ತಮ್ಮ ಹಳೆಯ ನಂಬಿಕೆ ಆಚಾರಗಳನ್ನು ತಂದು ಇಲ್ಲೂ ಸೇರಿಸುತ್ತಿರುವುದನ್ನು ವಚನಗಳಲ್ಲಿ ಶರಣರು ತೀಕ್ಷ್ಣವಾಗಿ ಟೀಕಿಸುತ್ತಿರುವುದನ್ನು ಕಾಣುತ್ತೇವೆ. ಹೀಗಿರುವ ವೀರಶೈವವನ್ನು ಲಿಂಗಾಯತದೊಡನೆ ಸಮಾನಾರ್ಥದಲ್ಲಿ ಬಳಸುವುದು ಖಂಡನಾರ್ಹ." ಎಂದು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ನುಡಿದರು.

ಬಸವಣ್ಣನವರು ವೀರಶೈವ ಮತವನ್ನು ಸ್ವೀಕರಿಸಲಿಲ್ಲ

ಕ್ರಾಂತಿಪುರುಷ ಬಸವಣ್ಣನವರು ವೀರಶೈವ ಮತವನ್ನು ಸ್ವೀಕರಿಸಲಿಲ್ಲ ; ಅವರು ವೀರಶೈವ ಮತವನ್ನು ಸ್ವೀಕರಿಸಿದರು ಎಂಬುದಕ್ಕೆ ಯಾವುದೇ ಕಾವ್ಯ-ಪುರಾಣ-ವಚನಗಳ ಆಧಾರವಿಲ್ಲ. ಏಕೆಂದರೆ ವೀರಶೈವ ಮತವೂ ವರ್ಣಾಶ್ರಮಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡುದೇ ಆಗಿತ್ತು. ಇವತ್ತಿಗೂ ಪಂಚಪೀಠದ ಸ್ವಾಮಿಗಳವರ ಜಾತಿವಾದ, ಆಡಂಬರ, ಅಡ್ಡಪಲ್ಲಕ್ಕಿ ಮುಂತಾದ್ದು ನೋಡಿದಾಗ ಇವೆಲ್ಲವೂ ಸಮತಾವಾದ ಸರಳತೆ ಮುಂತಾದುವನ್ನು ಬೋಧಿಸಿದ ಬಸವಣ್ಣನವರ ವಿಚಾರಧಾರೆಗೆ ತದ್ವಿರುದ್ಧವಾಗಿದೆ ಎನ್ನಿಸದಿರದು. ಅಂದಾಗ ಬಸವಣ್ಣನವರು ತಾವು ಹುಟ್ಟಿದ ವೈದಿಕ ಸಂಪ್ರದಾಯ ತೊರೆದು ಬಾಣಲೆಯಿಂದ ಬೆಂಕಿಗೆ ಬೀಳುವಂತೆ ವೈದಿಕದ ಮತ್ತೊಂದು ರೂಪವಾದ ವೀರಶೈವವನ್ನು ಅವಲಂಬಿಸುವಷ್ಟು ಅಜ್ಞಾನಿಗಳೇನಲ್ಲ. ಬಸವಣ್ಣನವರು ಹೊಸಧರ್ಮವನ್ನು ಕೊಟ್ಟಾಗ ಅನೇಕರು ಬಂದು ಸೇರಿದಂತೆ ವೀರಶೈವ ಮೂಲದವರು ಬಂದು ಸೇರಿ ಲಿಂಗಾಯತ ಧರ್ಮದ ಶುಚಿತ್ವವನ್ನು ಕೆಡಿಸಿದರು. ಕ್ರಾಂತಿ ಪುರುಷ ಬಸವಣ್ಣನವರು ಕೊಟ್ಟ ಧರ್ಮವು ವೀರಶೈವವನ್ನು ಸಹ ನಿರಾಕರಿಸಿತು ಎಂಬುದನ್ನು ಮೋಳಿಗೆಯ ಮಾರಯ್ಯನವರು ತಮ್ಮ ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಶುದ್ಧ ಶೈವ ಕಪ್ಪಡಿಯ ಸಂಗಮನಾಥನಲ್ಲಿ ....
ಶುದ್ಧ ಶೈವವ ಹೊದ್ದದೆ, ಪೂರ್ವ ಶೈವವನಾಚರಿಸದೆ
ಮಾರ್ಗ ಶೈವವ ಮನ್ನಣೆಯ ಮಾಡದೆ,
ವೀರಶೈವವನಾರಾಧಿಸದೆ ಆದಿ ಶೈವವನನುಕರಿಸದೆ

-(ಸಂಕೀರ್ಣ ವಚನ ಸಂಪುಟ 3 (8), ವಚನ-2092

ಅದ್ದರಿಂದ ಡಾ॥ ಚಿದಾನಂದ ಮೂರ್ತಿ ಮುಂತಾದ ಹಿಂದೂ ವೀರಶೈವವಾದಿಗಳು ವೀರಶೈವವನ್ನು ಲಿಂಗಾಯತದೊಡನೆ ಸಮೀಕರಿಸುವ ಕುತಂತ್ರದ ಕೆಲಸವನ್ನು ಕೈಬಿಡಬೇಕು.

''ಹಿಂದು ವಿವಾಹ ಕಾಯ್ದೆಯು ಲಿಂಗಾಯತರಿಗೂ ಅನ್ವಯಿಸುವ ಕಾರಣ ಲಿಂಗಾಯತರು ಹಿಂದುಗಳು'' ಎಂಬ ಪೊಳ್ಳುವಾದವನ್ನು ಡಾ॥ ಚಿದಾನಂದ ಮೂರ್ತಿ ಮಂಡಿಸುತ್ತಾರೆ. ಹಿಂದೂ ವಿವಾಹ ಕಾಯ್ದೆ, ದತ್ತು ಕಾಯ್ದೆ ಮುಂತಾದವು ಲಿಂಗಾಯತರಿಗಷ್ಟೇ ಅಲ್ಲ ಸ್ವತಂತ್ರ ಧರ್ಮಗಳೆಂದು ಮಾನ್ಯತೆ ಪಡೆದಿರುವ ಜೈನ, ಬೌದ್ಧ, ಸಿಖ್ ಧರ್ಮೀಯರಿಗೂ ಅನ್ವಯವಾಗುತ್ತಿದೆ. ಆದರೆ ವಿವಾಹ, ಶವಸಂಸ್ಕಾರ ಮುಂತಾದ ವಿಧಿ ವಿಧಾನಗಳು ಲಿಂಗಾಯತ ಸಮಾಜದಲ್ಲಿ ಹಿಂದೂ ವಿಧಿವಿಧಾನಗಳಿಗಿಂತ ಬೇರೆಯೇ ಇವೆ ಎನ್ನುವುದು ಸುಸ್ಪಷ್ಟ. ಹಿಂದು ರುದ್ರಭೂಮಿಗಿಂತ ಲಿಂಗಾಯತರ ರುದ್ರಭೂಮಿಯು ಪ್ರತ್ಯೇಕವಾಗಿ ಇರುವುದು, ಹಿಂದುಗಳು ಶವವನ್ನು ಸುಟ್ಟರೆ ಲಿಂಗಾಯತರು ಶವವನ್ನು ಹುಗಿಯುವದು ; ಈ ಧರ್ಮವು ಅಹಿಂದು ಧರ್ಮ ಎನ್ನುವುದಕ್ಕೆ ಜ್ವಲಂತ ಸಾಕ್ಷಿಯಾಗಿವೆ. ಗುಲಬರ್ಗಾದ ಡಾ॥ ಶರಣ ಬಸಪ್ಪ ಅಪ್ಪಾ ಮತ್ತು ಆರ್.ಎಸ್.ಎಸ್ ದಕ್ಷಿಣ ಕ್ಷೇತ್ರೀಯ ಪ್ರಚಾರಕರಾದ ಮೈ.ಚ.ಜಯದೇವ ಅವರು ಹಿಂದು ಸಮಾಜದ ಬಂಧುಗಳು ಆಚರಿಸುವ ಯುಗಾದಿ, ಸಂಕ್ರಾಂತಿ, ಗೌರಿ-ಗಣಪತಿ, ದಸರಾ ಇತ್ಯಾದಿ ಹಬ್ಬಗಳನ್ನು ಲಿಂಗಾಯತರೂ ಆಚರಿಸುವುದರಿಂದ ಅವರು ಹಿಂದುಗಳು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಚನ ಸಾಹಿತ್ಯವು ಬೆಳಕಿಗೆ ಬರುವ ಮೊದಲು ಲಿಂಗಾಯತರಿಗೆ ತಮ್ಮ ಧರ್ಮದ ಸ್ವರೂಪವೇ ತಿಳಿದಿರಲಿಲ್ಲ. ಏಕದೇವೋಪಾಸನೆ ಲಿಂಗಾಯತ ಧರ್ಮದ ಜೀವಾಳ. 'ಆದಿ ಪುರಾಣ ಅಸುರರಿಗೆ ಮಾರಿ,' ಎಂದು ದೇವಿ, ಲಕ್ಷ್ಮಿ, ಸರಸ್ವತಿ, ಗಣಪತಿ-ಗೌರಿ ಪೂಜೆಗಳನ್ನೇ, ಧರ್ಮಗುರು ಬಸವಣ್ಣನವರು ನಿಷೇಧಿಸಿರುವುದರಿಂದ ತತ್ತ್ವವನ್ನು ತಿಳಿದ ಲಿಂಗಾಯತರು ಇಂಥ ಹಬ್ಬಗಳನ್ನು ಕೈಬಿಟ್ಟು ಅಂದು ಲಿಂಗಾಯತ ಧರ್ಮದ ಸೈದ್ಧಾಂತಿಕ ಚೌಕಟ್ಟಿಗೆ ಒಳಪಡುವ ರೀತಿಯಲ್ಲಿ ಮಾತ್ರ ಹಬ್ಬಗಳನ್ನು ಮಾಡುತ್ತಿದ್ದಾರೆ.

ಆರ್.ಎಸ್.ಎಸ್. ವಾದದ ಪೊಳ್ಳುತನ

ಆರ್.ಎಸ್.ಎಸ್. ವಕ್ತಾರರು ವೀರಶೈವವು ಹಿಂದು ಧರ್ಮದ ಅಂಗ ಎಂದೇ ಹೇಳಿದರೆ ಇದನ್ನು ನಾವೂ ಅನುಮೋದಿಸುತ್ತೇವೆ. ಆದರೆ ಲಿಂಗಾಯತ ಧರ್ಮ ಮಾತ್ರ ಸ್ವತಂತ್ರ ಧರ್ಮ ಎಂದು ಸ್ಪಷ್ಟಪಡಿಸುತ್ತೇವೆ. ಜೈನ, ಬೌದ್ಧ, ಸಿಖ್ಖರಂತೆ ಲಿಂಗಾಯತರು ಅಹಿಂದುಗಳು, ಸ್ವತಂತ್ರ ಧರ್ಮಾನುಯಾಯಿಗಳು ಅಂದ ಮಾತ್ರಕ್ಕೆ ಹಿಂದು ವಿರೋಧಿಗಳಲ್ಲ, ರಾಷ್ಟ್ರ ವಿರೋಧಿಗಳೂ ಅಲ್ಲ, ರಾಷ್ಟ್ರ ಸಂರಕ್ಷಣೆಯಲ್ಲಿ ಸಿಖ್ಖರದು ಎಂಥ ಮಹತ್ವದ ಪಾತ್ರ ಎಂಬುದನ್ನು ಪ್ರತಿಯೊಬ್ಬ ಭಾರತೀಯನೂ ಬಲ್ಲನು. ಜೈನ ಧರ್ಮೀಯರು ಹೇಗೆ ಹಿಂದು ಸಂಸ್ಕೃತಿಯ ಪೋಷಕರಾಗಿದ್ದಾರೆ ಎಂಬುದನ್ನು ಎಲ್ಲರೂ ಬಲ್ಲರು. ''ಪ್ರತ್ಯೇಕತಾ ಪ್ರವೃತ್ತಿಯಿಂದ ಹಿಂದೂ ಸಮಾಜ ದುರ್ಬಲಗೊಳ್ಳುವುದಲ್ಲದೆ ತಾವು ದುರ್ಬಲರಾಗುವ ಸಂಭವವೇ ಹೆಚ್ಚು. ಮಾತ್ರವಲ್ಲ ಹಿಂದು ಧರ್ಮದ ನಿರಾಕರಣದಿಂದಾಗಿ ಕ್ರಮೇಣ ರಾಷ್ಟ್ರೀಯತೆಯಿಂದಲೇ ದೂರವಾಗುವ ಸಾಧ್ಯತೆ ಇದೆ'' ಎಂದು ಆರ್.ಎಸ್.ಎಸ್ ವಕ್ತಾರರಾಗಿ ಮೈ.ಚ.ಜಯದೇವ ನುಡಿದಿದ್ದಾರೆ. ಹಿಂದುತ್ವದಲ್ಲಿ ಮಾತ್ರ ರಾಷ್ಟ್ರೀಯತೆ ಇದೆ ಎಂಬುದು ಇನ್ನಿತರ ಧರ್ಮಗಳವರ ರಾಷ್ಟ್ರಾಭಿಮಾನವನ್ನು ಪ್ರಶ್ನಿಸುವ ಧಾರ್ಷ್ಟ್ಯವಾದೀತು. ಎಲ್ಲ ಧರ್ಮೀಯರೂ ಕೂಡಿ ಬದುಕಲೇಬೇಕಾದ ಅವಶ್ಯಕತೆ ಇರುವ ರಾಷ್ಟ್ರದಲ್ಲಿ ಇಂಥ ಧೋರಣೆಯನ್ನು ಆರ್.ಎಸ್.ಎಸ್ ಮೊದಲು ಕೈ ಬಿಡಬೇಕು.

ಜಾತೀಯತೆ, ಮೂಢನಂಬಿಕೆ ಉಳಿದರೆ ಮಾತ್ರ ರಾಷ್ಟ್ರವು ಸುಭದ್ರವಾಗಿರುವುದೆ ? ರಾಮ ಭಕ್ತಿ ಮಾತ್ರ ರಾಷ್ಟ್ರಭಕ್ತಿಯೆ ? ಪ್ರತಿಯೊಬ್ಬ ಧರ್ಮ ನಿಷ್ಠನೂ ತನ್ನ ಧರ್ಮವನ್ನು ಪಾಲಿಸಿಯೂ ರಾಷ್ಟ್ರ

ಪ್ರೇಮಿಯಾಗಿರಲು ಸಾಧ್ಯ ! ಅಪ್ಪಟ ಹಿಂದುಗಳಾದ ಹಿಂದುಜಾ ಸೋದರರು ಬೊಫೋರ್ಸ್ ಹಗರಣದ ಮೂಲಕ ರಾಷ್ಟ್ರಕ್ಕೆ ದ್ರೋಹ ಬಗೆದ ಆರೋಪವಿಲ್ಲವೆ ? ತೋಳ ಬಂತು ತೋಳ ಎಂಬ ಹುಸಿ ಬೆದರಿಕೆ ಹಾಕಿ, ರಾಷ್ಟ್ರವನ್ನು ಸಂರಕ್ಷಿಸಲು ಸಾಧ್ಯವೆ ? ಲಿಂಗಾಯತರು ಅಹಿಂದುಗಳೆಂದು ಘೋಷಿಸಿಕೊಂಡರೂ ಅವರ ಧರ್ಮಭೂಮಿ ಭಾರತ, ಆದ್ದರಿಂದ ಎಂದೆಂದೂ ಇದರ ಅಖಂಡತೆ, ಸಮಗ್ರತೆಗೆ, ಸರ್ವಾಂಗೀಣ ಅಭಿವೃದ್ಧಿಗೆ ಹೋರಾಡುವವರೇ !

ಈ ರಾಷ್ಟ್ರ ಹಿಂದುಸ್ಥಾನ ; ಪಾಶ್ಚಿಮಾತ್ಯರು ಕರೆದ ಇಂಡಿಯಾ ಆಗಲಿ, ಓರ್ವ ವ್ಯಕ್ತಿಯ ಹೆಸರನ್ನು ಸಂಕೇತಿಸುವ ಭಾರತ ಎಂಬುದಾಗಲೀ ಈ ರಾಷ್ಟ್ರಕ್ಕೆ ಸೂಕ್ತ ಹೆಸರಲ್ಲ. ಈ ರಾಷ್ಟ್ರವನ್ನು ಹಿಂದುಸ್ಥಾನ ಎಂದು ಕರೆದರೆ ಆಗ ಇಲ್ಲಿಯ ಪ್ರಜೆಗಳೆಲ್ಲರೂ ಹಿಂದುಸ್ಥಾನಿಗಳೇ, ಈ ಪದವು ರಾಷ್ಟ್ರೀಯತೆಯನ್ನು ಬಲಪಡಿಸುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಮೌಲ್ಯಯುತ ಹೋರಾಟಕ್ಕೆ ಆರ್.ಎಸ್.ಎಸ್. ಕೈಹಾಕಿದರೆ ಲಿಂಗಾಯತ ಧರ್ಮೀಯರ ಬೆಂಬಲ ಎಂದೆಂದೂ ಇದೆ ಎಂದು ಆಶ್ವಾಸನೆ ಕೊಡುತ್ತೇವೆ. ''ಯಾವುದೋ ತಪ್ಪು ತಿಳುವಳಿಕೆಯಿಂದ ಅಥವಾ ಭವಿಷ್ಯದಲ್ಲಿ ಅಲ್ಪ ಸಂಖ್ಯಾತ ಸೌಲಭ್ಯ ದೊರಕುವುದೆಂಬ ಸ್ವಹಿತಾಸಕ್ತಿಯಿಂದ ಲಿಂಗಾಯತ ಧರ್ಮವು ಸ್ವತಂತ್ರ ಮತ್ತು ಅಹಿಂದು ಧರ್ಮ ಎಂದು ಹೇಳಲಾಗುತ್ತಿದೆ'' ಎಂಬ ಭಾವವನ್ನು ಆರ್.ಎಸ್.ಎಸ್ ವಕ್ತಾರರಾಗಿ ಶ್ರೀ ಜಯದೇವ್ ವ್ಯಕ್ತಪಡಿಸಿದ್ದಾರೆ. ಹಾಗಾದರೆ ನಾವೊಂದು ಆಹ್ವಾನವನ್ನು ನೀಡುತ್ತೇವೆ.

ಜನಗಣತಿಯಲ್ಲಿ ಹಿಂದು ಒಂದು ಧರ್ಮ ಎಂದು ಭಾವಿಸಿ ಗಣತಿ ಮಾಡುವ ಪದ್ಧತಿ ತಪ್ಪಿಸಿ, ಹಿಂದು ಹಲವು ಧರ್ಮಗಳ ಒಕ್ಕೂಟ ಎಂದು ಘೋಷಿಸಿದಾಗ ಆ ಒಕ್ಕೂಟದಲ್ಲಿ ಮಾತ್ರ ಲಿಂಗಾಯತ ಧರ್ಮ ಇರಲು ಸಾಧ್ಯವಾದೀತು. ವೈದಿಕ-ಹಿಂದು ಧರ್ಮವು ಬಹುದೇವತೋಪಾಸನೆ, ಮೂಢನಂಬಿಕೆ, ಜಾತಿ ಪದ್ಧತಿಯ ಬೀಡಾಗಿದೆ ; ದಿನ ಬೆಳಗಾದರೆ ಹೋಮ-ಹವನ, ಯಜ್ಞ-ಯಾಗ, ದೇವತೆಗಳಿಗೆ ಎಣ್ಣೆ ಪೂಜೆ-ಬೆಣ್ಣೆಪೂಜೆ ಮಾಡಿ ಬಡ ದೇಶ ಭಾರತದಲ್ಲಿ ತಿನ್ನುಣ್ಣುವ ವಸ್ತುಗಳನ್ನು ಸುಡಲಾಗುತ್ತಿದೆ, ಚೆಲ್ಲಲಾಗುತ್ತಿದೆ, ಇವುಗಳನ್ನು ವೇದಗಳು ಅನುಮೋದಿಸಿದ್ದರೂ ಈ ಆಚರಣೆ ತಪ್ಪು ಎಂದು ಘೋಷಿಸಿ ಇಂಥ ಆಚರಣೆ ತೊರೆಯಲು ಆರ್.ಎಸ್.ಎಸ್ ಹಿಂದುಗಳಿಗೆ ಕರೆ ನೀಡುವ ಧೈರ್ಯ ತೋರಬಲ್ಲುದೆ ? ಶೂದ್ರ-ಅಸ್ಪೃಶ್ಯರಾದಿಯಾಗಿ ಎಲ್ಲ ಹಿಂದುಗಳಿಗೂ ದ್ವಿಜ ಸಂಸ್ಕಾರ ನೀಡಿ ಜನ್ನಿವಾರ ಕೊಡಲು ವೈದಿಕ ಸ್ವಾಮಿಗಳನ್ನು ಆರ್.ಎಸ್.ಎಸ್. ಒತ್ತಾಯಿಸಬಲ್ಲುದೆ ?

ಅಂದಾಗ ವೇದ ಆಗಮಗಳ ಪ್ರಾಮಾಣ್ಯವನ್ನು ಒಪ್ಪದೆ, ಬಹುದೇವತೋಪಾಸನೆ ಖಂಡಿಸಿದ, ವರ್ಣಜಾತಿಗಳ ಸಾಮಾಜಿಕ ವ್ಯವಸ್ಥೆಯನ್ನೇ ನಿರಾಕರಿಸುವ, ಪಂಚ ಸೂತಕಗಳನ್ನು ನಿಷೇಧಿಸಿದ, ಹೋಮ-ಹವನ, ಯಜ್ಞ-ಯಾಗಗಳನ್ನು ವಿರೋಧಿಸಿದ, ಎಲ್ಲಾ ಬಗೆಯ ಸಮಾನತೆ ಸಾರಿ ಮಾನವರೆಲ್ಲರಿಗೆ ಧರ್ಮದೀಕ್ಷೆ ಕೊಡಬಲ್ಲ ಬಸವಣ್ಣನವರ ಲಿಂಗಾಯತ ಧರ್ಮ ಅದೆಂತು ಹಿಂದು ಧರ್ಮದೊಳಗಣ ಅಂಗವಾಗಿ ಇರಲು ಸಾಧ್ಯ ?'' ಎಂದು ಮಾತೆ ಮಹಾದೇವಿಯವರು ಪ್ರಶ್ನಿಸಿದರು.

ಲಿಂಗಾಯತ ಧರ್ಮ ವಿಮೋಚನಾ ಚಳುವಳಿ

''ಭವಿಷ್ಯದಲ್ಲಿ ಅಲ್ಪ ಸಂಖ್ಯಾತರ ಸೌಲಭ್ಯ ಪಡೆಯಬೇಕೆಂಬ ಅತ್ಯಂತ ಸಾಮಾನ್ಯ ಮತ್ತು ಲೌಕಿಕ ಕಾರಣಕ್ಕಾಗಿಯೇ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಮಾನ್ಯತೆ ಪಡೆಯಲು ನಮ್ಮಗಳ ಹೋರಾಟ ನಡೆದಿಲ್ಲ. ವಿಶ್ವಗುರು ಬಸವಣ್ಣನವರದು ಅಸಾಮಾನ್ಯ ವ್ಯಕ್ತಿತ್ವ. ಅವರು ಕೊಟ್ಟ ಲಿಂಗಾಯತ ಧರ್ಮ ಅತ್ಯಂತ ಪ್ರಗತಿಪರ, ವೈಚಾರಿಕ ಕ್ರಾಂತಿಕಾರಿ ಧರ್ಮ. ಎಂಟೂವರೆ ನೂರು ವರ್ಷಕಾಲ ಹಿಂದೂದೊಳಗಣ ಒಂದು ಜಾತಿಯಾಗಿ ಉಳಿದು ಇದರ ಶ್ರೇಷ್ಠತೆ ಜಗತ್ತಿನ ಗಮನಕ್ಕೆ ಬರಲಾಗಿಲ್ಲ.

ಬಸವಾದಿ ಪ್ರಮಥರು ಕೊಟ್ಟ ಅಮೂಲ್ಯ ಸಂದೇಶಗಳನ್ನು ಬಂಡವಾಳವಾಗಿ ಬಳಸಿಕೊಂಡೂ ವೀರಶೈವವಾದಿಗಳು ಬಸವಣ್ಣನವರಿಗೆ ಕೊಡಬೇಕಾದ ಸ್ಥಾನ, ಗೌರವ ಕೊಟ್ಟಿಲ್ಲ. ಆದ್ದರಿಂದ ಹಿಂದುತ್ವದ ಮುಸುಕಿನಿಂದ ಹೊರತಂದು, ವೀರಶೈವವಾದಿಗಳ ಕಪಿಮುಷ್ಟಿಯಿಂದ ಬಿಡಿಸಿ ಲಿಂಗಾಯತ ಧರ್ಮವನ್ನು ಜಾಗತಿಕ ಧರ್ಮಗಳ ಸಾಲಿನಲ್ಲಿ ನಿಲ್ಲಿಸಲಿಕ್ಕಾಗಿ ಈ ವಿಮೋಚನಾ ಚಳುವಳಿಯನ್ನು ಆರಂಭಿಸಲಾಗಿದೆ.'' ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಮಾಜಿ ಶಾಸಕರೂ, ಪ್ರಸಿದ್ಧ ನ್ಯಾಯವಾದಿಗಳೂ ಆದ ಶ್ರೀಮತಿ ಪ್ರಮಿಳಾ ನೇಸರ್ಗಿಯವರು ಲಿಂಗಾಯತ ಧರ್ಮ ಮಹಾಸಭಾದ ಕಾನೂನು ಸಲಹೆಗಾರರಾಗಿದ್ದು ಪತ್ರಿಕಾ ಗೋಷ್ಠಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು.

★★

ಲಿಂಗಾಯತ ಧರ್ಮ ಜಾಗೃತಿ ಯಾತ್ರೆ

ಮನೆ ಮನೆಗೆ ಬಸವ ಸಂದೇಶ

ಲಿಂಗಾಯತ ಧರ್ಮ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯತಾಣ ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ ಇದೇ ೨೦೦೧ರ ಜನವರಿ ೧೧ರಿಂದ ೧೫ರವರೆಗೆ ೧೪ನೆಯ ಶರಣ ಮೇಳವು ಅಭೂತಪೂರ್ವವಾಗಿ ನಡೆಯಿತು. ಲಿಂಗಾಯತ ಧರ್ಮೀಯರ ಈ ಬೃಹತ್ ಧಾರ್ಮಿಕ ಸಮಾವೇಶದಲ್ಲಿ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

೧. ಧರ್ಮಗುರು, ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮವು ಒಂದು ಪ್ರಗತಿಪರ, ಸ್ವಾವಲಂಬಿ, ಪರಿಪೂರ್ಣ ಧರ್ಮ. ಇದರ ಸಮಗ್ರ ಪರಿಚಯವನ್ನು ಮಾಡಿಕೊಡಲೋಸುಗ ಲಿಂಗಾಯತ ಧರ್ಮ ಜಾಗೃತಿ ಯಾತ್ರೆಯನ್ನು ಧರ್ಮಕ್ಷೇತ್ರ ಕೂಡಲಸಂಗಮದಿಂದ ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಕುಮಾರ್ ಸ್ವಾಮೀಜಿ, ಪೂಜ್ಯ ಶ್ರೀ ಮಾತೆ ಮಂಗಳಾದೇವಿ ಇವರ ನೇತೃತ್ವದಲ್ಲಿ ಬಸವ ಧರ್ಮ ಪೀಠದ ವತಿಯಿಂದ ಲಿಂಗಾಯತ ಧರ್ಮ ಜಾಗೃತಿ ಯಾತ್ರೆಯನ್ನು ಸಂಯೋಜಿಸಲಾಗಿದೆ. ಪ್ರತಿಯೊಂದು ಊರಿನಲ್ಲೂ ಸಂಕ್ಷಿಪ್ತ ಪ್ರಾರ್ಥನೆ, ನೆನಹು, ಸಾಮೂಹಿಕ ಪ್ರಾರ್ಥನೆ, ಇಷ್ಟಲಿಂಗಪೂಜೆ, ಬಸವೇಶ್ವರ ಪೂಜಾವ್ರತದ ತರಬೇತಿಯನ್ನು ಜನರಿಗೆ ಕೊಡಬೇಕೆಂದು ಸಂಕಲ್ಪಿಸಿ ಈ ಯೋಜನೆಯನ್ನು ರೂಪಿಸಲಾಗಿದೆ.

ತಾವು ತನು ಮನ ಧನಗಳಿಂದ ಈ ಪ್ರಚಾರ ಕಾರ್ಯಕ್ರಮದಲ್ಲಿ ನೆರವಾಗಬೇಕೆಂದು ನಿರೀಕ್ಷಿಸುತ್ತೇವೆ. ತಾವು ಏನೇ ಧಾರ್ಮಿಕ ಸಲಹೆ, ಸೂಚನೆ, ಮಾಹಿತಿ ಬೇಕಾಗಿದ್ದಲ್ಲಿ ನಮ್ಮನ್ನು ಸಂಪರ್ಕಿಸಿರಿ.

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ

ಸಂಪರ್ಕಿಸುವ ವಿಳಾಸಗಳು:

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010, ದೂ: 080-3325335/ 3322790

ಗುರು ಲಿಂಗಾನಂದರ ಜೋಗುಳ

ಜೋ ಜೋ ಗುರು ಬಸವ ಕಂದರಿಗೆ
ಜೋ ಜೋ ಸ್ವಾಮಿ ಲಿಂಗಾನಂದರಿಗೆ
ಜೋ ಜೋ ಮಹಾಜಗದ್ಗುರುವಿಗೆ
ಹೀಂಗಾ ತೂಗಿರಿ ಪ್ರವಚನ ಪಿತಾಮಹರಿಗೆ ॥ ಜೋ ॥

ಬಿಜಾಪುರ ಜಿಲ್ಲೆ ಮನಗೂಳಿ ಗ್ರಾಮದಲಿ
ಮಲ್ಲಪ್ಪ ಕಲ್ಲಮ್ಮ ಭಕ್ತರ ಹೊಟ್ಟೆಯಲಿ
ಗಣೇಶ ಚತುರ್ಥಿ ಶುಭದಿನದಂದು, ಹೀಂಗಾ
ವೀರ ಗಣಾಚಾರಿ ಹುಟ್ಟಿ ಬಂದರಂದು ॥ಜೋ॥

ಬಾಲ್ಯದಲ್ಲಿ ಬಿದಿಗೆಯ ಶಶಿಯಂತೆ ಬೆಳೆದು
ಶಾಲೆಯಲಿ ವಿದ್ಯಾಬುದ್ಧಿಗಳ ತಿಳಿದು
ಬಿ.ಎ. ತತ್ತ್ವಜ್ಞಾನ ಪದವಿಯ ಪಡೆದು,
ಹೀಂಗಾ ಬಸವ ಧರ್ಮಕ್ಕಾಗಿ ಜೀವನ ಮುಡುಪಿಟ್ಟು ॥ಜೋ॥

ಮರ್ತ್ಯಲೋಕದ ಮನೆ ಹಾಳುಬಿದ್ದಿತ್ತು
ಅಜ್ಞಾನಾಂಧಕಾರ ಜಗದೊಳಗ್ ತುಂಬಿತ್ತು
ಬಸವ ತತ್ತ್ವವು ನಂದಿ ಎತ್ತಾಗುಳಿದಿತ್ತು, ಹೀಂಗಾ
ಲಿಂಗಾಯತ ಧರ್ಮ ಮರೆತೆ ಹೋಗಿತ್ತು ॥ಜೋ॥

ಶ್ರೀಗುರು ಬಸವೇಶನ ಕರುಣೆ ಪಡೆದು
ಬಸವ ತತ್ತ್ವವೆ ಜೀವದುಸಿರೆಂದು ತಿಳಿದು
ಚರಜಂಗಮ ತಾನಾಗಿ ಕಾವಿಯ ಧರಿಸಿ, ಹೀಂಗಾ
ದಿವ್ಯ ಜ್ಯೋತಿಯಾಗಿ ಎಡಬಿಡದೆ ಚರಿಸಿ ॥ಜೋ॥

ಧರ್ಮದಿಂದ ಜನ ದೂರ ಸರಿದಾಗ
ಲಿಂಗಾನಂದ ಸ್ವಾಮಿ ಮನದೊಳಗೆ ಮರುಗಿ
ಧರ್ಮ ವೈದ್ಯರಾಗಿ ಪಾದಯಾತ್ರೆ ಗೈದು ಹೀಂಗಾ
ಧರ್ಮ ಪ್ರಚಾರ ಕೈಕೊಂಡರಾಗ ॥ಜೋ॥

ಇಪ್ಪತ್ತೈದು ವರುಷದ ವೀರ ವೀರಾಗಿ
ಪೂಜ್ಯ ಲಿಂಗಾನಂದ ಪರಮ ಶಿವಯೋಗಿ
ನಾಡಿನ ತುಂಬೆಲ್ಲ ಹಗಲಿರುಳು ತಿರುಗಿ
ಹೀಂಗಾ ಧರ್ಮ ಬೆಳೆಸಿದರು ಪ್ರವಚನ ಪಟುವಾಗಿ ॥ಜೋ॥

ಜ್ಯೋತಿ ಮುಟ್ಟಿ ಬತ್ತಿ ಜ್ಯೋತಿಯಾಗುವೋಲು
ಜಾತಿ ಸುಟ್ಟು ಭವಿಗಳ ಭಕ್ತರ ಮಾಡಿಹರು
ಎಲ್ಲ ಜಾತಿಯವರಿಗೆ ಲಿಂಗ ದೀಕ್ಷೆ ಕೊಟ್ಟಿಹರು
ಹೀಂಗಾ ಜಾತಿಭೇದಿಲ್ಲದೆ ಧರ್ಮ ನೀಡಿದರು

ಲೋಕದ ಇತರ ಧರ್ಮಗಳವರು

ಸ್ತ್ರೀಯರ್ಗೆ ಗುರುಸ್ಥಾನ ಕೊಡದೆ ಇಟ್ಟಿಹರು
ಲಿಂಗಾನಂದರು ನೋಡಿ ವ್ಯಥೆಯ ಪಟ್ಟಿಹರು
ಹೀಂಗಾ ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಮಾಡಿದರು ||ಜೋ||
ಮಾತೆ ಮಹಾದೇವಿಗೆ ದೀಕ್ಷೆ ಕೊಟ್ಟಿಹರು
ಜಂಗಮ ದೀಕ್ಷೆ ನೀಡಿ ಗುರುವ ಮಾಡಿದರು
ಧಾರವಾಡದಿ ಮಹಿಳಾ ಗುರುಪೀಠ ಮಾಡಿ
ಹೀಂಗಾ ಪ್ರಥಮ ಸ್ತ್ರೀ ಜಗದ್ಗುರುವ ಮಾಡಿದರು ||ಜೋ||
ರಾಷ್ಟ್ರೀಯ ಬಸವ ದಳ ಸ್ಥಾಪನೆ ಮಾಡಿಹರು
ರಾಷ್ಟ್ರದ ತುಂಬೆಲ್ಲ ಚಳುವಳಿ ನಡೆಸಿದರು
ದೇಶ ವಿದೇಶದಿ ಬಸವ ಧರ್ಮದ ಕೀರ್ತಿ
ಹೀಂಗಾ ಹರಡುವ ತೆರದೊಲು ಹಗಲಿರುಳು ಶ್ರಮಿಸಿ ||ಜೋ||
ಗುರು ಬಸವಣ್ಣನ ಐಕ್ಯ ಕ್ಷೇತ್ರದಲಿ
ಪವಿತ್ರ ಕೂಡಲ ಸಂಗಮದಲ್ಲಿ
ಬಸವ ಧರ್ಮಪೀಠ ಸ್ಥಾಪಿಸಿದರಿಲ್ಲಿ
ಹೀಂಗಾ ಶರಣ ಮೇಳ ನಡೆಸಿದರು ಸಂಕ್ರಾಂತಿಯಲ್ಲಿ ||ಜೋ||
ಹತ್ತೊಂಭತ್ತನೂರಾ ತೊಂಭತ್ತೈದರಲ್ಲಿ
ಮೂವತ್ತನೇ ತಾರೀಖ್ ಜೂನ್‌ತಿಂಗಳಲ್ಲಿ
ಹಿರಿಯೂರು ನಗರದಿ ಪ್ರವಚನ ಗೈಯುತ್ತ
ಹೀಂಗಾ ಲಿಂಗಾನಂದ ಗುರು ಬೆರೆತರ್ ಲಿಂಗದೊಳು ||ಜೋ||
ಬಾನುಲಿ ಪ್ರಸಾರವಾದ ತಕ್ಷಣವೇ
ದಿಗ್‌ಭ್ರಮೆಗೊಂಡಿತು ಭಕ್ತ ಸಮೂಹ
ಸಂಗಮಕೆ ಬಂದರು ಲಕ್ಷಾಂತರ ಮಂದಿ
ಹೀಂಗಾ ಬಂದು ಪಡೆದಿಹರು ಅಂತಿಮ ದರ್ಶನ ||ಜೋ||
ಜುಲೈ ತಿಂಗಳ ಎರಡನೆ ತಾರೀಖನಂದು
ಹಿರಿಯೂರಿನಿಂದ ಬಂದು ಪಾರ್ಥೀವ ದೇಹ
ಕೂಡಲ ಸಂಗಮ ಧರ್ಮಕ್ಷೇತ್ರದಲಿ
ಹೀಂಗಾ ಸಂಸ್ಕಾರ ನಡೆಯಿತು ವೈಭವದಿಂದ ||ಜೋ||
ಧರ್ಮಪಿತ ಬಸವಣ್ಣ ಕೊಟ್ಟರು ಧರ್ಮವ
ಹಳಕಟ್ಟಿ ಉಳಿಸಿದರು ವಚನ ಸಾಹಿತ್ಯವ
ಗುರು ಲಿಂಗಾನಂದರು ಮನೆ ಮನೆಗೆ ಬಿತ್ತಿದ
ತತ್ತ್ವ ಬೆಳೆಸೆಂದ ವೀರಶೆಟ್ಟಿ ಶಿಶುವು
||ಜೋ||

ರಚನೆ - ವೀರಶೆಟ್ಟಿ ಇಮಡಾಪುರ

ಕಲ್ಯಾಣ ರಾಜ್ಯ ಸ್ಥಾಪನೆ

-ಮಾತಾಜಿ

ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು ? ಅಸಾಧ್ಯವಯ್ಯ
ಆಸೆ ಆಮಿಷವನು ಅಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು
ನಾನೆಂಬುದ ಹರಿದವಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು
ಚನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ
ಕಲ್ಯಾಣವ ಕಂಡು ನಮೋ ನಮೋ ಎನುತಿದ್ದೆನು.

ವೀರ ವಿರಾಗಿಣಿ ಅಕ್ಕಮಹಾದೇವಿ ಓರ್ವ ಶ್ರೇಷ್ಠ ಅನುಭಾವಿ ; ಕನ್ನಡದ ಕಮನೀಯ ಕಾವ್ಯದ ವನದಲ್ಲಿ ಕವಿಕೋಗಿಲೆಯಾಗಿ ಹಾಡಿ, ಧರ್ಮದ ಗಿರಿಯಲ್ಲಿ ಶಿವಮಯೂರವಾಗಿ ನರ್ತಿಸಿ, ಪಾರಮಾರ್ಥ ಸರೋವರದಲ್ಲಿ ಅನುಭಾವದ ಅರಸಂಚೆಯಾಗಿ ವಿಹರಿಸಿದ ಶಿವಯೋಗಿಣಿ. ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ಚೆಲುವ ಚನ್ನಮಲ್ಲಿಕಾರ್ಜುನಂಗೊಲಿದು ಅಕ್ಕಮಹಾದೇವಿ ಸೀಮಿತ ಬಂಧನವನ್ನು ಹರಿದೊಗೆದು, ತಾಯಿ ತಂದೆಗಳ ಪ್ರೇಮ-ಮಮತೆಗಳ ವಲಯವನ್ನೂ ದಾಟಿ ಶರಣರ ಸತ್ಸಂಗವನ್ನು ಬಯಸಿ ಕಲ್ಯಾಣಕ್ಕೆ ಧಾವಿಸುತ್ತಾಳೆ. ಆ ಹೊತ್ತಿಗಾಗಲೇ ಕಲ್ಯಾಣವೇ ಪ್ರಣತಿಯಾಗಿ, ಭಕ್ತಿರಸವೇ ತೈಲವಾಗಿ ಸದಾಚಾರವೇ ಬತ್ತಿಯಾಗಿ ಬಸವಣ್ಣನೆಂಬ ಜ್ಯೋತಿ ಮುಟ್ಟಿ ದೈವೀ ಪ್ರಕಾಶ ಸುತ್ತೆಲ್ಲ ಹಬ್ಬಿ ಹಸರಿಸಿರುತ್ತದೆ. ಆ ಪ್ರಕಾಶದಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯ ಭೂಭಾಗದವರೆಗಿನಿಂದೆಲ್ಲ ಸಾಧಕರು, ಸಿದ್ಧರು, ಮುಮುಕ್ಷುಗಳು ಬಂದು ಸಮಾವೇಶವಾಗಿದ್ದಾರೆ.

ಕಲ್ಯಾಣ ನಗರವನ್ನು ಕಂಡು ಅಕ್ಕಮಹಾದೇವಿ ಉತ್ಸಾಹಚೇತನಳಾಗಿ ವರ್ಣನೆ ಮಾಡುತ್ತಲಿದ್ದಾಳೆ. ಇಲ್ಲಿ 'ಕಲ್ಯಾಣ' ಎಂಬ ಕಲ್ಪನೆ ಕೇವಲ ಒಂದು ನಗರಕ್ಕೆ ಸಂಬಂಧಿಸಿಲ್ಲ. ಒಂದು ಸಿದ್ಧಾಂತವನ್ನೇ ಪ್ರತಿಪಾದಿಸುತ್ತದೆ.

1. ಕಲ್ಯಾಣವೆಂದರೆ ದೈವೀರಾಜ್ಯ (Kingdom of God) ಇದು ಪುರಾಣಗಳಲ್ಲಿ ಬರುವ ಸ್ವರ್ಗವಲ್ಲ. ಶೈವ ಕಲ್ಪನೆಯ ಕೈಲಾಸವಲ್ಲ, ವೈಷ್ಣವ ಕಲ್ಪನೆಯ ವೈಕುಂಠವಲ್ಲ. ವ್ಯಕ್ತಿಯು ತನ್ನ ಅಂತರಂಗದಲ್ಲೇ ಕಟ್ಟಬಹುದಾದ ದೈವೀರಾಜ್ಯ. ಇಂಥವರ ಸಂಖ್ಯೆ ದೊಡ್ಡದಾದಾಗ ತನ್ನ ಸುತ್ತಲಿನ ಪರಿಸರದಲ್ಲೂ ಕಟ್ಟಬಹುದಾದ ಆದರ್ಶ ಸಮಾಜ. ಬಸವಣ್ಣನವರು ಕಟ್ಟಿದ ಅನುಭವ ಮಂಟಪವೂ ಒಂದು ಕಲ್ಯಾಣರಾಜ್ಯವೆ ! ಅವರು ನೀಡಿದ, ಜಾತಿ ವರ್ಣ ವರ್ಗರಹಿತ ಸಮತಾವಾದಿ ಸಮಾಜದ ಕಲ್ಪನೆ ಆ ಕಲ್ಯಾಣರಾಜ್ಯದ ರೂಪುರೇಷೆ ನೀಡುತ್ತದೆ. ಹೀಗಾಗಿ ಭಕ್ತ , ಶರಣನೇ ಈ ಕಲ್ಯಾಣರಾಜ್ಯದ ಪ್ರಜೆ, ಇಂತಹ ಪ್ರಜೆಯ ಲಕ್ಷಣಗಳೇನು ?

ಆಸೆ ಆಮಿಷವನಳಿದಿರಬೇಕು, ಒಳಹೊರಗು ಶುದ್ಧವಾಗಿರಬೇಕು. ನಾನೆಂಬುದ ಹರಿದಿರಬೇಕು; ಉಭಯಲಜ್ಜೆ ಅಳಿದಿರಬೇಕು.

ತನ್ನಲ್ಲಿ ಹುಟ್ಟುವುದು ಆಸೆ, ಹೊರಗಿನಿಂದ ಬಂದು ಪ್ರಚೋದಿಸುವುದು ಆಮಿಷ. ಈ ಎರಡನ್ನೂ ಶರಣನು ಅಳಿದುಕೊಂಡಿರಬೇಕು. ರೋಗಾಣುಗಳು ಸುತ್ತಲೂ ಹಬ್ಬಿರುವವು. ಅವನ್ನು ನಿರೋಧಿಸುವ ಶಕ್ತಿ ಶರೀರದಲ್ಲಿದ್ದಾಗ ಆ ರೋಗಾಣುಗಳೇ ಶಕ್ತಿಹೀನವಾಗುವವಷ್ಟೆ. ಅದೇ ರೀತಿ ಶರಣನ

ಮನ-ಬುದ್ಧಿಗಳು ಅಂತಹ ಶಕ್ತಿಯನ್ನು ಮೈಗೂಡಿಸಿಕೊಳ್ಳುವುದರಿಂದ ಆಸೆ-ಆಮಿಷಗಳು ನೆಲೆಯೂರಲು ಸಾಧ್ಯವಾಗುವುದೇ ಇಲ್ಲ.

ಕಲ್ಯಾಣರಾಜ್ಯದ ಪ್ರಜೆಯಾದ ಶರಣನ ಇನ್ನೊಂದು ಲಕ್ಷಣವೆಂದರೆ ಅವನ ಒಳಹೊರಗು, ಆಂತರಿಕ ವಿಚಾರ ಬಹಿರಂಗದ ಆಚರಣೆಗಳು ಒಂದೆಯಾಗಿರಬೇಕು. ತನುವಿನಲ್ಲಿ ಒಂದಿಟ್ಟು ಮನದಲ್ಲಿ ಇನ್ನೊಂದನ್ನು ಇಟ್ಟುಕೊಳ್ಳುವುದು ಸರಿಯಲ್ಲ. ಈ ಪ್ರಜೆಯು ನಾನು ಎಂಬುದನ್ನು ಹರಿದಿರಬೇಕು. ದೇವನಿಗೆ ಮತ್ತು ಸಮಾಜಕ್ಕೆ ಶರಣಾಗಬೇಕು. ಕಲ್ಯಾಣ ರಾಜ್ಯ Egocentric ಅಂದರೆ ಅಹಂ ಪ್ರಧಾನ, ವ್ಯಕ್ತಿಪ್ರಧಾನ ವ್ಯವಸ್ಥೆಯಲ್ಲ. ಇದು Theocentric ಅಂದರೆ ದೇವಪ್ರಧಾನ, ತನ್ಮೂಲಕ ಸಮಷ್ಟಿ ಪ್ರಧಾನ ಸಮಾಜ ವ್ಯವಸ್ಥೆ. ಹೀಗಾಗಿ ವ್ಯಕ್ತಿಯು ತನ್ನ ಹಿತಕ್ಕಾಗಿ ಸಮಷ್ಟಿಯನ್ನು, ಸಮುದಾಯದ ಹಿತಚಿಂತನೆಯನ್ನು ಬಲಿಕೊಡುವಂತಿಲ್ಲ. ಅದರ ಹಿತಕ್ಕಾಗಿ ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು, ಅರ್ಪಿಸಿಕೊಳ್ಳಬೇಕು. ಈ ಅರ್ಪಣೆ ಸ್ವಯಂಪ್ರೇರಿತವಾದುದೇ ವಿನಾ ಒತ್ತಾಯದಿಂದ ಹೇರಲ್ಪಟ್ಟುದಲ್ಲ.

ಕಲ್ಯಾಣ ರಾಜ್ಯದ ಪ್ರಜೆಯಲ್ಲಿ ಹೆಣ್ಣು-ಗಂಡೆಂಬ ಭೇದಭಾವ, ಒಬ್ಬರು ಇನ್ನೊಬ್ಬರನ್ನು ಹತ್ತಿಕ್ಕಬೇಕೆಂಬ ಹವ್ಯಾಸವಿಲ್ಲ. ಪರಮಾತ್ಮನ ಸೃಷ್ಟಿಯ ಎರಡು ಕಣ್ಣುಗಳಂತೆ ಅವರಿಗೆ ಸಮಾನ ಸ್ಥಾನ, ಮಾನ. ಹೀಗಾಗಿ ಇಲ್ಲಿ ಗುಣಪ್ರಧಾನ ವ್ಯವಸ್ಥೆ ; ಪುರುಷ ತನ್ನ ಅಹಂ ಅನ್ನು ಅಳಿದುಕೊಂಡು ಸ್ತ್ರೀ ತನ್ನ ಕೀಳರಿಮೆಯ ಕ್ಲೈಬ್ಯವನ್ನು ಕಳೆದುಕೊಂಡು ಬಾಳಬೇಕು ಈ ರೀತಿಯ ಆದರ್ಶ ವ್ಯವಸ್ಥೆಯನ್ನು ಪರಿಸರದಲ್ಲಿ ನಿರ್ಮಾಣ ಮಾಡುವುದೇ ಕಲ್ಯಾಣರಾಜ್ಯ ಸ್ಥಾಪನೆ. ಕಲ್ಯಾಣರಾಜ್ಯ ಎಂಬ ಆದರ್ಶ ಪರಿಕಲ್ಪನೆ (Concept) ಯನ್ನು ಪ್ರಯೋಗಕ್ಕೆ ತಂದಾಗ ಒಂದು ಆದರ್ಶ ಸಮಾಜ, ಜಾತಿವರ್ಣವರ್ಗರಹಿತ ಧರ್ಮಸಹಿತ ಶರಣ ಸಮಾಜ ನಿರ್ಮಾಣವಾಗುತ್ತದೆ. ಅದುವೇ ಬಸವ ಸಿದ್ಧಾಂತದ ಪರಮಧ್ಯೇಯ.

ವಚನ ಪ್ರಸಾದ

-ಮಾತೆ ಕಸ್ತೂರಿದೇವಿ

ಒಪ್ಪವ ನುಡಿವಿರಯ್ಯ ತುಪ್ಪವ ತೊಡೆದಂತೆ
ಶರಣ ತನ್ನ ಮೆರೆವನೆ ಬಿನ್ನಾಣಿಯಂತೆ
ಲಿಂಗದೇವನ ಪ್ರಸಾದದಿಂದ ಬದುಕುವನಲ್ಲದೆ ತನ್ನ ಮೆರೆವನೆ ?

- ಬ.ವ.ದೀ. 772

ಲಿಂಗಾಯತ ಧರ್ಮದಲ್ಲಿಯೆ ಹುಟ್ಟಿ ಬೆಳೆದಿರುವ, ಅಷ್ಟೆ ಅಲ್ಲ ಲಿಂಗಾಯತ ಧರ್ಮಮಂದಿರಗಳಲ್ಲಿಯೂ, ಇತರ ಸಂಘ ಸಂಸ್ಥೆಗಳಲ್ಲಿಯೂ ಅವಿಶ್ರಾಂತವಾಗಿ ದುಡಿಯುತ್ತಿರುವ, "ಯುವ ಸೇವಾ ಚೇತನ"ರೆಂದೆ ಪ್ರಖ್ಯಾತರಾದ, ಗೌರವಾನ್ವಿತ, ಸುಶಿಕ್ಷಿತ ಆತ್ಮೀಯರಾದ ವೃದ್ಧ ತರುಣರೊಬ್ಬರು ನಮ್ಮಲ್ಲಿಗೆ ಬಂದಿದ್ದರು. ಎಂದಿನಂತೆ ಬಂದ ಶರಣರಿಗೆ ಪ್ರಸಾದ (ಊಟ) ಎಡೆ ಮಾಡಲಾಯಿತು. ಪ್ರಸಾದ ಸ್ವೀಕರಿಸುವ ಮೊದಲು ಜಗತ್ಕರ್ತ ಪರಮಾತ್ಮನ ಮತ್ತು ಬದುಕುವ ಬಗೆಯನ್ನು ಕಲಿಸಿರುವ ಧರ್ಮಪಿತರ ಸ್ಮರಣೆ ಮಾಡಬೇಕಷ್ಟೆ, ಅಂತೆಯೇ ಅವರು ಮಾಡಿದರು. ಏನೆಂದು ಗೊತ್ತೆ ?! "ಅನ್ನದಾತೋ ಸುಖಿನೋ ಭವಂತು" ಎಂದು. ಇದರಿಂದ ಚಕಿತಳಾದ ನಾನು ಕೇಳಿದೆ. "ಅಪ್ಪನವರೇ, ಈ ಶಾಸ್ತ್ರವಾಕ್ಯಕ್ಕಿಂತಲೂ ಪವಿತ್ರವಾದ ವಚನಗಳೆಂಬ ಮಂತ್ರಗಳು ನಮ್ಮ ಬಳಿ ಇವೆಯಲ್ಲ. ಅವನ್ನು ಪಠಿಸಿರಿ" ಇದಕ್ಕೆ ಅವರಿಂದ ಬಂದ ಉತ್ತರ "ಅದನ್ನು ಪವಿತ್ರವೆಂದೂ, ನಮ್ಮದೆಂದೇ ತಿಳಿದುಕೊಂಡರಾಯಿತು." ಎನ್ನುತ್ತಾ ನಿರ್ಲಿಪ್ತತೆಯಿಂದ ಪ್ರಸಾದ ಸ್ವೀಕರಿಸಲು ತೊಡಗಿದರು.

.... ಸುಸ್ತಾದ ಅನುಭವವಾಗುತ್ತಿದೆ !! ವಿಶ್ರಾಂತಿ ಪಡೆದ ನಂತರ ಮತ್ತೆ ಬರೆಯುತ್ತೇನೆ !

ಓ ಅಜ್ಞಾನವೇ, ನೀನು ಅದೆಷ್ಟು ಕ್ರೂರಿ ಮತ್ತು ಹೇಡಿ ! ಎಂತೆಂಥವರನ್ನೋ ನುಂಗಿ ನೀರು ಕುಡಿಯುವೆ. ಮಿಥ್ಯವಾದಿಗಳನ್ನು ಬಚ್ಚಿಟ್ಟುಕೊಳ್ಳುವೆ. ಸತ್ಯಕ್ಕೆ ಹೆದರುವವರಿಗೆ ಆಶ್ರಯಕೊಡುವೆ. ಸತ್ಯವಾದಿಗಳನ್ನು ಕಂಡರೆ ಓಡಿ ಹೋಗುವೆ.

ಲಿಂಗಾಯತ ಜನರ ಧರ್ಮ ಸಂಪತ್ತಾದ ವಚನ ಸಾಹಿತ್ಯದ ತುಂಬಾ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಕಾಯಕ, ದಾಸೋಹಗಳೆಂಬ ತತ್ತ್ವಗಳೆಗೆಲ್ಲ ಒಂದು ವ್ಯವಸ್ಥಿತ ರೂಪುರೇಷೆಗಳನ್ನು ಕೊಟ್ಟು ಅರಿತು ಆಚರಿಸಲು ಸುಲಭವಾಗುವಂತೆ ಸಾಧಿಸಿ, ಕಲಿಸಿ, ಬೋಧಿಸಿದವರು ಧರ್ಮಪಿತ ಬಸವಣ್ಣನವರೆಂದು ಸಾರಿ ಸಾರಿ ಹೇಳಲಾಗಿದೆ. ಆದರೆ ಇಂದಿನ ಲಿಂಗವಂತರ ಆಚಾರ-ವಿಚಾರ, ನಡೆ-ನುಡಿಗಳನ್ನು ನೋಡಿದಾಗ "ಇವರೇನು ಬಸವ ಮೂಲಿಗರೋ ಅಥವಾ ಅನ್ಯ ಪರಂಪರೆಯವರೋ" ಎಂಬ ಸಂದೇಹ ಕಾಡದೆ ಇರದು. ಏಕೆಂದರೆ ಎದೆ ಮೇಲೆ (?) ಇಷ್ಟಲಿಂಗ ಕಟ್ಟಿಕೊಂಡಿರುವ ಈ ಜನ ಪಠಿಸುವುದು ವೇದ, ಶಾಸ್ತ್ರ ಆಗಮ ಪುರಾಣಗಳನ್ನು, ಪೂಜಿಸುವುದು ಲಿಂಗದೇವನ ಮಹಾಮನೆಯ ತೊತ್ತುಗಳಂತಿರುವ ಅನ್ಯದೈವಂಗಳನ್ನು, ಅನುಸರಿಸುವುದು ಬೀದಿಯ ಕಾಕು-ಪೋಕು ಸಾಧು ಸಂತರನ್ನು.

ತಮ್ಮ ಧರ್ಮದ ಶಿಷ್ಟಾಚಾರಗಳನ್ನು ಪಾಲಿಸದ ಈ ಜನರಿಗೆ ಸಾಮಾಜಿಕ ಭದ್ರತೆಗಾಗಿ ಇಷ್ಟಲಿಂಗ ಬೇಕು, ವೇದಿಕೆಯ ಮೇಲೆ ಮಾತಾಡಲು ವಚನ ಸಾಹಿತ್ಯ ಬೇಕು, ಕೀರ್ತಿಗಾಗಿ ಬಸವಣ್ಣ ಬೇಕು. ಇಂಥವರು ಧರ್ಮಪಿತರನ್ನು ಫೆವಿಕಾಲ್ ಮಾಡಿಕೊಂಡು ತಮ್ಮ ವ್ಯಕ್ತಿತ್ವಕ್ಕೆ ಲಗತ್ತಿಸಿಕೊಂಡಿದ್ದಾರೆಯೇ ವಿನಾ ಅವರ ತತ್ತ್ವಗಳನ್ನಲ್ಲ ಎಂಬುದು ಗಮನಾರ್ಹ. ಇಂಥವರ ಪರಿಶ್ರಮ ಹೇಗಿದೆ ಎಂದರೆ "ಮನೆಯಲ್ಲಿ ಬೆಣ್ಣೆ

ಇಟ್ಟುಕೊಂಡು ತುಪ್ಪಕ್ಕಾಗಿ ಊರೆಲ್ಲ ಅಲೆದಂತೆ. ಹಸುವಿನ ಕೆಚ್ಚಲಿನಲ್ಲಿರುವ ಉಣ್ಣೆ ಹಾಲನ್ನು ಬಿಟ್ಟು ರಕ್ತ ಹೀರಿದಂತೆ'' ಕೊನೆಗೆ ಇವರಿಗೆ ಸಿಗುವುದು ಏನು ? ಕಲಬೆರಕೆಯಾದ ಅಶುದ್ಧ ತುಪ್ಪ. ಇದರಿಂದ ಮೂಢನಂಬಿಕೆ, ಅಜ್ಞಾನವೆಂಬ ಕಾಯಿಲೆಗಳಿಗೆ ನಾಂದಿ ಹಾಡುವುದು. ಇದು ಅವರ ತಪ್ಪಲ್ಲ. ಹಲವಾರು ದಶಕಗಳಿಂದ ಈ ಸಮಾಜವನ್ನು ಮುನ್ನಡೆಸಿಕೊಂಡು ಬಂದಿರುವ ಮಠಾಧೀಶರು ಅಶುದ್ಧ ತುಪ್ಪವನ್ನೇ ಶುದ್ಧತುಪ್ಪವೆಂದು ಭ್ರಮಿಸಿ ತಾವು ತಿನ್ನುತ್ತಾ, ತಮ್ಮನ್ನು ನಂಬಿದ ಭಕ್ತವರ್ಗಕ್ಕೂ ತಿನ್ನಿಸುತ್ತಾ ಬಂದಿದ್ದು ಅಷ್ಟೆ ಅಲ್ಲ, ಅವರ ನಾಲಗೆಯನ್ನು ಅಶುದ್ಧ ತುಪ್ಪದ ಕೆಟ್ಟರುಚಿಗೆ ಮತ್ತು ಮೂಗನ್ನು ಕಮಟು ವಾಸನೆಗೆ ಹೊಂದಿಸಿದ್ದು. ಇಂಥವರಿಗೆ ಶುದ್ಧವಾದ ತುಪ್ಪ ಕೊಟ್ಟರೂ ಸರಿಬರದು. ಇದರಿಂದ ವ್ಯಷ್ಟಿ-ಸಮಷ್ಟಿಯ ಆರೋಗ್ಯಕ್ಕೆ ಧಕ್ಕೆ ಬಂದಿದ್ದರೂ ಅದೇನು ಅವರಿಗೆ ಮಹತ್ವದ ಸಂಗತಿಯಲ್ಲ. ಶುದ್ಧವಾದ, ಪರಿಮಳಯುಕ್ತ ತುಪ್ಪವನ್ನು ಹಿಂದೆಂದೂ ತಿನ್ನದಿರುವ ಈ ಜನ ''ಯಾವುದು ಸಿಗುತ್ತೊ ಅದನ್ನೆ ತುಪ್ಪ ; ತಿಂದಿದ್ದೆ ಭಾಗ್ಯ'' ಎಂದು ಕೇಳುತ್ತಾರೆ. ಅಯ್ಯೋ ಪಾಪ !, ಇವರಿಗೆ ನಿಜತುಪ್ಪದ ಸವಿಯನ್ನು ತಿಳಿಸಿ ಹೇಳುವುದು ಹೇಗೆ ? ಬಸವಣ್ಣನವರ ಮಹಿಮೆ ಮತ್ತು ವಚನಗಳ ಶ್ರೇಷ್ಠತೆಯನ್ನು ಮನವರಿಕೆ ಮಾಡಿಕೊಡುವುದು ಹೇಗೆ ?

''ಅನ್ನದಾತೋ ಸುಖಿನೋ ಭವಂತು'' ಹೀಗೆಂದರೇನು ? ''ನನಗೆ ಅನ್ನ ಕೊಟ್ಟವನು ಸುಖವಾಗಿರಲಿ'' ಎಂಬ ಶುಭಕಾಮನೆ ಈ ಮಾತುಗಳಲ್ಲಿ ವ್ಯಕ್ತವಾಗುತ್ತಿವೆ. ಸಚ್ಚಿದಾನಂದ ಸ್ವರೂಪವೇ ತಾನಾದ ಪರಮಾತ್ಮನಿಗಂತೂ ಈ ಮಾತುಗಳು ಅನ್ವಯಿಸುವುದಿಲ್ಲ. ಹಾಗಾದರೆ ಯಾರಿಗೆ ? ರೈತನಿಗೋ, ವ್ಯಾಪಾರಿಗೋ ? ಅಡುಗೆ ಮಾಡಿದವರಿಗೋ ? ನೀಡಿದವರಿಗೋ ? ಈ ಮಾತುಗಳನ್ನು ನಾವು ಹೇಗೆ ಅರ್ಥೈಸಿದರೂ ವಚನ ಜ್ಞಾನದ ಪ್ರಕಾರ ಮೂರ್ಖರಾಗುತ್ತೇವೆ. ಏಕೆಂದರೆ ಮೂಗು ಕೊಟ್ಟವನನ್ನು ಬಿಟ್ಟು ಮೂಗುತಿ ಕೊಟ್ಟವನನ್ನು ಹೊಗಳಿದರೆ ?

ಈಗ ಈ ಮಾತುಗಳನ್ನು ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ಹೇಳುತ್ತಾರೆ ಎಂಬುದನ್ನು ಪ್ರಾತ್ಯಕ್ಷಿಕವಾಗಿ ನೋಡೋಣ. ನಿಮಗೆ ಜೀವನದಲ್ಲಿ ಏನಾದರೂ ಕಷ್ಟ, ಆತಂಕ ಬಂದಿದೆ ಎಂದುಕೊಳ್ಳೋಣ. ಆಗ ನೀವು ಏನು ಮಾಡುತ್ತೀರಿ ? ಒಬ್ಬ ಶಾಸ್ತ್ರಿ ಅಥವಾ ಮಂತ್ರವಾದಿ ಬಳಿಗೆ ಓಡಿಹೋಗಿ ಪರಿಹಾರ ಕೇಳುತ್ತೀರಿ. ನಿಮ್ಮಂಥವರಿಗಾಗಿಯೇ ಕಾಯುತ್ತಿರುವ ಅವನು ಕಷ್ಟದ ನಿವಾರಣೆಗಾಗಿ ನವಗ್ರಹ ಶಾಂತಿ ಮಾಡಬೇಕೆಂದು, ನವಧಾನ್ಯಗಳನ್ನು ತನಗೆ ದಕ್ಷಿಣೆಯೊಂದಿಗೆ ದಾನ ಮಾಡಬೇಕೆಂದು ಸೂಚಿಸುತ್ತಾನೆ. ನೀವು ಅಷ್ಟೆ, ಹೇಗಾದರೂ ಬಂದಿರುವ ತೊಂದರೆ ದೂರವಾದರೆ ಸಾಕು ಎಂದು ಒಪ್ಪಿಕೊಂಡು ಆ ಶಾಸ್ತ್ರಿಯಿಂದಲೇ ನವಗ್ರಹ ಶಾಂತಿ ಮಾಡಿ, ನವಧಾನ್ಯಗಳನ್ನು ದಾನ ಮಾಡುತ್ತೀರಿ. ಅಂದರೆ ನಿಮಗೆ ಕೈಎತ್ತಿ ದಾನ ಮಾಡುವ ಶ್ರಮ ಕೊಡಬಾರದೆಂದು ಸಾಲಾಗಿ ಜೋಡಿಸಿರುವ ನವಧಾನ್ಯಗಳನ್ನು ತಾನೇ ಗಂಟುಕಟ್ಟಿಕೊಂಡು, ಹೆಗಲಿಗೇರಿಸಿ ಹೊರಡುವಾಗ ''ಅನ್ನದಾತೋ ಸುಖಿನೋ ಭವಂತು'' ಎಂದು ನಿಮಗೆ ಹರಸುತ್ತಾನೆ.

ಹಾಗೆ ಹರಸುವಾಗ ಮನಸ್ಸಿನಲ್ಲಿ ''ಇವರಿಗೆ ಕಷ್ಟಗಳು ಬರುತ್ತಿರಲಿ, ನಿವಾರಣೆಗಾಗಿ ನನ್ನ ಬಳಿ ಧಾವಿಸುತ್ತಿರಲಿ. ನವಗ್ರಹ ಶಾಂತಿ, ಹೋಮ, ಹವನ ಮಾಡಿಸುತ್ತಿರಲಿ. ನನಗೆ ನವಧಾನ್ಯ ದಕ್ಷಿಣೆ ಸಿಗುತ್ತಿರಲಿ. ಇದರಿಂದ ನನ್ನ ಮಕ್ಕಳು ಮರಿ ಸುಖವಾಗಿರಲಿ.'' ಎಂದು ಹಂಬಲಿಸುತ್ತಾನೆ.

ಶರಣ ಬಂಧುಗಳೇ, ಇಂಥ ಮಂತ್ರಗಳು ನಿಮಗೆ ಬೇಕೆ ? ನನಗಂತೂ ಬೇಡ. ಏಕೆಂದರೆ ಬಸವ ಪರಂಪರೆಯ ಶರಣರಾದ ಜೇಡರ ದಾಸಿಮಯ್ಯನವರು ಹೇಳುತ್ತಿದ್ದಾರೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಸೂಸುವ ಗಾಳಿ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ

ಕುನ್ನಿಗಳನೇನೆಂಬೆ, ರಾಮನಾಥ

ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ
ಸುತ್ತಿ ಇರುವ ಸಾಗರವೆಲ್ಲ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳಾ ? ರಾಮನಾಥ ? -(ವ.ಸಂ. 7)

ಕಾಯ ನಿಮ್ಮ ದಾನ ಜೀವ ನಿಮ್ಮ ದಾನ
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳಾ ? ರಾಮನಾಥ ?

ಎಲ್ಲಕ್ಕೂ ಮೂಲ ಕಾರಣಕರ್ತನಾದ ಮಹಾದಾನಿಯನ್ನು ಸ್ಮರಿಸುವುದನ್ನು ಇಲ್ಲಿ ಕಲಿಸಿಕೊಡುತ್ತಿದ್ದಾರೆ. ಹೀಗಿರುವಾಗ ಅಜ್ಞಾನಿ ಲಿಂಗಾಯತರಿಗೆ ಜೇಡರ ದಾಸಿಮಯ್ಯನವರ ಕೈಯಲ್ಲಿ ''ಕುನ್ನಿಗಳು, ನಾಯಿಗಳು'' ಎಂದು ಕರೆಸಿಕೊಳ್ಳಲು ಅದೆಷ್ಟು ಇಷ್ಟ !

ಓ! ಅಲ್ಲಿ ನೋಡಿ, ಬಸವ ಧರ್ಮ ಪೀಠಾಧ್ಯಕ್ಷರು ಧರ್ಮ ಬಂಧುಗಳಿಗೆ ವಚನ ಪ್ರಸಾದ ಹಂಚುತ್ತಿದ್ದಾರೆ. ಬನ್ನಿ ನಾವು ತೆಗೆದುಕೊಳ್ಳೋಣ. ಪರುಷ ಮುಖದಿಂದ ಸ್ಫುರಿಸುತ್ತಿರುವ ವಚನಾಮೃತವನ್ನು ಸ್ವೀಕರಿಸಲು ಈ ಜನ ಏಕೆ ಇಷ್ಟು ಹೆದರುತ್ತಿದ್ದಾರೆ ? ಓಹೋ ! ಮುಂಬಾಗಿಲಿಂದ ಬರಲು ಧೈರ್ಯವಿಲ್ಲದೆ ಹಿಂಬಾಗಿಲಿಂದ ಕದ್ದು ನುಗ್ಗುವ ರಾಹು-ಕೇತುಗಳೆಂಬ ಹೊಸ ಹೊಸ ಮುಖವಾಡ ಹೊದ್ದಿರುವ ಪುರೋಹಿತಶಾಹಿಯ ಭಯವೆ ? ಹೆದರಬೇಡಿ ಶರಣರೆ, ಪೂಜ್ಯರು ಕೊಟ್ಟಿರುವ ಹರಿತವಾದ ಬಸವ ಖಡ್ಗ ನನ್ನ ಬಳಿ ಇದೆ. ಅದನ್ನು ಹಿಡಿದು ನಾನು ಹಿಂಬಾಗಿಲ ಬಳಿ ಕಾವಲು ನಿಲ್ಲುತ್ತೇನೆ. ಇನ್ನು ನೀವು ಧೈರ್ಯವಾಗಿ-ನಿಶ್ಚಿಂತೆಯಿಂದ ಪ್ರವಚನವನ್ನು ಆಲಿಸಿರಿ.

ಅರೆ, ಇದೇನು ಕೇವಲ ಆಯ್ದ ಜನರು ಮಾತ್ರ ಪ್ರವಚನಕ್ಕೆ ಬರುತ್ತಿದ್ದಾರೆ. ಉಳಿದವರು ಎಲ್ಲಿ? ಅದೇನು, ಅಷ್ಟು ದೂರದಲ್ಲಿ ಜನಜಂಗುಳಿ ನೂಕುನುಗ್ಗಲು. ಕಾರಣ ಅಲ್ಲಿ ಬೇರೊಬ್ಬ ಸ್ವಾಮಿಗಳು ಎಲ್ಲರಿಗೂ ನಾಲಿಗೆ ಚಪಲ ಕೆರಳಿಸುವ, ಕ್ಷಣಿಕ ತೃಪ್ತಿ ನೀಡುವ, ದೈಹಿಕ, ಮಾನಸಿಕ, ಸಾಮಾಜಿಕ ಅನಾರೋಗ್ಯವನ್ನು ರಕ್ಷಿಸುವ, ನಶ್ವರವಾದ ಅಶನ ಪ್ರಸಾದವನ್ನು ಹಂಚುತ್ತಿದ್ದಾರೆ. ಅದು ಸರಿ. ಅದೇನು ಒಬ್ಬರ ಕೈಯಿಂದ ಒಬ್ಬರು ಕಿತ್ತುಕೊಳ್ಳುತ್ತಿದ್ದಾರೆ. ಇಂಥ ಪ್ರಸಾದದಿಂದ ಪುಣ್ಯಪ್ರಾಪ್ತಿಯಂತೆ. ಅದಕ್ಕೆ ಹಾಗೆ ಮಾಡುತ್ತಿದ್ದಾರೆ. ಹೀಗೆ ಮುಂದುವರಿದರೆ ಈ ಸಮಾಜವನ್ನು ಮೇಲೆತ್ತುವವರು ಯಾರು ? ಹೇಗೆ ?

ಬನ್ನಿ ಶರಣರೆ, ಪೂಜ್ಯ ಮಾತಾಜಿಯವರು ಲಿಂಗಾಯತರಿಗೆ ಬಸವ ಸಂಸ್ಕಾರಗಳನ್ನು ಕಲಿಸುತ್ತಿದ್ದಾರಂತೆ. ನೋಡೋಣ. ಯಾರಿಗೂ ನಮ್ಮಿಂದ ಕಸಿಯಲು ಆಗದ, ಆಪತ್ಕಾಲದಲ್ಲಿ ಬಂಧುವಿನಂತೆ, ಜ್ಞಾನಮಾರ್ಗದಲ್ಲಿ ಗುರುವಿನಂತೆ, ನಮ್ಮನ್ನು ಕಾಯುವ, ರಕ್ಷಿಸುವ, ದೈಹಿಕ, ಮಾನಸಿಕ, ಸಾಮಾಜಿಕ ಆರೋಗ್ಯವನ್ನು ಕಾಪಾಡುವ ವಚನ ಪ್ರಸಾದವನ್ನು ಪೂಜ್ಯರಿಂದ ಪಡೆಯೋಣ. ಸಂಜೆ ಏಳುಗಂಟೆಯ ''ನೆನಹು'' ಎಂಬ ನಿತ್ಯಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರು ಈ ರೀತಿ ಪ್ರಾರ್ಥನೆ ಮಾಡುವುದನ್ನು ಕಲಿಸುತ್ತಿದ್ದಾರೆ. ನಾವು ಅವರೊಂದಿಗೆ ದನಿಗೂಡಿಸೋಣ.

ಅಂದಿನ ಅನ್ನವ ನೀಡುವ ನೀನು
ಬಂಧನ ಹರಿಸುವ ಭವಹರ ಭಾನು
ಬಾಳಲಿ ನಡೆಯಲು ಆತ್ಮಬಲವ
ನೀಡುವ ಮಂಗಲ ಶಕ್ತಿಯು ನೀನು.....

ಆತ್ಮೀಯ ಧರ್ಮಬಂಧುಗಳೇ ಮತ್ತು ಶರಣ ಪುಂಗವರೇ, ತಮಗೆಲ್ಲ ಬಸವ ಸ್ಮರಣಪೂರ್ವಕ

ಶುಭಹಾರೈಕೆಗಳು. ಇಂದು ಲಿಂಗಾಯತ ಧರ್ಮದಲ್ಲಿ ಪ್ರಸಾದವನ್ನು ಹೇಗೆ ಸ್ವೀಕರಿಸಬೇಕು ಎಂಬ ವಿಷಯವಾಗಿ ಪ್ರವಚನವನ್ನು ಕೇಳಿಸುವೆ. ಜಗತ್ತಿನ ಎಲ್ಲ ಧರ್ಮಗಳಿದ್ದಂತೆ, ಈ ಧರ್ಮದಲ್ಲಿಯೂ ನಾವು ಊಟ ಮಾಡುವ ಮೊದಲು ಸಕಲಕ್ಕೂ ಕಾರಣಕರ್ತನಾದ ಪರಮಾತ್ಮನಿಗೆ ಮತ್ತು ಜನಪದರು ಹಾಡುವಂತೆ ಉಣಲು ಕಲಿಸಿದ ಬಸವಣ್ಣನವರಿಗೆ ಕೃತಜ್ಞತೆ ಅರ್ಪಿಸಬೇಕು. ಪ್ರಾಣಿ ಪಕ್ಷಿಗಳಂತೆ ಶಿಷ್ಟಾಚಾರವಿಲ್ಲದೆ ಪ್ರಸಾದ ಸ್ವೀಕರಿಸುವುದು ಶರಣ ಸಂಸ್ಕೃತಿಯವರಿಗೆ ನಿಷಿದ್ಧ. ಆದ್ದರಿಂದ ತಾವು ಇನ್ನು ಮುಂದೆ ದೇವರ ಮತ್ತು ಗುರುವಿನ ಸ್ಮರಣೆಯೊಂದಿಗೆ ಪ್ರಸಾದ ಸ್ವೀಕರಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ಏಕೆಂದರೆ ಧರ್ಮಪಿತರು ಆದೇಶಿಸಿದ್ದಾರೆ.

ಮೌನದಲುಂಬುದು ಆಚಾರವಲ್ಲ
ಲಿಂಗಾರ್ಪಿತ ಮಾಡಿದ ಬಳಿಕ
ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು.
ಕರಣವೃತ್ತಿಗಳಡಗುವುವು ಲಿಂಗದೇವನ ನೆನೆವುತ್ತ ಉಂಡಡೆ. -ಬ.ವ.ದೀ 782

ಪ್ರಸಾದ ಸ್ವೀಕರಿಸುವಾಗ ವಚನಗಳನ್ನು ಹೇಳಬೇಕೆಂದು ಲಿಂಗಾಯತರಲ್ಲಿ ನಿಯಮವಿದೆ. ಈ ಸಂದರ್ಭದಲ್ಲಿ, ಸೂಕ್ತವಾದ ಪ್ರಸಾದ ಸ್ವೀಕಾರಕ್ಕೆ ಮೊದಲು ಪಠಿಸಬೇಕಾದ 2 ವಚನಗಳು ಹೀಗಿವೆ.

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವು ಅಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥಗಳು
ಇದಿರಲಿರ್ಪವು ಲಿಂಗದೇವಾ. -ಬ.ವ.ದೀ.64

ಮತ್ತೊಂದು ಅಲ್ಲಮಪ್ರಭುದೇವರ ವಚನವನ್ನು ಪಠಿಸಬೇಕು.

ಆಯಿತ್ತು ಬಸವಾ, ನಿನ್ನಿಂದ ಗುರು ಸ್ವಾಯತವೆನಗೆ
ಆಯಿತ್ತು ಬಸವಾ, ನಿನ್ನಿಂದ ಲಿಂಗ ಸ್ವಾಯತವೆನಗೆ
ಆಯಿತ್ತು ಬಸವಾ, ನಿನ್ನಿಂದ ಜಂಗಮ ಸ್ವಾಯತವೆನಗೆ
ಆಯಿತ್ತು ಬಸವಾ, ನಿನ್ನಿಂದ ಪ್ರಸಾದ ಸ್ವಾಯತವೆನಗೆ
ಇಂತೀ ಚತುರ್ವಿಧ ಸ್ವಾಯತವನು ನೀನೆ ಮಾಡಿದೆಯಾಗಿ
ನಮ್ಮ ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲಾ ಸಂಗನ ಬಸವಣ್ಣಾ.

ದೇವನನ್ನು ಧರ್ಮಗುರುವನ್ನು ಕೊಂಡಾಡಿದ ಮೇಲೆ ಇಷ್ಟಲಿಂಗಕ್ಕೆ ನೈವೇದ್ಯ ಮಾಡಬೇಕು.

ಅಂದಂದಿನಾಹಾರ ತಂದೆಯಂದದಿ ನೀಡಿ
ಎಂದೆಂದು ಎಮ್ಮಗಳ ಸಲಹುತ್ತಲಿರುವ
ಇಂಬೀವ ಜಗದೊಡೆಯ ನಿನ್ನನಾನರ್ಪಿಸುವೆ
ಎಂಬ ಶರಣಾಗತಿಯಿಂದ ನೈವೇದ್ಯವಿಡುವೆ ॥

ಲಿಂಗಾಯತ ಧರ್ಮದಲ್ಲಿ ಊಟಕ್ಕೆ ಊಟ ಎನ್ನುವುದಿಲ್ಲ. ಪ್ರಸಾದ ಎಂದು ಕರೆಯುತ್ತೇವೆ. ಏಕೆಂದರೆ ಬಸವ ತತ್ತ್ವದ ಪ್ರಕಾರ ದೇವನಿಗೆ ಅರ್ಪಿಸಿದ್ದು ನೈವೇದ್ಯ. ಆ ನೈವೇದ್ಯದಲ್ಲಿ ದೇವಾನುಗ್ರಹ ಹರಿದು ಬಂದಾಗಲದು ಪ್ರಸಾದ ಎನಿಸಿಕೊಳ್ಳುತ್ತದೆ. ಅನ್ನ+ಅನುಗ್ರಹ=ಪ್ರಸಾದ. ಇಂಥ ಪ್ರಸಾದ ಸ್ವೀಕರಿಸಿದವನ ತನು ಶುದ್ಧ, ಮನ ಶುದ್ಧ, ಭಾವ ಶುದ್ಧವಾಗುವುದು.

ಬಾಯಿ ರುಚಿಗೆ ಅತಿಯಾಗಿ ತಿಂದು ಬೊಜ್ಜು ಬರಿಸಿಕೊಳ್ಳುವುದು, ಅಥವ ಸರಿಯಾದ ಆಹಾರ ಕೊಡದೆ ಶರೀರವನ್ನು ಸೊರಗಿಸುವುದು ಈ ಎರಡನ್ನು ಶರಣರು ಮನ್ನಿಸುವುದಿಲ್ಲ. ಲಿಂಗದೇವನ ಒಲಿಸಲು

ಬಂದಿರುವ ಪ್ರಸಾದ ಕಾಯವನ್ನು ಕೆಡಿಸಬಾರದೆಂದು ಬೋಧಿಸುತ್ತಾ ಹಿತಬುಕ್, ಮಿತಬುಕ್, ಋತುಬುಕ್ ಸಾಧಿಸಬೇಕೆನ್ನುತ್ತಾರೆ. ಕೊನೆಯಲ್ಲಿ ಗುರುಲಿಂಗಜಂಗಮದ ಪ್ರಸಾದದಿಂದ ಭವವನ್ನು ಕಳೆದುಕೊಂಡು ಮುಕ್ತನಾದೆನೆಂದು ಹೇಳಿದ ಷಣ್ಮುಖಸ್ವಾಮಿಗಳ ವಚನವನ್ನು ಹಾಡಿ ಮಂಗಲಗೈಯುವೆ.

ಗುರು ಪ್ರಸಾದವ ಕೊಂಡು ಎನ್ನ ತನು ಶುದ್ಧಪ್ರಸಾದವಾಯಿತ್ತು
ಲಿಂಗ ಪ್ರಸಾದವ ಕೊಂಡು ಎನ್ನ ಮನ ಸಿದ್ಧ ಪ್ರಸಾದವಾಯಿತ್ತು.
ಜಂಗಮ ಪ್ರಸಾದವ ಕೊಂಡು ಎನ್ನ ಪ್ರಾಣವು ಪ್ರಸಿದ್ಧ ಪ್ರಸಾದವಾಯಿತ್ತು.
ಇಂತೀ ತ್ರಿವಿಧ ಪ್ರಸಾದವ ಕೊಂಡು ಎನ್ನ ಭವನಾಸ್ತಿಯಾಯಿತ್ತಾಗಿ
ಅಖಂಡೇಶ್ವರಾ ಇನ್ನೆನಗೆ ಅದಾವ ಭಯವಿಲ್ಲವಯ್ಯ.

॥ ಜೈ ಗುರು ಬಸವೇಶ ಹರ ಹರ ಮಹಾದೇವ ॥

-ಮಾತೆ ಕಸ್ತೂರಿದೇವಿ

ಶರಣ. ಭೀಮಣ್ಣ ಖಂಡ್ರೆಯವರಿಗೊಂದು ಕಿವಿಮಾತು

-ಎನ್. ಪುಟ್ಟರುದ್ರ

ಶರಣರಾದ ಚಿ.ಮೂ ಮತ್ತು ಜಿ.ಎಸ್.ಎಸ್.ರವರನ್ನು ಧರ್ಮದಿಂದ ಬಹಿಷ್ಕರಿಸುವ ನಿರ್ಧಾರವನ್ನು ಅಖಿಲ ಭಾರತ ವೀರಶೈವ ಮಹಾಸಭಾವು ತೆಗೆದುಕೊಂಡಿರುವುದಾಗಿ ಶರಣ ವಿಶ್ವನಾಥರೆಡ್ಡಿ ಮುದ್ನಾಳರು ಪತ್ರಿಕಾ (ಪ್ರಜಾವಾಣಿ 11-12-2000 ಪುಟ 3) ಹೇಳಿಕೆ ನೀಡಿ ಮಹಾಸಭಾದ ಘನತೆಯನ್ನು ತಾವೇ ಹೀನಾಯಿಸಿಕೊಂಡಿದ್ದಾರೆ. ಅತಿ ಹೆಚ್ಚೆಂದರೆ ಅವರನ್ನು ಮಹಾಸಭಾದ ಸದಸ್ಯತ್ವದಿಂದ (ಅದೂ ಅವರು ಸದಸ್ಯರಾಗಿದ್ದರೆ ! ಅಲ್ಲದೆ ಅವರಿಗೆ ಸಮಜಾಯಿಷಿ ಕೊಡಲು ಕಾಲಾವಕಾಶವಿತ್ತು) ತೆಗೆಯಬಹುದೇ ವಿನಾ ಧರ್ಮದಿಂದ ಬಹಿಷ್ಕರಿಸಲು ಮಹಾಸಭೆಗೆ ಅಧಿಕಾರ ಕೊಟ್ಟವರಾರು ? ಹೀಗಿರುವಾಗ ಮಾನಸಿಕ ಅಸ್ವಸ್ಥತೆಯಿಂದ ನರಳುತ್ತಿರುವವರಾರೆಂಬುದನ್ನು ಮಾನ್ಯ ಓದುಗರೇ ಊಹಿಸಿಕೊಳ್ಳಬಹುದು.

ಎರಡನೆಯದಾಗಿ, ಪ್ರಸ್ತುತ ಜನಗಣತಿಯ ಬಗ್ಗೆ ಪೂಜ್ಯ ಮಾತೆ ಮಹಾದೇವಿಯವರಲ್ಲಿ ತಾತ್ತ್ವಿಕವಾಗಿ ಚಿಂತನೆಮಾಡಲು ಸಾಧ್ಯವಿಲ್ಲವೆಂಬುದನ್ನು ಚೆನ್ನಾಗಿ ಅರಿತುಕೊಂಡಿರುವ, ನುರಿತ ರಾಜಕಾರಣಿ ಹಾಗೂ ಹುಟ್ಟನಿಂದ ಲಿಂಗಾಯತರಾಗಿರುವ ಶರಣ ಖಂಡ್ರೆಯವರು ಮಾತಾಜಿಯವರ ಬಗ್ಗೆ ಅಸಂಬದ್ಧ ಹೇಳಿಕೆ ನೀಡಿರುವುದು ವಿಪರ್ಯಾಸ ಹಾಗೂ ಜಾರಿಕೆಯ ಪ್ರತೀಕವಾಗಿದೆ. ಮಾನ್ಯ ಖಂಡ್ರೆಯವರು ತಾತ್ತ್ವಿಕ ನೆಲೆಗಟ್ಟಿಲ್ಲದ ಹಾಗೂ ಇವರನ್ನು ಕಂಡರೆ ಇವರಂತೆ, ಅವರನ್ನು ಕಂಡರೆ ಅವರಂತೆ ಹಾಡಿ-ಹೊಗಳಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಹೌದಪ್ಪ-ಸಮಯ ಸಾಧಕರನ್ನು ಮತ್ತು ತಮ್ಮ ವೈಯಕ್ತಿಕ ಪ್ರತಿಷ್ಠೆಯನ್ನು ಬದಿಗಿರಿಸಿ, ಸಮಾಜದ ಏಳಿಗೆಗೆ ಆದ್ಯತೆ ನೀಡಿ ಪ್ರಾಮಾಣಿಕವಾಗಿ ಒಬ್ಬರೊಡನೊಬ್ಬರು ಚಿಂತಿಸಿ, ಒಂದು ಖಚಿತ ನಿಲುವನ್ನು ತಳೆದು, ಸಮಾಜದ ಜನಸಾಮಾನ್ಯರಲ್ಲಾಗಿರುವ ಗೊಂದಲವನ್ನು ನಿವಾರಿಸಿದರೆ ಮಹಾಸಭೆಯು ಮಹದುಪಕಾರ ಮಾಡಿದಂತಾಗುತ್ತದೆ. ಇದರಿಂದ ಸಮಾಜದ ಮುಂದಿನ ಪೀಳಿಗೆಯ ಬಹುಮುಖ ಏಳಿಗೆಗೆ ಸಹಾಯವಾಗುತ್ತದೆ. ಅಲ್ಲದೆ ಶರಣ ಖಂಡ್ರೆಯವರ ಟೊಪ್ಪಿಗೆಯನ್ನು ಯಶಸ್ಸಿನ ಒಂದು ಗರಿಯು ಅಲಂಕರಿಸಿದಂತಾಗುತ್ತದೆ.

ಈಗಲೂ ಕಾಲ ಮಿಂಚಿಲ್ಲ ! ಮಿಂಚಿಲ್ಲ ! ತ್ವರಿತವಾಗಿ ಕಾರ್ಯೋನ್ಮುಖರಾಗಿರಿ ! ಇದೇ ಆಗಿದೆ ಸಮಾಜದ ಜನಸಾಮಾನ್ಯನ ಕಳಕಳಿ - ಮಹಾಸಭೆಯ ಪ್ರಮುಖ ಪದಾಧಿಕಾರಿಗಳಲ್ಲಿ.


ಎನ್. ಪುಟ್ಟರುದ್ರ, ಅಧ್ಯಕ್ಷರು ಲಿಂಗಾಯತ ಧರ್ಮ ಮಹಾಸಭಾ



14ನೇ ಶರಣ ಮೇಳದಲ್ಲಿ ಶರಣ ಸಮುದಾಯ




ಪೆಂಡಾಲ್ ತುಂಬಿ ತುಳುಕುವ ಶರಣ ಸಮೂಹ



ದಿ. 11-1-2001ರಂದು ಚಿಂತನಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಡಿ.ಪಿ.ಪ್ರಕಾಶ್




ಉದ್ಘಾಟನಾ ಭಾಷಣ ಮಾಡುತ್ತಿರುವ ಡಿ.ಪಿ.ಪ್ರಕಾಶ್ ಎಡದಿಂದ ಬಲಕ್ಕೆ ಬಿ.ಜಿ.ಹೊಸಗೌಡರು, ವೀರಣ್ಣ ಕೊರ್ಲಹಳ್ಳಿ, ಜೈರಾಜ್ ವಕೀಲರು, ಸುಜಯಾದೇವಿ, ಪೂಜ್ಯ ಶ್ರೀ ಗಂಗಾ ಮಾತಾಜಿ, ಪೂಜ್ಯ ಶ್ರೀ ಮಾತಾಜಿ, ಪೂಜ್ಯ ಶ್ರೀ ಮಂಗಳಾದೇವಿ




ದಿ. 12-1-2001ರಂದು ಚಿಂತನಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಪ್ರಮೀಳಾ ನೇಸರ್ಗಿ
ಇನ್ನಿತರ ಗಣ್ಯರು ಶಂಕರಣ್ಣ ಮುನವಳ್ಳಿ, ಗಂಗಣ್ಣ ಬತ್ತಿ



ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನ ಉದ್ಘಾಟಿಸುತ್ತಿರುವ ಆಂಧ್ರಪ್ರದೇಶ್
ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಸುಭಾಷ್ ಪಾಟೀಲ್




ದಿ. 13-1-2001 ಶರಣ ಮೇಳ ಉದ್ಘಾಟಿಸುತ್ತಿರುವ ಬಾಬಾಗೌಡ ಪಾಟೀಲ್, ವಿಧಾನ ಪರಿಷತ್
ಸಭಾಧ್ಯಕ್ಷರಾದ ಡೆವಿಡ್ ಸಿಮೆಯೋನ್, ಜಿಲ್ಲಾಧಿಕಾರಿ ಡಾ|| ಬಾಬೂರಾವ್ ಮುಡಬಿ




ಬಾಬಾಗೌಡರ ಕೋರಿಕೆ ಮೇರೆಗೆ ದೀಪೋಜ್ವಲನ ಮಾಡುತ್ತಿರುವ
ಸ್ವೀಡನ್ನಿನ ಶ್ರೀಮತಿ ಮೇರಿಥೆರೇಸಾ ಚಾರ್ಪೆಂಟಿಯರ್




ದೀಪೋಜ್ವಲನ ಮಾಡುತ್ತಿರುವ ವಿಧಾನ ಪರಿಷತ್ ಸಭಾಧ್ಯಕ್ಷ ಡೇವಿಡ್ ಸಿಮೇಯೋನ್




2001ನೇ ಇಸವಿಯ ಕ್ಯಾಲೆಂಡರ್ ಬಿಡುಗಡೆ ಮಾಡುತ್ತಿರುವ
ಬಾಗಲಕೋಟೆ ಜಿಲ್ಲಾಧಿಕಾರಿ ಡಾ॥ ಬಾಬೂರಾವ್ ಮುಡಬಿ, ಬಾಗಲಕೋಟೆ



ಪೀಠಾರೋಹಣ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡುತ್ತಿರುವ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಎಡದಿಂದ ಬಲಕ್ಕೆ : ಡಿ.ಪಿ.ಪ್ರಕಾಶ್
ಪ್ರಮೀಳಾ ನೇಸರ್ಗಿ, ಪೂಜ್ಯ ಬಸವಕುಮಾರ ಸ್ವಾಮಿಗಳು




ಬಸವ ಧರ್ಮ ಪೀಠಕ್ಕೆ ಉತ್ತರಾಧಿಕಾರಿಯಾಗಿ ಆಯ್ಕೆಯಾದ ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಗೆ ಕರ್ನಾಟಕ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ವೀರಣ್ಣ ಕೊರ್ಲ್ಹಳ್ಳಿ, ಆಂಧ್ರಪ್ರದೇಶ್ ಅಧ್ಯಕ್ಷ ಸುಭಾಷ್ ಪಾಟೀಲ್, ಮಹಾರಾಷ್ಟ್ರ ಅಧ್ಯಕ್ಷೆ ಮಾಲೂತಾಯಿ, ಬೀದರ ಅಧ್ಯಕ್ಷೆ ಚಂದ್ರಮ್ಮ ಪಾಟೀಲರಿಂದ ಗೌರವಾರ್ಪಣೆ




ಹಿಂದುಗಳಿಗೆ ಓಂ, ಕ್ರೈಸ್ತರಿಗೆ ಶಿಲುಬೆ ಇದ್ದಂತೆ ಲಿಂಗಾಯತ ಧರ್ಮದ ಗಣಲಾಂಛನ ಷಟ್‌ಕೋನ ಮಧ್ಯೆ ಇಷ್ಟಲಿಂಗ ಸಹಿತ ಬಸವ ಲಿಂಗ ಮುದ್ರೆ ಎಂದು ಪೂಜ್ಯ ಮಾತಾಜಿ ಘೋಷಿಸುತ್ತಿದ್ದಾರೆ.




ಪೂಜ್ಯ ಶ್ರೀ ಮಾತಾಜಿಯವರು ಪೀಠಾರೋಹಣ ಮಾಡುವ ಮೊದಲು ಪೀಠದ ಮೇಲೆ ಬಸವ-ಲಿಂಗ ಮುದ್ರೆಯ ಗಣಲಾಂಛನವನ್ನಿಟ್ಟು ಅದಕ್ಕೆ ಪಟ್ಟಗಟ್ಟಲಾಯಿತು.




ಸಮುದಾಯ ಪ್ರಾರ್ಥನೆಗೆ ಮೊದಲು ಧ್ವಜಾರೋಹಣ




ಬಸವ ಧರ್ಮ ಪೀಠದ ಶರಣ ಲೋಕವನ್ನು ಪ್ರವೇಶಿಸಲು ಇರುವ ವೀರಗಣಾಚಾರಿ ಮಡಿವಾಳ ಮಾಚಿದೇವ ಮಹಾದ್ವಾರ ಉದ್ಘಾಟನೆ.



ಬಸವ ಧರ್ಮ ಸಂಸ್ಥಾಪನಾ ದಿನ (14-1-2001) ಗಣಲಿಂಗ ದರ್ಶನ




ಸುಮಂಗಲಿ ಸೇವಾಶ್ರಮದ ಮಕ್ಕಳಿಂದ ಸಮುದಾಯ ಪ್ರಾರ್ಥನೆಗೆ ಮೊದಲು
ವಾದ್ಯ ಸಹಿತ ಪಥ ಸಂಚಲನ



ಬಸವ ಧರ್ಮ ಸಂಸ್ಥಾಪನಾ ದಿನದಂದು ಸಮುದಾಯ ಪ್ರಾರ್ಥನೆ ಉದ್ಘಾಟಿಸುತ್ತಿರುವ
ಪೂಜ್ಯ ಮಾತಾಜಿಯವರು, ಷಡುಗಣಾಧೀಶರು, ಗಣನಾಯಕ-ನಾಯಕಿಯರು



ವಚನ ಪಠಣ ಮಾಡುತ್ತಿರುವ ಷಡುಗಣಾಧೀಶರು



ಸಮುದಾಯ ಪ್ರಾರ್ಥನಾ ನಂತರ ಸಮುದಾಯ ಕೋಣೆ ಕಟ್ಟಸಲು ಒಂದು ಲಕ್ಷ ರೂ. ವಾಗ್ದಾನ ಮಾಡಿದ ಮೈಸೂರಿನ ಶರಣ. ಎಂ. ನಾಗರಾಜು ಅವರಿಗೆ ಆಶೀರ್ವಾದ.



ಬಸವೇಶ್ವರ ಐಕ್ಯ ಮಂಟಪದ ಸಂದರ್ಶನಕ್ಕೆ ಹೊರಟಿರುವ ಪೂಜ್ಯ ಶ್ರೀ ಗಂಗಾ ಮಾತಾಜಿ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳು, ಗಣನಾಯಕ-ನಾಯಕಿಯರು



ಭಾಷಣ ಆಲಿಸುತ್ತಿರುವ ಜನ ಸಮೂಹ



ಧ್ವಜಾರೋಹಣದಲ್ಲಿ ಎದ್ದು ನಿಂತು ಭಾಗಿಯಾಗಿರುವ ಶರಣ ವೃಂದ



ವೆಬ್ ಸೈಟ್ ಪ್ರಾರಂಭ

ವಿಶ್ವಗುರು ಬಸವಣ್ಣನವರನ್ನು ಕುರಿತು ಪರಿಚಯ ಮಾಡಿಕೊಡಲು, ಲಿಂಗಾಯತ ಧರ್ಮದ ವಿವರ ನೀಡಲು 2 ವೆಬ್ ಸೈಟನ್ನು 14ನೆಯ ಶರಣ ಮೇಳದ ಸಮಯದಲ್ಲಿ ಆರಂಭಿಸಲಾಗಿದ್ದು ಅದರ ವಿವರ ಹೀಗಿದೆ.

1. www.Lingayathism.Com
2. www.Basavamission.Org

E-mail : viswakalyana@lingayathism.com

|| ಓಂ ಶ್ರೀ ಗುರುಸಿದ್ಧಲಿಂಗ ಪ್ರಸನ್ನ ||



ಅವಾಚ್ಯಾತ್ಮ ಸ್ವರೂಪಾಯ ಶಿವಭಾವ ಪ್ರದಾಯಿನೇ ।
ನಮಸ್ಸದ್ಗುರುನಾಥಾಯ ಷಟ್ಸ್ಥಲ ಬ್ರಹ್ಮಮೂರ್ತಯೇ ॥

ಶ್ರೀ ವಿಜಯ ದಶಮಿ ಮಹೋತ್ಸವಾಹ್ವಾನ ಪತ್ರಿಕಾ

ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ.

ಸ್ವಸ್ತಿಶ್ರೀ ಶಾಲಿವಾಹನ ಶಕ 1922 ನೇ ವಿಕ್ರಮ ಸಂವತ್ಸರ ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿವರೆಗೆ ನಡೆಯಲಿರುವ ಶರನ್ನವರಾತ್ರಿಯ ವಿಶೇಷ ಪೂಜೆಗಳ ವಿವರ.

ಪ್ರತಿದಿನ ಪ್ರಾತಃಕಾಲ 5 ಘಂಟೆಯಿಂದ 10 ಘಂಟೆಯವರೆಗೆ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ ಮತ್ತು ಸಂಜೆ 7 ಘಂಟೆಗೆ ಲಘುನ್ಯಾಸ ಪೂರ್ವಕ ರುದ್ರಾಭಿಷೇಕ ಮತ್ತು ರಾಜೋಪಚಾರಾದಿ ಸೇವೆಗಳು ನಡೆಯುವಂತೆ ಏರ್ಪಡಿಸಲಾಗಿದೆ.

04–10–2000 ಸಪ್ತಮಿ	ಬುಧವಾರ	ಸರಸ್ವತಿ ಪೂಜಾ ಸಾಯಂಕಾಲ 4 ಘಂಟೆಗೆ ಪ್ರಾಂಶುಪಾಲರು ಮತ್ತು ಮುಖ್ಯೋಪಾಧ್ಯಾಯರುಗಳ ಸಮ್ಮೇಳನ
05–10–2000 ಅಷ್ಟಮಿ	ಗುರುವಾರ	ದುರ್ಗಾಷ್ಟಮಿ ನಿಮಿತ್ತ ವಿಶೇಷಪೂಜೆ
07–10–2000 ನವಮಿ	ಶನಿವಾರ	ಆಯುಧ ಪೂಜಾ
08–10–2000 ದಶಮಿ	ಭಾನುವಾರ	ವಿಜಯ ದಶಮಿ

ಈ ಸಂಬಂಧವಾಗಿ ಸಾಯಂಕಾಲ 5 ಘಂಟೆಯಿಂದ
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಉತ್ಸವ ಮತ್ತು ಶಮೀಪೂಜಾ ಸಮಾರಂಭ
ಈ ಪ್ರಕಾರ ಸೇವೆಗಳು ನಡೆಯುತ್ತವೆ.

ಸರ್ವರೂ ಸಕಾಲಕ್ಕೆ ಸೇವಾಕಾರ್ಯಗಳಲ್ಲಿ ಭಾಗವಹಿಸಿ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಶ್ರೀ ಶ್ರೀ ಶಿವಕುಮಾರಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ.

ಸಿದ್ಧಗಂಗಾ ಮಠದಿಂದ ಮುದ್ರಣಗೊಂಡ ಒಂದು ಕರಪತ್ರ

- ಮಾತಾಜಿ

ವೀರಪ್ಪನ್‌ಗೆ ಕ್ಷಮಾದಾನ

14ನೆಯ ಶರಣ ಮೇಳದ ಸಮಾರೋಪ ಸಮಾರಂಭ ದಿ. 15-1-2001ರಂದು. ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನವೂ ಇತ್ತು. ನಾನೊಂದು ವಿಷಯವನ್ನು ಚರ್ಚೆಗೆ ಮಂಡಿಸಿದೆ. ವೀರಪ್ಪನ್‌ಗೆ ಕ್ಷಮಾದಾನ ಉಚಿತವೇ ಎಂದು. ಆಗ ಒಬ್ಬರು ಹೇಳಿದರು, " ಉಪ್ಪು ತಿಂದವನು ನೀರು ಕುಡಿಯಲೇ ಬೇಕು. ತಪ್ಪಿತಸ್ಥನಾದ ವೀರಪ್ಪನ್ ಶಿಕ್ಷೆ ಅನುಭವಿಸಲೇಬೇಕು " ಎಂದು. ವಕೀಲ ಜಯರಾಜ್ ಅವರು ಕಾನೂನು ಬದ್ಧವಾಗಿ " ಇಂಥ ದೊಡ್ಡ ನರಹಂತಕ, ಆನೆ ಹಂತಕ, ಶ್ರೀಗಂಧ ಕಳ್ಳ ಸಾಗಾಣಿಕೆದಾರ, ದಂತ ಚೋರನಿಗೆ ಶಿಕ್ಷೆಯಾಗದೆ ಕ್ಷಮೆ ಸಿಕ್ಕರೆ ಅದು ತಪ್ಪು ಪರಿಪಾಠಕ್ಕೆ ಕಾರಣವಾಗುತ್ತದೆ. ಏನು ಬೇಕಾದರೂ ಮಾಡಿ, ಕ್ಷಮೆ ಪಡೆದು ಪಾರಾಗಬಹುದು ಎಂಬ ತಿಳುವಳಿಕೆ ಇನ್ನಷ್ಟು ಜನರ ತಪ್ಪುಗಳಿಗೆ ಕಾರಣವಾಗುತ್ತದೆ. "ಎಂದು ಮಂಡಿಸಿದರು. ಮತ್ತು ಕಾನೂನಿನಲ್ಲಿ ಅಂಥ ಕ್ಷಮೆಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಧಾರ್ಮಿಕ ಸಭೆಯಲ್ಲಿ ಈ ಚರ್ಚೆ ಏಕೆ ? ಎಂದು ಕೆಲವರು ಆಶ್ಚರ್ಯ ವ್ಯಕ್ತಪಡಿಸಿದರು. ಆಗ ನಾನು ಹೇಳಿದೆ :

" ವೀರಪ್ಪನ್ ಓರ್ವ ಸಾಮಾನ್ಯ ಕಳ್ಳನಾಗಿ ಉಳಿದಿಲ್ಲ. ರಾಷ್ಟ್ರೀಯ ಸಮಸ್ಯೆಯಾಗಿದ್ದಾನೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೆಲವೇ ಸಮಯದಲ್ಲಿ ಕೇರಳ ರಾಜ್ಯ ಸರ್ಕಾರ ಸಹ ಚಿಂತೆ ಮಾಡುವ ಸಮಸ್ಯೆ ಸೃಷ್ಟಿಸಿದ್ದಾನೆ ; ಅಂದಾಗ ರಾಷ್ಟ್ರದ ಪ್ರಜೆಗಳಾದ ನಾವು ಈ ಭಗ್ಗೆ ಏಕೆ ಚಿಂತನೆ ಮಾಡಬಾರದು? ಆತನೊಡನೆ ಎಲ್. ಟಿ. ಟಿ. ಇ. ಸಹ ಸೇರಿದರೆ ಅಂತರರಾಷ್ಟ್ರೀಯ ಸಮಸ್ಯೆಯೂ ಆಗುವನು "ಎಂದು. ಆಗ ಎಲ್ಲರೂ ಆಸಕ್ತರಾಗಿ ಚರ್ಚಿಸಿದರು.

ಬಹುಪಾಲು ಜನರು ಕ್ಷಮಾದಾನಕ್ಕೆ ಒತ್ತುಕೊಟ್ಟು ಮಾತನಾಡಿದರು, " ಕಾನೂನು ಕೇವಲ ಕಾನೂನಿಗಾಗಿ ಇರದು ; ಮಾನವನ ಹಿತಚಿಂತನೆಗಾಗಿ ಕಾನೂನು " ಎಂದು ಅನೇಕರು ನುಡಿದರು. ಸರ್ಕಾರಗಳು ವೀರಪ್ಪನ್‌ಗೆ ಕ್ಷಮಾದಾನ ನೀಡಬೇಕು. ಈ ಬಗ್ಗೆ ರಾಷ್ಟ್ರೀಯ ಬಸವ ದಳವು ಮುಖ್ಯ ಮಂತ್ರಿಗಳಿಗೆ ಒಂದು ಮನವಿ ಸಲ್ಲಿಸಬೇಕು ಎಂದೂ ನಿರ್ಣಯವಾಯಿತು. ವಾರ್ತಾ ಪತ್ರಿಕೆಗಳಲ್ಲೂ ಈ ನಿರ್ಣಯಗಳು ಪ್ರಕಟಗೊಂಡವು. ರಾಷ್ಟ್ರೀಯ ಬಸವ ದಳವು ಈ ರೀತಿ ನಿರ್ಣಯ ತೆಗೆದುಕೊಂಡುದು ನೋಡಿ ಅನೇಕರಿಗೆ ಅಚ್ಚರಿಯಾಯಿತಂತೆ. ನಮ್ಮ ಒಬ್ಬರು ಆತ್ಮೀಯರು ನನ್ನನ್ನು ಕೇಳಿದರು : " ಏಕೆ ಇಂಥ ವಿಷಯ ಚರ್ಚಿಸಲಾಯಿತು ? "

" ವೀರಪ್ಪನ್ ಇಂದು ಕೇವಲ ಓರ್ವ ಹಂತಕ, ಚೋರನಾಗಿ ಪೋಲೀಸ್ ಇಲಾಖೆಗೆ ಮಾತ್ರ ಸೀಮಿತನಾಗದೆ ಇಡೀ ರಾಷ್ಟ್ರದ ಸಮಸ್ಯೆ ಆಗಿದ್ದಾನೆ. ಅಂದಾಗ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಈ ಬಗ್ಗೆ ಚಿಂತಿಸಬೇಕಲ್ಲವೆ ? "

" ವೀರಪ್ಪನ ಜೊತೆಗೆ ಈಗ ಕನ್ನಡ ವಿರೋಧಿ ಸಮಸ್ಯೆ ಗಂಟು ಹಾಕಿಕೊಂಡಿದೆ. ವೀರಪ್ಪನ್‌ಗೆ ಕ್ಷಮಾದಾನ ಸಿಗಬೇಕು ಎನ್ನುವ ನೆಡುಮಾರನ್ ತಮಿಳು ತೀವ್ರವಾದಿ ; ಎಲ್.ಟಿ. ಟಿ. ಇ ಜೊತೆ ಸಂಬಂಧ ಇಟ್ಟುಕೊಂಡವರು. ರಾಜ್‌ಕುಮಾರ್ ವೀರಪ್ಪನ್‌ಗೆ ಕ್ಷಮಾದಾನ ಮಾಡಬೇಕು ಎಂದು ಪ್ರತಿಪಾದಿಸುತ್ತಲಿರುವುದರಿಂದ ಈಗ ಅವರೂ ಸ್ವಾರ್ಥಿ, ಕನ್ನಡ ವಿರೋಧಿ ಎಂಬ ಅಲೆ ಏಳುತ್ತಲಿದೆ. ಹೀಗಿರುವಾಗ ರಾಷ್ಟ್ರೀಯ ಬಸವ ದಳ ಇಂಥ ನಿಲುವನ್ನೇ ತೆಗೆದುಕೊಂಡರೆ ಇದು ಕನ್ನಡ ವಿರೋಧಿ ಸಂಘಟನೆ; ಎಂಬ ಅಪಪ್ರಚಾರ, ತಪ್ಪು ಕಲ್ಪನೆ ಆಗದೆ ? " ಎಂದು ಕೇಳಿದರು.

ನಾನು ಹೇಳಿದೆ : " ಇಲ್ಲ. ಏಕೆಂದರೆ ಯಾವುದಾದರೊಬ್ಬ ವ್ಯಕ್ತಿ ಅಥವಾ ಸಂಘಟನೆಯಲ್ಲಿ

ಇಂಥಾ ಚಟುವಟಿಕೆ ನಡೆಯುತ್ತವೆ ಎನ್ನುವ ಹಿನ್ನೆಲೆಯಿಂದ ಆ ಸಂಘಟನೆಯ ಆಳವನ್ನು ವಿಸ್ತಾರವನ್ನು ಅಳೆಯಲಾಗುವುದು. ನಮ್ಮ ಧರ್ಮ ಭಾಷೆ ಕನ್ನಡ. ನಾವು ಎಂದೂ ಕನ್ನಡ ವಿರೋಧಿಗಳಾಗಲು ಸಾಧ್ಯವಿಲ್ಲ. ಮಾತ್ರವಲ್ಲ ವಚನ ಸಾಹಿತ್ಯ ತಿಳಿಯಬೇಕಾದರೆ ಕನ್ನಡ ಕಲಿಯುವುದು ಅಗತ್ಯವೆಂದು ಒತ್ತಿ ಒತ್ತಿ ಹೇಳಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರದ ಬಸವ ಭಕ್ತರು ಸಹ ಕನ್ನಡ ಕಲಿಯಲು ಪ್ರೇರಣೆ ನೀಡಿದ್ದೇವೆ. ಆದ್ದರಿಂದ ಕನ್ನಡ ವಿರೋಧಿಗಳು ಎಂಬ ಭಾವ ಎಂದೆಂದೂ ನಮ್ಮನ್ನು ಕುರಿತು ಯಾರಲ್ಲೂ ಬರಲು ಸಾಧ್ಯವಿಲ್ಲವಷ್ಟೆ ?

ಇನ್ನು ಸ್ವಹಿತಾಸಕ್ತಿಯಂತೂ ಏನೂ ಇಲ್ಲ. ಏಕೆಂದರೆ ಡಾ|| ಶ್ರೀ ರಾಜ್‌ಕುಮಾರರ ಮಕ್ಕಳಂತೆ ವೀರಪ್ಪನ್ ಅನುಯಾಯಿಗಳೊಡನೆ ಗ್ರಾನೈಟ್ ವ್ಯವಹಾರ ಇಟ್ಟುಕೊಂಡವರಲ್ಲ."

" ಹಾಗಾದರೆ ಏಕೆ ಈ ವಿಷಯದಲ್ಲಿ ಆಸಕ್ತಿ. ? ".

" ಇದು ಬುದ್ಧನ ನಾಡು, ಬಸವ ಭೂಮಿ. ಅಂಗುಲಿಮಾಲನೆಂಬ ಕೊಲೆಗಡುಕನನ್ನು ಕ್ಷಮಿಸಿ ಬುದ್ಧನು ಭಿಕ್ಕುವನ್ನಾಗಿ ಮಾಡಿದ ದೇಶ, ಕೊಲೆಗಡುಕ ಭದ್ರನನ್ನು ಶರಣ ವೀರಭದ್ರನನ್ನಾಗಿ ಮಾಡಿದ ಬಸವ ಭೂಮಿ. ಒಡಿಸ್ಸಾದಿಂದ ಬಂದ ಸುಜ್ಞಾನಿದೇವ ಮಾತಂಗತಮ್ಮ ಎಂಬ, ದಾರಿಯಲ್ಲಿ ಬಂದವರ ತಲೆ ಒಡೆಯುತ್ತಿದ್ದ ಬೇಡನನ್ನು ಪರಿವರ್ತಿಸಿ ಕರೆತಂದಾಗ "ಬಾ ನನ್ನಯ್ಯ" ಎಂದು ಮಾತೃ ಹೃದಯಿ ಬಸವಣ್ಣನವರು ಕರೆದರು. ಅದೇ ಹೆಸರೇ ಶಾಶ್ವತವಾಯಿತು ಮತಂಗ ತಮ್ಮನಿಗೆ. ಭಾರತ ದೇಶದಲ್ಲಿ ಇಂಥ ಘಟನೆಗಳು ನೂರಾರು. ಸಂತ ವಿನೋಬಾಜಿ ಮುಂತಾದವರು ಅನೇಕ ಡಕಾಯಿತರನ್ನು ಪರಿವರ್ತಿಸಿದರು. ಅತ್ಯಂತ ಕ್ರೂರವಾಗಿ ವರ್ತಿಸಿದ ಪೂಲನ್‌ದೇವಿ ಇಂದು ನಾಗರಿಕ ಬದುಕನ್ನು ಬದುಕುತ್ತಿಲ್ಲವೆ ?

ವೀರಪ್ಪನ್ ಕ್ಷಮಾರ್ಹನೆ ?

ವೀರಪ್ಪನ್ ಕ್ಷಮಾರ್ಹ ವ್ಯಕ್ತಿಯೆ ? ಆತ ಮಾಡಿದ ಕುಕೃತ್ಯಗಳು ನೂರಾರಲ್ಲ ಸಹಸ್ರಾರು. ಶ್ರೀಗಂಧದ ಕಳ್ಳಸಾಗಾಣಿಕೆ, ಆನೆ ಹತ್ಯೆ, ದಂತ ಅಪಹರಣ, ಪೋಲೀಸ್ ಅಧಿಕಾರಿಗಳ ಕೊಲೆ, ಮುಗ್ಧರ ಅಪಹರಣ. ಇಂಥ ಸಹಸ್ರಾರು ಪ್ರಕರಣ. ಬಹುಶಃ ಆ ಅಪರಾಧಗಳನ್ನು ಪಟ್ಟಿ ಮಾಡಿದರೆ ಆತನಿಗೆ ಜೀವಾವಧಿ ಶಿಕ್ಷೆಯಲ್ಲ 1500 ವರ್ಷಗಳ ಶಿಕ್ಷೆ ವಿಧಿಸಿದರೂ ಕಮ್ಮಿಯೆ, ಇದೆಲ್ಲವೂ ಸತ್ಯ. ಬುದ್ಧಿ - ತಿಳುವಳಿಕೆ ಇರುವ ಯಾರಿಗೇ ಆದರೂ ತಿಳಿಯುವ ಸಂಗತಿ.

ಇನ್ನೊಂದು ಆಶ್ಚರ್ಯ ಸಂಗತಿ ಏನೆಂದರೆ ಸರ್ಕಾರವು 20ಲಕ್ಷ ಬಹುಮಾನ ಘೋಷಿಸಿದರೂ ಯಾರ್ಯಾರೂ ಆತನ ಸುಳಿವು ತಿಳಿಸಲು ಸಹ ಸಿದ್ಧರಿಲ್ಲ. ಭಾರತದ ಪರಿಸ್ಥಿತಿಯೇ ವಿಪರೀತ. ಹಣದ ಆಸೆಗಾಗಿ ಕಿತ್ತೂರು ಚನ್ನಮ್ಮನಿಗೆ ದ್ರೋಹ ಬಗೆದರು ಮಲ್ಲಪ್ಪಶೆಟ್ಟಿ, ವೆಂಕಟಪ್ಪ ನಾಯಕ, ವೀರ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟರು. 50000 ಬೆಳ್ಳಿ ನಾಣ್ಯಗಳ ಆಸೆಗಾಗಿ ತನಗೆ ಅನ್ನವಿತ್ತ ಗುರುಗೋವಿಂದ ಸಿಂಗರ ಇಬ್ಬರು ಮಕ್ಕಳನ್ನು ಅವರ ಮನೆಯಲ್ಲಿ ಅಡಿಗೆ ಮಾಡುತ್ತಿದ್ದ ಓರ್ವ ಭಟ್ಟ ಹಿಡಿದುಕೊಟ್ಟ. ಆದರೆ ಸರ್ಕಾರವು 20ಲಕ್ಷ ಕೊಡುತ್ತೇನೆಂದರೂ ಸುಳಿವು ಕೊಡುವವರು ಇಲ್ಲ. ಬಹುಶಃ ತಾವು ಪತ್ತೆ ಮಾಡಿ, ಹಿಡಿದು, ಆ ಭಕ್ಷೀಸನ್ನು ಪೋಲೀಸ್ ಅಧಿಕಾರಿಗಳೇ ಪಡೆಯಲಿ ಎಂಬುದೂ ಕಾಡಿನ ಜನರ ಅಪೇಕ್ಷೆ ಇರಬಹುದು.

ಅಥವಾ ಜನರಲ್ಲಿ ಇನ್ನೊಂದು ಭಯವೂ ಇರಬಹುದು. ಹಿಡಿದುಕೊಟ್ಟರೆ, ನಂತರ ಕೋರ್ಟ್ - ಜೇಲ್‌ಗೆ ಓಡಾಡಿಸುವಾಗ ಆತ ತಪ್ಪಿಸಿಕೊಂಡನೆಂದು ಸುದ್ದಿ ಮಾಡಿ, ತಮ್ಮ ಹೇಡಿತನ ಪ್ರದರ್ಶಿಸಿ, ಸಸ್ಪೆಂಡ್ ಆದರೂ, ಚಿಂತೆಯಿಲ್ಲ (ಸೇವಾವಧಿ ಪೂರೈಸಿ ನಿವೃತ್ತರಾಗಿ ಪಡೆಯುವುದನ್ನು ಮೀರಿಸುವಂತೆ ಹಣ ಪಡೆದು) ಎಂದು ವೀರಪ್ಪನ್ ತಪ್ಪಿಸಿಕೊಳ್ಳಲು ಪೋಲೀಸರು ಅವಕಾಶ ಮಾಡಿಕೊಟ್ಟರೆ ಆಗ ಸುಳಿವು

ಕೊಟ್ಟವರ ಗತಿ ಏನಾದೀತು ? ಇದನ್ನು ಊಹಿಸಿಯೂ ಯಾರೂ ಸುಳಿವು ಕೊಡುತ್ತಿರಲಿಕ್ಕಿಲ್ಲ. ಒಮ್ಮೊಮ್ಮೆ ಆ ವೀರಪ್ಪನ್ ನಡೆಸುವ ಪ್ರಾಣಿಗಳಂಥ ಜೀವನ ನೋಡಿದಾಗ ಅಯ್ಯೋ ಎನಿಸುತ್ತದೆ.ದಟ್ಟ ಕಾಡಿನಲ್ಲಿ ಅಲೆದಾಡುತ್ತ ನಿಲ್ಲಲು ನೆಲೆ ಇಲ್ಲದೆ ಎಂಥಾ ಜೀವನ ನಡೆಸುತ್ತಿದ್ದಾನೆ. ಪಾಪ, ಅವನಿಗೆ ಇಷ್ಟು ಆನೆಗಳನ್ನು ಕೊಂದು, ದಂತವನ್ನು ಮಾರಿ, ಶ್ರೀಗಂಧದ ಕಳ್ಳಸಾಗಾಣಿಕೆ ಮಾಡಿಯೂ ಒಂದು ಚೆಂದವಾದ ಮನೆ ಕಟ್ಟಲು ಆಗಿದೆಯೋ ಇಲ್ಲವೊ ? ಈ ಯಾವ ಅಪರಾಧಗಳನ್ನು ಮಾಡದೆ, ಅರಣ್ಯ ಭವನದಲ್ಲಿ ಹಾಲಿ ವಾಸ ಮಾಡುವ ಐ. ಎಫ್. ಎಸ್ ಅಧಿಕಾರಿ ಶಾಂತಪ್ಪ ಲೋಕಾಯುಕ್ತರಿಗೆ ಲೆಕ್ಕ ಸಿಕ್ಕಿರುವಂತೆ 2ಕೋಟಿ ಗಳಿಸಿದ್ದಾರಂತೆ. (ದಿ. 28-1-2001 ರ ಪತ್ರಿಕಾ ದ ವರದಿ.) ಇನ್ನು ಲೆಕ್ಕ ಸಿಗದೆ ಇಟ್ಟಿರುವುದು ಎಷ್ಟೋ. ಪಾಪ ! ವೀರಪ್ಪನ್ ಅನಾಗರಿಕ, ಶಾಂತಪ್ಪ ಐ. ಎಫ್. .ಎಸ್ ಮಾಡಿರುವ ಸುಸಂಸ್ಕ ತ ರಾಜ್ಯಮಟ್ಟದ ಗಣ್ಯ ಅಧಿಕಾರಿ.ಅದಕ್ಕೆ ಇರಬೇಕೇನೋ ಧರ್ಮಗುರು ಬಸವಣ್ಣನವರು ಹೇಳಿದ್ದು, '' ಕಳವು ಮಾಡುವವ ಕಳ್ಳನಲ್ಲ, ಕಳವು ಮಾಡಿಸಿಕೊಳ್ಳುವಂತೆ ಬಚ್ಚಿಟ್ಟುಕೊಳ್ಳುವವ ಬಲುಗಳ್ಳ '' ಎಂದು.ಕಾನೂನು ದೃಷ್ಟಿಯಲ್ಲಿ ವೀರಪ್ಪನ್ ಕ್ಷಮಾರ್ಹನಲ್ಲ.ಧರ್ಮದ ದೃಷ್ಟಿಯಲ್ಲಿ,ಮಾನವೀಯತೆಯ ದೃಷ್ಟಿಯಲ್ಲಿ,ದೇವರ ದೃಷ್ಟಿಯಲ್ಲಿ ಎಂಥವರೂ ಕ್ಷಮಾರ್ಹರು !

ಮುನ್ನ ಮಾಡಿದ ಪಾಪ ಎಂತುಹೋಹುದು ಎಂದು ಚಿಂತಿಸಬೇಡ
ಕಹಿ ಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೇ ಮೂರು ದಿವಸಕ್ಕೆ ?
ಹಲವು ಕಾಲ ಕೊಂದ ಸೂನೆಗಾರನ ಕೈಯ ಕತ್ತಿಯಾದಡೇನು
ಪರುಷ ಮುಟ್ಟಲಿಕ್ಕೆ ಹೊನ್ನಾಗದೆ ಅಯ್ಯಾ ?
ಲಲಾಟದಲ್ಲಿ ವಿಭೂತಿ ಬರಲಿಕ್ಕೆ ಪಾಪ ಪಲ್ಲಟವಾಗದೇ ಲಿಂಗದೇವಾ ? -ಬ.ವ.ದೀ 71

ಎಲವೋ ಎಲವೋ ಪಾಪ ಕರ್ಮವ ಮಾಡಿದವನೆ
ಎಲವೋ ಎಲವೋ ಬ್ರಹ್ಮ ಹತ್ಯವ ಮಾಡಿದವನೆ
ಒಮ್ಮೆ ಶರಣೆನ್ನೆಲವೋ ಒಮ್ಮೆ ಶರಣೆನ್ನೆಲವೋ
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳಾದರೆಯೂ ಸಾಲವು
ಓರ್ವಂಗೆ ಶರಣೆನ್ನು ಲಿಂಗದೇವಂಗೆ. -ಬ.ವ.ದೀ 618

ಪರಮಾತ್ಮನಿಗೆ ಶರಣಾಗುವಷ್ಟು ಸೂಕ್ಷ್ಮ ಸಂವೇದಿಯಾದ ಮನಸ್ಸು ವೀರಪ್ಪನ್‌ಗೆ ಇದೆಯೋ ಇಲ್ಲವೊ ? ಸರ್ಕಾರ ಅವಕಾಶ ಕೊಟ್ಟರೆ ಸರ್ಕಾರಕ್ಕೆ ಶರಣಾಗಬಹುದೇನೋ?

ಸರ್ಕಾರದ ದೃಷ್ಟಿಯಿಂದ ಕ್ಷಮಾದಾನ

ವೀರಪ್ಪನ ಕೈಯಲ್ಲಿ ಮಗನನ್ನು ಕಳೆದುಕೊಂಡ ನಿವೃತ್ತ ಪೋಲೀಸ್ ಅಧಿಕಾರಿ ಅಬ್ದುಲ್ ಕರೀಂ, ಶ್ರೀನಿವಾಸ್ ಎಂಬ ಸಾತ್ವಿಕ ಸ್ವಭಾವದ ಆದರ್ಶ ಪೋಲೀಸ್ ಅಧಿಕಾರಿಯ ಪತ್ನಿ ಅವರ ಒಡಲ ಸಂಕಟದ ಬೇಗೆಯಿಂದ ವೀರಪ್ಪನ್‌ಗೆ ಕ್ಷಮೆ ನೀಡಬೇಕೆಂದು ಖಂಡಿತಾ ಹೇಳಲಾರರು. ಜನರೂ ಒಪ್ಪಲಾರರು.

ಆದರೆ ಸರ್ಕಾರದ ದೃಷ್ಟಿಯಿಂದಲೂ ಕ್ಷಮಾದಾನ ಸೂಕ್ತವೇ ಸರಿ. ಇಂದು ಯಾರಿಗಾದರೂ ನಾಚಿಕೆಯಾಗುತ್ತದೆ ! ಅಧಿಕೃತ ಪರವಾನಗಿ, ಶಸ್ತ್ರಾಸ್ತ್ರ, ವಾಹನ, ಸಿಬ್ಬಂದಿ ಎಲ್ಲ ಇದ್ದೂ ಸಹ ಹಿಂದಿನ ಪ್ರಯತ್ನದಲ್ಲಿ ವೀರಪ್ಪನ್‌ನನ್ನು ಹಿಡಿಯಲು ಪೋಲೀಸ್ ಇಲಾಖೆಗೆ ಸಾಧ್ಯವಾಗಲಿಲ್ಲ. ಬಹುಶಃ ರಾಜರ ಕಾಲವೇ ಆಗಿದ್ದರೆ ಕಳ್ಳನನ್ನು ಹಿಡಿಯಲಾರದ ಪೋಲೀಸ್ ಅಧಿಕಾರಿಗಳನ್ನು ವಜಾ ಮಾಡಿ, ವೀರಪ್ಪನ್ನನ

ಚಾಕಚಕ್ಯತೆ ಕಂಡು ಮಹಾರಾಜರು ಆಹ್ವಾನ ನೀಡಿ ಗೌರವಿಸಿ ಪೋಲೀಸ್ ವರಿಷ್ಠಾಧಿಕಾರಿಯನ್ನಾಗಿ ಮಾಡುತ್ತಿದ್ದರೇನೋ ! ಈಗ ಅಂಥದಕ್ಕೆ ಅವಕಾಶವಿಲ್ಲ, ವಿದ್ಯಾರ್ಹತೆ ಬೇಕು, ಬುದ್ಧಿ - ಸಾಹಸ ಪ್ರವೃತ್ತಿ ಇಲ್ಲದಿದ್ದರೂ ಪೋಲೀಸ್ ಅಧಿಕಾರಿಯಾಗಲಿಕ್ಕೆ.

ಹಿಂದೊಮ್ಮೆ ವೀರಪ್ಪನ್‌ನನ್ನು ಬಹಳ ಕಷ್ಟಪಟ್ಟು ಹಿಡಿದಿದ್ದು ಆತ ತಪ್ಪಿಸಿಕೊಂಡು ಬಿಟ್ಟ . ಪೋಲೀಸರ ಸ್ವಭಾವದ ಪರಿಚಯವಾಗಿ, ಮೊದಲು ಇದ್ದ ಭಯ ಕರಗಿತೇನೋ, ನಂತರ ಇನ್ನಷ್ಟು ಬಲಿಷ್ಠನಾದ. ಒಬ್ಬ ಕಾಡುಗಳ್ಳನನ್ನು ಹಿಡಿಯಲು ತರಬೇತಿ ಪಡೆದ 2000 ಯೋಧರು, ಪೋಲೀಸರ ಪಡೆ ಕಾಡನ್ನು ಜಾಲಾಡುತ್ತಿದೆ. ರಂಜನೀಯವಾದ ಕಥೆಗಳನ್ನು ಪೋಲೀಸ್ ಇಲಾಖೆ ವಾರ್ತಾ ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತದೆ. ಕಾಡಿನಲ್ಲಿರುವ ಹಾಡಿ, ಹಟ್ಟಿಗಳ ಮುಗ್ಧರನ್ನು ಬಂಧಿಸಿ ವಿಚಾರಣೆ ನಡೆಸುತ್ತದೆ. ನಿಜಕ್ಕೂ ವೀರಪ್ಪನ್‌ನನ್ನು ಹಿಡಿಯುವ ಮನಸ್ಸು ಇಲಾಖೆಗೆ ಇದೆಯೇ ಎಂಬ ಶಂಕೆ ಬಹುಪಾಲು ಜನರನ್ನು ಕಾಡುತ್ತಿದೆ. ಎಷ್ಟು ಖರ್ಚು ಏನು ಕಥೆ ? ಇಷ್ಟಾದರೂ ಪೊದೆ ಬಡಿದಂತೆ ಆದರೆ ಏನು ಪ್ರಯೋಜನ ? ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳೆರಡರ ಹಣ, ಸಮಯ, ಶಕ್ತಿ ಅಪವ್ಯಯವಾಗುತ್ತಿದೆ. ಕಾಡಿನ ಜೀವಿ ವೀರಪ್ಪನ್ ಮತ್ತು ಅನುಚರರು ಕಷ್ಟಧಾರಿಗಳು. ಕಾಡಿನಲ್ಲಿ ಜಿಂಕೆ - ತೋಳಗಳಂತೆ ಹಗಲು ಇರುಳು ಸಂಚರಿಸಬಲ್ಲರು. ನಾಡಿನಲ್ಲಿ ತರಬೇತಿಗೊಂಡ ಪೋಲೀಸರಿಗೆ ನಾಗರೀಕ ಅನುಕೂಲತೆಗಳು ಬೇಕೇ ಬೇಕು. ಆದ್ದರಿಂದ ಪೋಲೀಸ್-ಕಳ್ಳ ಆಟ, ಅಂದರೆ ಪೋಲೀಸರು ಹಿಡಿಯುವ ನಾಟಕ, ವೀರಪ್ಪನ್ ತಪ್ಪಿಸಿಕೊಳ್ಳುವ ಆಟ-ಹೀಗೆಯೇ ಮುಂದುವರಿದರೆ ಪತ್ರಿಕೆಗಳ ಓದುಗರಿಗೆ ರಂಜನೀಯ ಕಥೆಗಳು ಲಭ್ಯವಾಗುವ ಲಾಭ ಬಿಟ್ಟರೆ ಸರ್ಕಾರಕ್ಕೆ ಅಪಾರ ನಷ್ಟ, ಇಷ್ಟೆಲ್ಲ ಸಲಕರಣೆ, ಸಿಬ್ಬಂದಿ ಇದ್ದೂ ಹಿಡಿಯಲಾಗಲಿಲ್ಲ ಎಂದು ಜನರಿಂದ ಅಪಹಾಸ್ಯದ ವ್ಯಂಗೋಕ್ತಿಗಳು. ಆ ವೀರಪ್ಪನ್ ಕಾಡಿನ ಹೊರಗೆ ಬಂದರೆ ಅವನ ವ್ಯವಹಾರದಲ್ಲಿ ಶಾಮೀಲಾಗಿ ಇಷ್ಟು ಪ್ರಮಾಣದಲ್ಲಿ ಬೆಳೆಯಗೊಟ್ಟ ನಾಡಿನ ಗಣ್ಯರ ಹೆಸರುಗಳನ್ನು ಎಲ್ಲಾದರೂ ಬಾಯಿ ಬಿಟ್ಟರೆ ಮುಂದೇನು ಎಂಬ ಭಯವೂ ದೇಶವನ್ನು ಆಳುವವರ ಮನದಲ್ಲಿ ಇರಬಹುದು. ಆತನೊಡನೆ ಪೂರ್ವಭಾವಿ ಮಾತುಕತೆಯಾಡಿ, ಬೇಷರತ್ ಕ್ಷಮಾದಾನ ನೀಡಿದರೆ ನಂತರ ದಿವ್ಯ ಮೌನಿಯಾಗಿ ಹೆಂಡತಿ ಮಕ್ಕಳೊಡನೆ ಸುಖವಾಗಿರಬೇಕು ಎಂಬ ಒಪ್ಪಂದಕ್ಕೆ ಬರಬಹುದು.

ಸರ್ಕಾರಕ್ಕೆ ಆಗುವ ಅನವಶ್ಯಕ ಖರ್ಚು, ಶಕ್ತಿ ಹರಣ, ಸಮಯ ಹರಣ ತಪ್ಪಿಸಬೇಕಾದರೆ ಮತ್ತು ಹಿಡಿಯಲಾರದ ಮುಖಭಂಗವನ್ನು ತಪ್ಪಿಸಿ ತನ್ನ ಗೌರವವನ್ನು ಹೆಚ್ಚಿಸಿಕೊಂಡು, ಮಾನವೀಯತೆ ಪ್ರದರ್ಶಿಸಿದ ಕೀರ್ತಿಗೆ ಪಾತ್ರವಾಗಬೇಕಾದರೆ ಕರ್ನಾಟಕ ಮತ್ತು ತಮಿಳುನಾಡಿನ ಸರ್ಕಾರಗಳಿಗೆ ಇರುವುದೊಂದೇ ರಾಜಮಾರ್ಗ, ವೀರಪ್ಪನ್‌ಗೆ ಕ್ಷಮಾದಾನ.

-ಮಾತಾಜಿ

೧೧. ದೇವ, ದೇವಾ, ಬಿನ್ನಪ, ಅವಧಾರು :
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಭಕ್ತರಾದವರನೆಲ್ಲರನೊಂದೆ ಎಂಬೆ ;
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೆ ಎಂಬೆ :
ಈ ಹೀಗೆಂದು ನಂಬುವುದೆನ್ನ ಮನವು.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ,
ನೀನಂದೇ ಮೂಗ ಕೊಯ್ಯಿ, ಲಿಂಗದೇವ.

ಜನಗಣತಿ ಇಲಾಖೆಗೆ ದಿ. 25-1-2001ರಂದು ಸಲ್ಲಿಸಿದ ಮತ್ತೊಂದು ಮನವಿ

ಮಾನ್ಯ ನಿರ್ದೇಶಕರು
ಜನಗಣತಿಯ ನಿರ್ದೇಶನಾಲಯ, ಕರ್ನಾಟಕ
7ನೆಯ ಮಹಡಿ, ಕೇಂದ್ರೀಯ ಸದನ, ಕೋರಮಂಗಲ
ಬೆಂಗಳೂರು-560034

ಮಾನ್ಯರೇ

ವಿಷಯ : 1. 2001ನೆಯ ಇಸವಿಯ ಜನಗಣತಿಯಲ್ಲಿ ಲಿಂಗಾಯತ ಧರ್ಮಾನುಯಾಯಿಗಳನ್ನು ಹಿಂದು ಧರ್ಮೀಯರ ಜೊತೆ ಸೇರಿಸದೆ ಪ್ರತ್ಯೇಕವಾಗಿ ಎಣಿಕೆ ಮಾಡಲು ಮನವಿ.
2. ಅದೇ ರೀತಿ ವೀರಶೈವ ಪಂಥೀಯರ ಜೊತೆ ಲಿಂಗಾಯತರನ್ನು ಸೇರಿಸದೆ ಪ್ರತ್ಯೇಕವಾಗಿ ಗಣತಿ ಮಾಡಲು ಮನವಿ.

--- o ---

ಈಗಾಗಲೇ ತಮಗೆ ಎರಡು ಮನವಿಗಳನ್ನು ದಿ.5-8-1999 ಮತ್ತು ದಿ. 22-5-2000ದಂದು ಸಲ್ಲಿಸಲಾಗಿದ್ದು ಅದೇ ವಿಷಯವು ಪುನರಾವರ್ತನೆಯಾಗಬಾರದೆಂದು ಅವುಗಳ ಪ್ರತಿಗಳನ್ನು ಜೊತೆಗೆ ಇಟ್ಟು, ಈಗ ವಿಶೇಷ ಮನವಿ ಸಲ್ಲಿಸಲಾಗುತ್ತಿದೆ.

1. ಲಿಂಗಾಯತವು ಹಿಂದು ಧರ್ಮದೊಳಗಣ ಒಂದು ಜಾತಿಯಲ್ಲ. ಪಂಥವಲ್ಲ ; ಅವರಲ್ಲಿ ತುಂಬಿರುವ ಅಜ್ಞಾನ ಮತ್ತು ಮಾರ್ಗದರ್ಶನದ ಕೊರತೆಯಿಂದಾಗಿ. ಧರ್ಮ (Religion) ಎಂಬ ಅಂಕಣದಲ್ಲಿ ಹಿಂದು ಎಂದು ಬರೆಸುವುದು, ಜಾತಿ (Caste) ಎಂಬ ಅಂಕಣದಲ್ಲಿ ಲಿಂಗಾಯತ ಎಂದು, ಉಪಜಾತಿ (Sub-Caste) ಎಂಬಲ್ಲಿ ತಮ್ಮ ತಮ್ಮ ಒಳ ಪಂಗಡಗಳ ಹೆಸರು ಬರೆಸುವುದು ಸಾಗಿ ಬಂದಿತು.

ದಿ. 12-11-2000ದಂದು ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದ ಲಿಂಗಾಯತ ಧರ್ಮೀಯರ ಬೃಹತ್ ಸಮಾವೇಶದಲ್ಲಿ ಮೇಲ್ಕಂಡ ತಪ್ಪನ್ನು ಸರಿ ಪಡಿಸುವ ಮಹತ್ವಪೂರ್ಣ ನಿರ್ಣಯ ಕೈಕೊಳ್ಳಲಾಯಿತಲ್ಲದೆ Religion (ಧರ್ಮ) ಎಂಬಲ್ಲಿ ಹಿಂದು ಎಂದು ಬರೆಸದೆ ಲಿಂಗಾಯತರು ಕೇವಲ ಲಿಂಗಾಯತ ಎಂದು ಬರೆಸಲು ನಿರ್ಧರಿಸಲಾಯಿತು. ಆದ್ದರಿಂದ ಮುಂಬರುವ ಜನಗಣತಿಯಲ್ಲಿ ಲಿಂಗಾಯತ ಧರ್ಮೀಯರ ಸಂಖ್ಯೆಯನ್ನು 'ಹಿಂದು' ಎಂಬ ಶೀರ್ಷಿಕೆಯಡಿಯಲ್ಲಿ ಸೇರಿಸದೆ, ಹಿಂದುಗಳೊಡನೆ ಒಟ್ಟಾಗಿ ಗಣತಿ ಮಾಡದೆ ಪ್ರತ್ಯೇಕವಾಗಿ ಗಣತಿ ಮಾಡಬೇಕೆಂದು ಕೋರುತ್ತೇವೆ. ಭಾರತ ದೇಶದಲ್ಲಿ ಹುಟ್ಟಿದ್ದರೂ ಬೌದ್ಧ, ಜೈನ, ಸಿಖ್ ಧರ್ಮಗಳು ಹೇಗೆ ಸ್ವತಂತ್ರ ಧರ್ಮಗಳೆಂದು, ಅಹಿಂದು ಧರ್ಮಗಳೆಂದು ಮಾನ್ಯತೆ ಪಡೆದಿವೆಯೋ ಅದೇ ರೀತಿ ಲಿಂಗಾಯತ ಧರ್ಮಕ್ಕೂ ಮಾನ್ಯತೆ ನೀಡಿ ತಾವು ಲಿಂಗಾಯತ ಧರ್ಮಾನುಯಾಯಿಗಳ ಸಂಖ್ಯೆಯನ್ನು ನಿಖರವಾಗಿ ಎಣಿಕೆ ಮಾಡಬೇಕೆಂದು ಕೋರುತ್ತೇವೆ.

2. ಲಿಂಗಾಯತವು 12ನೆಯ ಶತಮಾನದಲ್ಲಿ ಕ್ರಾಂತಿಪುರುಷ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಒಂದು ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ, ಪರಿಪೂರ್ಣ ಧರ್ಮ. ಇಂಥ ಧರ್ಮದೊಳಕ್ಕೆ ಅನೇಕ ಶೈವ ಪಂಥೀಯರು, ವಿವಿಧ ಜಾತಿ ಉದ್ಯೋಗಗಳವರು 12ನೆಯ ಶತಮಾನದಿಂದಲೂ ಸೇರುತ್ತಲೇ ಬಂದಿದ್ದಾರೆ. ಹಾಗೆ ಸೇರಿದವರಲ್ಲಿ ವೀರಶೈವರದೂ ಒಂದು ಗುಂಪು. ತಮಿಳು, ಆಂಧ್ರ ದೇಶಗಳ ಕೆಲವು ಭಾಗಗಳಲ್ಲಿದ್ದ ವೀರಶೈವ ಪಂಥೀಯರು ಬಂದು ಲಿಂಗಾಯತ ಧರ್ಮದ ದೀಕ್ಷೆ ಪಡೆದು ಲಿಂಗಾಯತ ಸಮಾಜವನ್ನು ಪ್ರವೇಶಿಸಿದರು.

ಅಖಿಲ ಭಾರತ ವೀರಶೈವ ಮಹಾಸಭೆ ಎಂಬ ಒಂದು ಸಂಘವನ್ನು ಲಿಂಗಾಯತ ಸಮಾಜದಲ್ಲಿದ್ದ ಕೆಲವು ಜಾತಿವಾದಿ, ಮತಾಂಧ ಸ್ವಾಮಿಗಳು ಹುಟ್ಟುಹಾಕಿ ವೀರಶೈವ ಪದಕ್ಕೆ ಒತ್ತುಕೊಡತೊಡಗಿದರು. ಇದನ್ನು ವಚನ ಸಾಹಿತ್ಯವನ್ನು ಓದಿರುವ ಪ್ರಾಜ್ಞರು ಗ್ರಹಿಸಿ ಅರ್ಥಮಾಡಿಕೊಂಡ ಬಳಿಕ ಬಸವಣ್ಣನವರು ಸ್ಥಾಪಿಸಿದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಚಿಂತನೆಯ ಲಿಂಗಾಯತ ಧರ್ಮವೇ ಬೇರೆ ವೀರಶೈವ ಮತವೇ ಬೇರೆ ಎಂಬ ದೃಢ ನಿರ್ಣಯಕ್ಕೆ ಬಂದು, ಈ ಸತ್ಯವನ್ನು ಬಹಿರಂಗವಾಗಿ ಘೋಷಿಸಲಾಗಿದೆ.

ಹಿಂದು ಧರ್ಮದಲ್ಲಿ ಎರಡು ಪ್ರಮುಖ ವಾಹಿನಿಗಳು(streams)- ವೈದಿಕ ಮತ್ತು ಶೈವ. ವೇದ ಆಧಾರಿತವಾದುದು ವೈದಿಕ, ಆಗಮ ಆಧಾರಿತವಾದುದು ಶೈವ. ಶೈವದಲ್ಲಿ ಅನೇಕ ಪ್ರಭೇದಗಳಿವೆ- ಕಾಳಾಮುಖ, ಪಾಶುಪತ, ಕಾಪಾಲಿಕ, ವೀರಶೈವ ಇತ್ಯಾದಿ. ಹೀಗಾಗಿ ವೀರಶೈವವು ಹಿಂದು ಧರ್ಮ (Religion)ದೊಳಗಣ ಶೈವ ಮತದೊಳಗಣ ಒಂದು ಪ್ರಭೇದ ಮಾತ್ರ. ಇಂದಿಗೂ ಕೇರಳ ರಾಜ್ಯದಲ್ಲಿ ಅಂಥ ವೀರಶೈವರು 16 ಲಕ್ಷದಷ್ಟಿದ್ದಾರೆಂದು ಅಂದಾಜು. ಅವರು ಹಿಂದು ಧರ್ಮದೊಳಗಣ ಒಂದು ಜಾತಿಯಾಗಿಯೇ ಗಣತಿ ಮಾಡಲ್ಪಟ್ಟು ಹಿಂದುಳಿದ ಜಾತಿ ಎಂಬ ಸವಲತ್ತನ್ನು ಕೇರಳ ರಾಜ್ಯ ಸರ್ಕಾರದಿಂದ ಪಡೆಯುತ್ತಿದ್ದಾರೆ. ಆ ವೀರಶೈವಕ್ಕೆ ತನ್ನದೇ ಆದ ಸ್ಥಾಪಕ ಪ್ರವಾದಿಯೂ ಇಲ್ಲ ; ಸ್ವತಂತ್ರ ಧಾರ್ಮಿಕ ಸಾಹಿತ್ಯವೂ ಇಲ್ಲ. ಆ ವೀರಶೈವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವಿಂಗಡಣೆ ಸಹ ಇದೆ. ಅಲ್ಲಿ ದಲಿತ(ಅಸ್ಪೃಶ್ಯ)ರಿಗೆ ದೀಕ್ಷೆಗೆ ಅವಕಾಶವೇ ಇಲ್ಲ.

ಲಿಂಗಾಯತದ ಪರಿಸ್ಥಿತಿ ಹಾಗಿಲ್ಲ. ಇದಕ್ಕೆ ಸ್ಥಾಪಕರು 12ನೆಯ ಶತಮಾನದ ದಾರ್ಶನಿಕರು, ಕ್ರಾಂತಿಪುರುಷ ಬಸವಣ್ಣನವರು. ಇದರ ಧಾರ್ಮಿಕ ಸಾಹಿತ್ಯ-ಪ್ರಾಂತೀಯ ಭಾಷೆ ಕನ್ನಡದಲ್ಲಿ ರಚನೆಯಾದ ವಚನ ಸಾಹಿತ್ಯ. ತಮಿಳುನಾಡು, ಕೇರಳಗಳಲ್ಲಿರುವ ವೀರಶೈವರಿಗೆ ಒಂದು ಸಾಂಸ್ಕೃತಿಕ ಪರಂಪರೆ (Cultural Heritage) ಇಲ್ಲ. ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಲಿಂಗಾಯತ ಸಮಾಜಕ್ಕೆ ಬಸವಣ್ಣನವರೇ ಆದಿ ಗುರುವಾಗಿ (Primordial Guru) ಹರಿದು ಬಂದ ಶರಣರ ಪರಂಪರೆ ಇದೆ. ಲಿಂಗಾಯತ ಧರ್ಮವು ಚತುರ್ವರ್ಣ ವ್ಯವಸ್ಥೆಯನ್ನು, ಜಾತಿ ಪದ್ಧತಿ, ಅಸ್ಪೃಶ್ಯತಾ ಆಚರಣೆಯನ್ನು ನಿರಾಕರಿಸುತ್ತದೆ. 1991ನೆಯ ಜನಗಣತಿ ಸಮಯಕ್ಕೆ ಲಿಂಗಾಯತ ಸಮಾಜದಲ್ಲಿ ಹೆಚ್ಚಿನ ಜ್ಞಾನ ಉಂಟಾಗಿರಲಿಲ್ಲ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಮಗ್ರ ವಚನ ಸಾಹಿತ್ಯವನ್ನು 15 ಸಂಪುಟಗಳ ಮೂಲಕ ಬೆಳಕಿಗೆ ತಂದ ಮೇಲೆ ಲಿಂಗಾಯತ ಧರ್ಮದ ವೈಶಿಷ್ಟ್ಯ ದೃಗ್ಗೋಚರವಾಗುತ್ತಿದೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಪ್ರಮುಖವಾಗಿ, ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಆಂಧ್ರ, ತಮಿಳುನಾಡು, ಗೋವಾ ಮತ್ತು ದೆಹಲಿಯಲ್ಲಿ ಗಣನೀಯ ಸಂಖ್ಯೆಯಲ್ಲಿ, ಭಾರತದ ಇನ್ನಿತರ ರಾಜ್ಯಗಳಲ್ಲಿ, ಹೊರ ರಾಷ್ಟ್ರಗಳಲ್ಲಿ ಚದುರಿದಂತೆ ಇರುವ, ಗೋಲಾಕಾರದ ಇಷ್ಟಲಿಂಗಧಾರಣೆಯನ್ನು ಮಾಡುವ ಲಿಂಗಾಯತರು ಖಂಡಿತವಾಗಿಯೂ ವೀರಶೈವರಲ್ಲ. ಶೈವ ಶಾಖೆಗಳಲ್ಲಿ ಒಂದಾದ ವೀರಶೈವದ ಅನುಯಾಯಿಗಳಾದ ವೀರಶೈವರು ಕೇರಳ, ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ಲಿಂಗಾಯತದಿಂದ ಬೇರೆಯೇ ಆದ ವಿಚಾರ-ಆಚಾರ ನಂಬಿಕೆ ಹೊಂದಿ ಇರುವುದರಿಂದ 2001ರ ಜನಗಣತಿಯಲ್ಲಿ ಲಿಂಗಾಯತ ಮತ್ತು ವೀರಶೈವರ ಸಂಖ್ಯೆಯನ್ನು ಜೊತೆಗೂಡಿಸಿ ಲೆಕ್ಕ ಮಾಡಬಾರದೆಂದು, ಲಿಂಗಾಯತ ಮತ್ತು ವೀರಶೈವರ ಜನ ಸಂಖ್ಯೆಯನ್ನು ಪ್ರತ್ಯೇಕವಾಗಿ ದಾಖಲೆ ಮಾಡಬೇಕೆಂದು ಗಂಭೀರವಾದ ಕೋರಿಕೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಈ ದಿಶೆಯಲ್ಲಿ ನಮ್ಮದೊಂದು ಪ್ರಾಯೋಗಿಕ ಸಲಹೆ :

1. ಜನಗಣತಿಯ 8ನೆಯ ಕಾಲಂದಲ್ಲಿ ಮತ/ಪ್ರಶ್ನೆಗೆ ಉತ್ತರವಾಗಿ ಲಿಂಗಾಯತ ಎಂದು ಬರೆಸಿದವರನ್ನು

(Religion) ಲಿಂಗಾಯತ ಎಂದು, ವೀರಶೈವ ಎಂದು ಬರೆಸಿದವರನ್ನು ವೀರಶೈವ ಎಂದು ಗಣತಿ ಮಾಡಬೇಕು.

2. ಸಾಕಷ್ಟು ತಿಳುವಳಿಕೆಯಿಲ್ಲದೆ ಹಿಂದು ಲಿಂಗಾಯತ ಎಂದು ಯಾರಾದರೂ ಹೇಳಿದರೆ ಆಗ ಗಣತಿಕಾರರು ಕೇವಲ ಲಿಂಗಾಯತ ಎಂದು ದಾಖಲೆ ಮಾಡಿಕೊಳ್ಳಬೇಕು. ಒಂದು ವೇಳೆ ಗಣತಿಕಾರರು ಹಿಂದು ಲಿಂಗಾಯತ ಎಂದು ಬರೆದರೂ, ತಾವು ವರ್ಗೀಕರಣ ಮಾಡುವಾಗ ಲಿಂಗಾಯತರನ್ನು ಪ್ರತ್ಯೇಕ ಧರ್ಮಾನುಯಾಯಿಗಳೆಂದು ಎಣಿಕೆ ಮಾಡಬೇಕು.

3. ದೆಹಲಿಯ ಜನಗಣತಿಯ ಕಾರ್ಯಾಲಯದಿಂದ ಬಂದ ಪತ್ರ (ಪತ್ರ ಸಂಖ್ಯೆ : Ref :9/16/77-CD(CFN)pt ದಿನಾಂಕ : 19 ಜುಲೈ 1980)ವನ್ನು ವೀರಶೈವ ಮಹಾಸಭೆಯವರು ಮುಗ್ಧ ಜನರಿಗೆ ತೋರಿಸುತ್ತಾ ಜನಗಣತಿಯ ನಿರ್ದೇಶನಾಲಯದವರು ವೀರಶೈವ/ಲಿಂಗಾಯತ ಎಂದು ಬರೆಸಿರಿ ಎಂದು ಆದೇಶ (order) ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಲಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಸುಳ್ಳು ಪ್ರಚಾರವನ್ನು ನಂಬಿ ಯಾರಾದರೂ ವೀರಶೈವ/ಲಿಂಗಾಯತ ಅಥವಾ ಲಿಂಗಾಯತ/ವೀರಶೈವ ಎಂದು ಬರೆಸಿದರೆ ಆಗ ಅಂಥ ಇನ್ನೂ ಎರಡು ಗುಂಪುಗಳನ್ನು ಸೃಷ್ಟಿಸದೆ ಮೊದಲ ಪದ ವೀರಶೈವ ಎಂದಿದ್ದರೆ ಅದನ್ನು ಮಾತ್ರ, ಮೊದಲ ಪದ ಲಿಂಗಾಯತ ಎಂದಿದ್ದರೆ ಅದನ್ನು ಮಾತ್ರ, ಸ್ವೀಕರಿಸಿ, ಎರಡನೆಯ ಪದವನ್ನು ಬಿಟ್ಟು ವರ್ಗೀಕರಿಸಬೇಕು. ಆಗ ಮಾತ್ರ ಲಿಂಗಾಯತ ಧರ್ಮಾನುಯಾಯಿಗಳ ಸಂಖ್ಯೆ ನಿಖರವಾಗಿ ಸಿಗಲು ಸಾಧ್ಯ. ಈ ದಿಶೆಯಲ್ಲಿ ತಾವು ಆಸಕ್ತಿ ವಹಿಸಿ ಗಣತಿದಾರರಿಗೆ ಲಿಂಗಾಯತ ಧರ್ಮದ ಬಗ್ಗೆ ಯಥಾವತ್ತಾಗಿ ದಾಖಲಿಸಲು ಆದೇಶ ನೀಡುವಿರಾಗಿ ನಂಬಿದ್ದೇವೆ.

ಈ ವಿಷಯವಾಗಿ ಬೇರೆ ಯಾರ ಜೊತೆಗೂ ಸೇರಿಸದೆ "ಲಿಂಗಾಯತ" ಧರ್ಮೀಯರ ಸಂಖ್ಯೆಯನ್ನು ಮಾತ್ರ ಲೆಕ್ಕ ಮಾಡಿಕೊಡಬೇಕೆಂದು ಕೋರಿ ದೆಹಲಿಯ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಅವರಿಗೆ ಬೇಡಿಕೆ ಸಲ್ಲಿಸಿ ಅದರ ಪ್ರತಿಯನ್ನು ತಮಗೆ ಇಟ್ಟಿದ್ದೇವೆ.

ಕರ್ನಾಟಕದ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ಪರಿಸ್ಥಿತಿಯ ಬಗ್ಗೆ ಪೂರ್ಣ ಮಾಹಿತಿ ಹೊಂದಿರುವ ತಾವು ಈ ವಿಷಯದಲ್ಲಿ ಶಿಫಾರಸು ಮಾಡಿ 2001ರ ಜನಗಣತಿಯಲ್ಲಿ ಲಿಂಗಾಯತ ಧರ್ಮಾನುಯಾಯಿಗಳ ಸಂಖ್ಯೆ ನಿಖರವಾಗಿ ಲಭ್ಯವಾಗುವಂತೆ ಮಾಡಬೇಕೆಂದು ವಿನಂತಿಸುತ್ತೇವೆ.

ಎನ್. ಪುಟ್ಟರುದ್ರ
ಕಾರ್ಯಾಧ್ಯಕ್ಷರು
ಲಿಂಗಾಯತ ಧರ್ಮ ಮಹಾಸಭಾ
ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಗೌರವಾಧ್ಯಕ್ಷರು
ಲಿಂಗಾಯತ ಧರ್ಮ ಮಹಾಸಭಾ
ಬೆಂಗಳೂರು

ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲ ಸಿದ್ಧ ಮಲ್ಲಿಕಾರ್ಜುನಾ

ಡಿಸೆಂಬರ್- ಜನವರಿ ತಿಂಗಳಲ್ಲಿ ಕಾಣಿಕೆ ಸಲ್ಲಿಸಿದ ದಾಸೋಹಿಗಳ ವಿವರ

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ,

ಶರಣರುಗಳಾದ :

1. ಎಂ.ನಾಗರಾಜು, ಮೈಸೂರು - ಸಮುದಾಯ ಕೋಣೆಗೆ ರೂ. 1.00.000
2. ಸಿ.ಎಂ.ರಾಜಣ್ಣ, ಸಾಸ್ವಾಡ, ಮಹಾರಾಷ್ಟ್ರ - ಸಮುದಾಯ ಕೋಣೆಗೆ ರೂ. 1.00.000
3. ಡಾ|| ಇಂದುಧರ್, ಚಿತ್ರದುರ್ಗ - ಡಬ್ಬಲ್ ಕೋಣೆಗೆ ರೂ. 71.000
4. ಶಿವಾನಂದ ಮಾನ್‌ಕರ್, ಪೆಂಡಾಲ್ ಕಂಟ್ರ್ಯಾಕ್ಟರ್, ಬಿಜಾಪುರ ರೂ. 75.000
5. ಮಹಾರಾಷ್ಟ್ರದ ಉದಗೀರಿನ ಶರಣ ಬಂಧುಗಳು ಸೇರಿ ಡಬ್ಬಲ್ ಕೋಣೆಗಾಗಿ ರೂ. 71.000

   ಚಂದ್ರಕಲಾ ಚನ್ನಬಸಯ್ಯ ಸ್ವಾಮಿ
   ಸುನೀತಾ ಉಮಾಕಾಂತ ಚಿಲ್ಲರ್ಗೆ
   ಜಮುನಾ ವಿಜಯಕುಮಾರ್ ಅಂಬೆಸಂಗೆ
   ಪಂಚಯ್ಯ ಸ್ವಾಮಿ
   ಶೋಭಾ ಚಂದ್ರಕಾಂತ್ ಪಾಟೀಲ್
   ಲಕ್ಷ್ಮಿಬಾಯಿ ವಿಶ್ವನಾಥ ಪಾಂಡ್ರೆ
   ಭಾರತೀಬಾಯಿ ಡೋಬಳೆ

6. ಬೀದರಿನ ಶರಣ ಬಂಧುಗಳು ಸೇರಿ ಡಬ್ಬಲ್ ಕೋಣೆಗೆ : ರೂ. 71,000

   ಜಗದೇವಿ ವಿಶ್ವನಾಥ ಪಾಟೀಲ್
   ಲಕ್ಷ್ಮಿ ಮಲ್ಲಯ್ಯ ಸ್ವಾಮಿ
   ಮಹಾದೇವಿ ಮಲ್ಲಿಕಾರ್ಜುನ ಮಾಲಗೆ
   ಮಹಾದೇವಿ ಮಲ್ಲಿಕಾರ್ಜುನ ಜೇಲರ್
   ಇಂದುಮತಿ ಚನ್ನಬಸಪ್ಪ ತಗಾರೆ
   ಶಕುಂತಲಾ ವಿಶ್ವನಾಥ ಬಿರಾದಾರ
   ಸರೋಜಿನಿ ಗಂಗಾಧರ ಪಾಟೀಲ
   ಸುಭದ್ರಾ ಅಡಿವೆಪ್ಪಾ ಪಟ್ನೆ
   ಸುನಂದಾ ಭೀಮರಾವ ಪೋಲೀಸ್ ಪಾಟೀಲ

7. ಶಾಂತಪ್ಪ ನೂರೊಂದಪ್ಪ ಕಾಳಗಿ, ಅಮೀನಗಡ ಸಿಂಗಲ್ ಕೋಣೆಗೆ ರೂ. 50.000
8. ವಿನಯ ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ ರೂ. 50.000
9. ನೀಲಕಂಠ ಬಸಪ್ಪ ಪಾಪಡೆ, ಕೋಲಾರ ರೂ. 10.000
10. ವೀರಭದ್ರಪ್ಪ ಕೊರ್ಲ್ಹಳ್ಳಿ, ಕೊಪ್ಪಳ ರೂ. 50.001
11. ಮರಿಬಸಪ್ಪ ದನದಮನಿ, ಧಾರವಾಡ ರೂ. 50.000

ಶರಣ ಮೇಳದ ದಾಸೋಹದ ಪುದುವಟ್ಟಿಗೆ

ಶರಣರುಗಳಾದ :

ಡಾ|| ಚೆಂಗಲಪ್ಪ, ಪನರೂಟಿ, ತಮಿಳುನಾಡು ರೂ. 10.001
ಸಿ.ಎಂ. ರಾಜಣ್ಣ, ಸಾಸ್ವಾಡ, ಮಹಾರಾಷ್ಟ್ರ ರೂ. 10.001

ಪಿ.ಎಂ. ಬೆಲ್ಲದ, ಬೈಲಹೊಂಗಲ
ಎಸ್. ಮಲ್ಲಿಕಾರ್ಜುನಯ್ಯ. ತುರುವೇಕೆರೆ ರೂ. 5001
ಕಾಶಪ್ಪ.ಗು.ನೂಲ್ವಿ, ಹುಬ್ಬಳ್ಳಿ ರೂ. 5001
ಸಿದ್ಧಗೌಡ ಗೌಡಪ್ಪನವರ್, ಶೇಗುಣಸಿ ರೂ. 10.001
ದೀಪಕ್ ಸುಭಾಷ್ ಹಿರೇಮಠ, ಮಹಾರಾಷ್ಟ್ರ (ಬಾರ್ಸಿ) ರೂ. 5001
(ಮಗುವಾಗಿದ್ದಕ್ಕೆ ಸಂಕಲ್ಪ ಪೂರೈಸಿ) ರೂ. 5001

ಧರ್ಮಗ್ರಂಥ ನಿಧಿ

ಶರಣ. ಡಾ|| ಬಾಲಚಂದ್ರ ಬಸಪ್ಪ ಬೆಳಕಂಡಿ, ಜಮಖಂಡಿ ರೂ. 10.000
ಶರಣೆ. ಲಲಿತಾ ಪ್ರಭು ಕಲಘಟಗಿ, ರಾಯರ ಹೆಬ್ಬಳ್ಳಿ ರೂ. 1001
ಶರಣ. ದೀಪಕ್ ಸುಭಾಷ್ ಹಿರೇಮಠ, ಬಾರ್ಸಿ, ಮಹಾರಾಷ್ಟ್ರ ರೂ. 2001
ಶರಣ. ಬಿ.ಬಿ.ಲಕ್ಷ್ಮೇಶ್ವರ, ಹುಬ್ಬಳ್ಳಿ ರೂ. 1000
ಶರಣ. ನಾಗಶೆಟ್ಟಿ ಕಾಳಗಿ, ಶಹಾಬಾದ ರೂ. 1000

ಶರಣ ಮೇಳದ ದಾಸೋಹಕ್ಕೆ

ಶರಣರುಗಳಾದ :
ಸಿ.ಬಿ.ಬೇವನೂರು, ಬಿಜಾಪುರ
ಎಸ್.ಟಿ.ಚಂದ್ರಶೇಖರಪ್ಪ, ಸಿದ್ಧರಾಮನ ಹಳ್ಳಿ ರೂ. 5001
ವಿಜಯಾ ನಂಜುಂಡಪ್ಪ, ದಾವಣಗೆರೆ.(ಸಂಕಲ್ಪ ಪೂರೈಸಿದ್ದಕ್ಕೆ) ರೂ. 5001
ಜಿ.ಧನರಾಜ್, ಹೈದರಾಬಾದ್ ರೂ. 5001
ಸುಭಾಷ್ ಪಾಟೀಲ್, ಹೈದರಾಬಾದ್ ರೂ. 5001
ಬಸವರಾಜಪ್ಪ, ಬಸವೇಶ್ವರ ರೈಸ್‌ಮಿಲ್, ಶಿರಗುಪ್ಪ ರೂ. 5001
ಪುಷ್ಪಾ ಸಿದ್ಧರಾಮಪ್ಪ ಪಾಟೀಲ್, ಬೆಂಗಳೂರು ರೂ. 5001
ಜಯರಾಜ್ ವಕೀಲರು, ಬೆಂಗಳೂರು. ರೂ. 5001
ಹಾವಶೆಟ್ಟಿ ಸಂಗ್ರಾಮಪ್ಪ ಪಾಟೀಲ, ಹಾರೂರಗೇರಿ ರೂ. 5001
ರೂ. 5000

ದಾಸೋಹ ನಿಧಿಗೆ 1111-00 ರೂಪಾಯಿ ಸಲ್ಲಿಸಿದವರು

ಎಂ.ಎಸ್. ಹಾವೇರಿ, ಹುಬ್ಬಳ್ಳಿ
ಅನಂತಮ್ಮ ಮೂಡ್ಲಗಿರಿ, ದಾವಣಗೆರೆ
ಸಿ.ಎಸ್. ಬಿಂದು, ಗನ್ನಾಯ್ಕನ ಹಳ್ಳಿ
ಎನ್.ಸಿ. ಕಲಭಾವಿ, ಧಾರವಾಡ
ನಾಗಪ್ಪ ಚನ್ನಮಲ್ಲಪ್ಪ ಅಂಗಡಿ, ಯರಗಟ್ಟಿ
ಸೋಮಲಿಂಗಪ್ಪ ಬಸಪ್ಪ ಜಕಾತಿ, ಯರಗಟ್ಟಿ
ಡಾ|| ಕಾಶೀನಾಥ್ ಬಸವ ಪ್ರಭು ಅಂಗಡಿ, ಯರಗಟ್ಟಿ
ಸುನಂದ.ಎ.ಸಿದ್ನಾಳ, ಬೆಳಗಾಂವ
ಮಹಾದೇವಪ್ಪ ವೀರಪ್ಪ ಕೋರಿ, ಬೆಳಗಾಂವ
ಮಂಗಳಮ್ಮ, ಸಿ.ನಂದಿಹಳ್ಳಿ

ವಿ. ಪಂಚಾಕ್ಷರಿ, ಸಿ.ನಂದಿಹಳ್ಳಿ
ಕೆ. ಶಂಕರಪ್ಪ, ನೊಣವಿನಕೆರೆ
ಎನ್.ಎಸ್.ಪರಮೇಶ್ವರಪ್ಪ, ನಾಗರಾಳು
ಪಟೇಲ್ ಚಂದ್ರೇಗೌಡರು, ನಾಗರಾಳು
ಆರ್. ಚಂದ್ರಪ್ಪ, ನಾಗರಾಳು
ಎನ್.ಎಸ್. ಮಹಾದೇವಪ್ಪ, ನಾಗರಾಳು
ಬಿ. ಜಯಪ್ಪ, ಶಿವಮೊಗ್ಗ
ಉಷಾ.ಬಿ.ಆರ್.ವಿಶ್ವನಾಥ, ಶಿವಮೊಗ್ಗ
ಎಸ್.ಎಂ. ನಾಗರಾಜಪ್ಪ, ಶಿವಮೊಗ್ಗ
ಜಿ.ವಿ. ಪ್ರಸಾದ, ಬೆಂಗಳೂರು
ಶೈಲಾ ರುದ್ರಯ್ಯ ಹಿರೇಮಠ, ಗೋಕಾಕ
ಶೈಲಾ ರುದ್ರಯ್ಯ ಹಿರೇಮಠ, ಗೋಕಾಕ
ಕಾಶವ್ವ ಶಿವಮೂರ್ತಯ್ಯ ಕೊಳ್ಳೂರ ಮಠ, ಗೋಕಾಕ
ಜಿ.ವಿ. ಪ್ರಸಾದರಾವ್, ಗಾಂಧಿ ನಗರ
ಹೋಟೆಲ್ ರಾಜು, ಕೆ.ಆರ್.ನಗರ
ಹೆಚ್.ಸಿ. ರಾಜಣ್ಣ, ಹಂಪಾಪುರ
ವೆಂಕನಗೌಡ ರಾಮನಗೌಡ ಮಾಗಿ, ಹೊನ್ನರಹಳ್ಳಿ
ಅರುಣ ಶಂಕರ್ ಖಾಡ್, ಇಚಲಕರಂಜಿ
ಶಿವಾನಂದ ಚಂದ್ರಕಾಂತ್ ಸ್ವಾಮಿ, ಇಚಲಕರಂಜಿ
ರಾವ್ ಸಾಹೇಬ್ ಮಲ್ಲಪ್ಪ ಶಿರಢೋಣ, ಶೆಡಶ್ಯಾಳ
ಬಾಪೂರಾಯ ದುಂಡಪ್ಪ ಮಮದಾಪುರೆ, ನಿಡೋಣಿ
ರಾಜಕುಮಾರ್ ಲೋಯಾ, ಹೈದರಾಬಾದ
ಎನ್. ಪರಮೇಶ್ವರಪ್ಪ, ಹೊಸಕೆರೆ
ಸಂಗನಗೌಡ ವೆಂಕನಗೌಡ ಪಾಟೀಲ್, ಮರೋಳ
ಸಂಗಪ್ಪ ಲಿಂಗಪ್ಪ ಎಮ್ಮಿ
ಡಾ|| ಕಿರಣ ಶಂಕರಪ್ಪ ಹತ್ತಿ, ಗಡಹಿಂಗ್ಲಾಜ್
ಮಧುಕರ್‌ರಾವ್ ನಿರಂಜನಪ್ಪ ಶೆಟಗಾರ, ನಾರಾಯಣ ಖೇಡ್
ಗಂಗಾಧರ ಪಾಟೀಲ್, ಬೀದರ
ಗಿರಿಜಮ್ಮ ಬಸವಣ್ಣೆಪ್ಪ ದುಂಡಿ, ಧಾರವಾಡ
ಡಾ|| ಎಂ. ರಮೇಶ್ (ಸಂಕಲ್ಪ ಪೂರೈಸಿದ್ದಕ್ಕೆ)
ಡಾ|| ಎಂ. ಕೃಷ್ಣ ಸುಮಂತ್ (ಸಂಕಲ್ಪ ಪೂರೈಸಿದ್ದಕ್ಕೆ)
ಜಯಶ್ರೀ ಹಾವಗಿರಾವ್ ಖೆಳಗೆ, ನಿಡೋದಾ
ಎಂ.ಜಿ. ಅಡಕಿಹಾಳ್, ಬಾಗಲಕೋಟೆ
ಚಂದ್ರಶೇಖರ.ಬಿ.ಬಡಿಗೇರ,ಮುಳವಾಡ
ಮಲಗೊಂಡ ರಾಯಗೊಂಡ ಪಾಟೀಲ, ಧರಣಗುತ್ತಿ
ಎಂ.ಪಿ. ಭೈರಣ್ಣವರ, ನರೇಂದ್ರ
ಬಸವ ಪ್ರಭು ಗುರುಬಸವ ಧೂಪದ, ಬಿಜಾಪುರ.

ಲಿಂಗಾಯತ ಧರ್ಮ ಜಾಗೃತಿ ಯಾತ್ರೆ

ಸಂಘಟನೆಯಲ್ಲಿ ಶಕ್ತಿ ಇದೆ. ಸಂಘಟನೆಯನ್ನು ಬಲಪಡಿಸುವುದರ ಜೊತೆಗೆ ಸಂಸ್ಕಾರವನ್ನು ಧರ್ಮಾನುಯಾಯಿಗಳಿಗೆ ನಿರಂತರವಾಗಿ ನೀಡಬೇಕು. ಲಾರಿ, ಟೆಂಪೋ ವ್ಯವಸ್ಥೆ ಮಾಡಿ ಜನರನ್ನು ಸೇರಿಸಿ ಸಭೆ ಮಾಡಿದರೆ ಅದು ಸಂಘಟನೆಯಲ್ಲ. ಒಂದು ಧ್ಯೇಯಕ್ಕೆ ಬದ್ಧರಾಗಿ ಜನರು ಸ್ವಯಂಪ್ರೇರಣೆಯಿಂದ ಬಂದು ಭಾಗಿಗಳಾಗಬೇಕು. ಹೀಗೆ ಆಗಬೇಕಾದರೆ ವಾರಕ್ಕೊಮ್ಮೆ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆ ನಡೆಸಿರಿ. ಆಗಾಗ ಶರಣ ಸಮಾಗಮ ನಡೆಸಿರಿ. ನಿಮ್ಮ ಮನೆಯಲ್ಲಿ ಗೃಹಪ್ರವೇಶ, ವಿವಾಹ, ನಾಮಕರಣ, ಲಿಂಗೈಕ್ಯರ ಗಣಾರಾಧನೆ, ಅಂಗಡಿ ವಾರ್ಷಿಕೋತ್ಸವ ಮುಂತಾದ್ದು ಇದ್ದಾಗ ಕೇವಲ ಗಣ ಪ್ರಸಾದ (ಊಟ . ಭೋಜನ) ದ ವ್ಯವಸ್ಥೆ ಅಷ್ಟೇ ಮಾಡದೆ ಜ್ಞಾನ ದಾಸೋಹ ಮಾಡುವ ಪರಿಪಾಠ ಇಟ್ಟುಕೊಳ್ಳಿರಿ. ನಿಮ್ಮ ಶಕ್ತ್ಯಾನುಸಾರ ವಚನ ಸಾಹಿತ್ಯದ ಹೊತ್ತಿಗೆಗಳನ್ನು ಮುದ್ರಿಸಿ ಹಂಚಿರಿ. ಧರ್ಮಕರ್ತ ಬಸವಣ್ಣನವರು ಮತ್ತು ಆದಿ ಶರಣರ ಸಂಕಲ್ಪ ಪೂರೈಸಬೇಕಾದ ಹೊಣೆಗಾರಿಕೆ ನಮ್ಮ - ನಿಮ್ಮೆಲ್ಲರ ಮೇಲೆ ಇದೆ.

ಧನ ದಾಸೋಹಕ್ಕೆ ಕರೆ

ಬಸವ ಧರ್ಮ ಪೀಠವು ಸದಾ ನಿಮಗೆ ಮಾರ್ಗದರ್ಶನ ಮಾಡಲು ಸನ್ನದ್ಧವಾಗಿದೆ. ಧರ್ಮಕ್ಷೇತ್ರ ಕೂಡಲ ಸಂಗಮವನ್ನು ಸರ್ವಾಂಗೀಣವಾಗಿ ಬೆಳೆಸುವ ಸಂಕಲ್ಪ ಹೊತ್ತು ಕಾರ್ಯೋನ್ಮುಖವಾಗಿದೆ. ಈ ದಿಶೆಯಲ್ಲಿ ತಾವು ವಿವಿಧ ರೀತಿಯಲ್ಲಿ ಧನ ದಾಸೋಹ ಮಾಡಬಹುದು.

1. ಈ ರೀತಿಯ ಕರಪತ್ರಗಳನ್ನು ಮುದ್ರಿಸಲು ಧನ ಸಹಾಯ ಮಾಡುವುದು ಮತ್ತು ಕರಪತ್ರಗಳನ್ನು ಬಂಧುಮಿತ್ರರಿಗೆ ವಿತರಿಸುವುದು.

2. ಕೂಡಲ ಸಂಗಮದ ಮಹಾಮನೆ ಮಹಾಮಠಗಳಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಕಾಮಗಾರಿಗೆ ಕೈಲಾದಷ್ಟು ಕಾಣಿಕೆ ಸಲ್ಲಿಸುವುದು. ಪ್ರವಚನ ಮಂಟಪವು ಸಿದ್ಧವಾಗುತ್ತಿದ್ದು ಯಥಾಶಕ್ತಿ ಕಾಣಿಕೆ ಸಲ್ಲಿಸಲು ಅವಕಾಶ ಉಂಟು.

3. ಪ್ರವಾಸಿಗರ ಸಂಖ್ಯೆ ವಿಪರೀತ ಏರುತ್ತಿದೆ. ದಾನಿಗಳ ನೆರವಿನಿಂದ ಅಕ್ಕನಾಗಲಾಂಬಿಕಾ ಶರಣ ಧಾಮ, ಸರ್ವಜ್ಞ ಶರಣ ಧಾಮ ಸಿದ್ಧವಾಗಿದ್ದರೂ ಆಗಮಿಸುವ ಯಾತ್ರಾರ್ಥಿಗಳ ಸಂಖ್ಯೆಗನುಗುಣವಾಗಿ ವಸತಿ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಒಂದು ಬಸ್ಸಿನ ಜನರು ಒಟ್ಟಾಗಿ ಉಳಿಯುವಂತಹ ವಿಶಾಲವಾದ ಕೋಣೆಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಒಂದು ಲಕ್ಷ ರೂ. ಗಳನ್ನು ಕೊಟ್ಟ ದಾಸೋಹಿಗಳ ಹೆಸರಿನ ನಾಮಫಲಕಗಳನ್ನು ಅಂಥ ಸಮುದಾಯ ಕೋಣೆಗಳಿಗೆ ಹಾಕಲಾಗುವುದು. ತಾವು ಕೊಡಬಹುದು. ಅಂಥ ದಾನಿಗಳು ಇದ್ದರೆ ಅವರಿಗೆ ಪ್ರೇರಣೆ ನೀಡಿ ದೇಣಿಗೆ ಕೊಡಿಸಬಹುದು.

4. ಶರಣ ಮೇಳಕ್ಕೆ ವಯಸ್ಸಾದವರು, ಹೆಣ್ಣುಮಕ್ಕಳು, ಸಣ್ಣ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಕಾರಣ ಅವರುಗಳು ನದಿಯವರೆಗೆ ಹೋಗಿ ಸ್ನಾನ ಮಾಡಿ ಬರಲು ಬಹಳ ಆಯಾಸಪಡುವರು. ಇಂಥವರಿಗಾಗಿ ಮಹಾಮನೆಯ ಶರಣ ಲೋಕದಲ್ಲೇ ಒಂದು ಕಲ್ಯಾಣಿಯನ್ನು (ನೀರಿನ ಕೊಳವನ್ನು) ನಿರ್ಮಿಸಿ ಅನುಕೂಲ ಮಾಡಿಕೊಡಲು ಯೋಜನೆ ರೂಪಿಸಲಾಗಿದೆ. ಇದಕ್ಕೂ ತಮ್ಮ ಶಕ್ತ್ಯಾನುಸಾರ ಕಾಣಿಕೆ ನೀಡಲು ಅವಕಾಶವಿದೆ. 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಸೌಲಭ್ಯ ಸಹ ಇದೆ.

5. ಪ್ರತಿ ವರ್ಷದ ಜನವರಿ ೧೧ರಿಂದ ೧೫ರವರೆಗೆ ನಡೆಯುವ ಶರಣ ಮೇಳದ ದಾಸೋಹಕ್ಕೆ ಪುದುವಟ್ಟು ಇಡಲು ರೂ. ೫೦೦೦, ರೂ. 10,000 ಹೀಗೆ ದಾಸೋಹ ನಿಧಿಗೆ ಕೊಡಬಹುದು.

6. ಮಹಾಮನೆ ಮಹಾಮಠದಲ್ಲಿ ನಡೆಯುವ ನಿತ್ಯ ದಾಸೋಹ ನಿಧಿಗೆ 1111-00, ಪೂಜಾ ನಿಧಿಗೆ 501 ರೂ. ಕೊಟ್ಟರೆ ಅವರ ಹೆಸರಿನಲ್ಲಿ ಪೂಜೆ, ದಾಸೋಹ ಮಾಡಿಸಿ ಪ್ರಸಾದವನ್ನು ಅಂಚೆಯಲ್ಲಿ ಕಳಿಸಲಾಗುವುದು. ತನುಮನಧನಗಳಿಂದ ನೆರವು ನೀಡಲು ಕೋರುತ್ತೇವೆ.

ಕೂಡಲ ಸಂಗಮ - 587115

20-1-2001

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ



ದಾವಣಗೆರೆಯ ರಾಷ್ಟ್ರೀಯ ಬಸವ ದಳ ಘಟಕದ ಉದ್ಘಾಟನೆ
ಜನತಾವಾಣಿ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಹೆಚ್. ಎನ್. ಷಡಕ್ಷರಪ್ಪ ಅವರಿಂದ



ದಾವಣಗೆರೆಯ ರಾಷ್ಟ್ರೀಯ ಬಸವ ದಳ ಮತ್ತು
ದಾವಣಗೆರೆಯ ರಾಷ್ಟ್ರೀಯ ಬಸವ ದಳ ಮತ್ತು

With Best Compliments From



ಕಲ್ಯಾಣ ಕಿರಣ CPMG/KA/BGW-50 ಜನವರಿ - 2001
R.NO. 19980/70 WPP (W) - 17